ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಐಕ್ಯರಂಗ

ಸಂಪುಟ 17 | ಸಂಚಿಕೆ 52 | ರೂ. 2.00 | 24 ಡಿಸೆಂಬರ್ 1995

ಚುನಾವಣೆಯಲ್ಲಿ ಧರ್ಮದ ದುರುಪಯೋಗಕ್ಕೆ ಪ್ರೋತ್ಸಾಹ ನೀಡಿರುವ ಸುಪ್ರೀಂಕೋರ್ಟ್ ತೀರ್ಪು

ಮುಂಬೈ ಹೈಕೋರ್ಟು ಮಹಾರಾಷ್ಟ್ರದ ಮುಖ್ಯಮಂತ್ರಿ ಮನೋಹರ ಜೋಷಿಯವರ ವಿರುದ್ಧ ನೀಡಿದ್ದ ಅವರ ಚುನಾವಣಾ ಸಂಬಂಧದ ತೀರ್ಪನ್ನು ಸುಪ್ರೀಂಕೋರ್ಟ್ ಡಿಸೆಂಬರ್ 11ರಂದು ವಜಾ ಮಾಡಿದೆ. ಅಲ್ಲದೆ "ಹಿಂದೂ ರಾಷ್ಟ್ರದ ಸ್ಥಾಪನೆಯ ಮಾತನಾಡಿದ ಅವರ ಚುನಾವಣಾ ಪ್ರಚಾರ ಭಾಷಣ ಜನತಾ ಪ್ರಾತಿನಿಧ್ಯ ಕಾನೂನಿನ ಪ್ರಕಾರ ಭ್ರಷ್ಟ ಚುನಾವಣಾ ಆಚರಣೆ ಆಗುವುದಿಲ್ಲ ಎಂದು ಈ ಮೂವರು ನ್ಯಾಯಾಧೀಶರ ಪೀಠದ ತೀರ್ಪು ಅಭಿಪ್ರಾಯಪಟ್ಟಿದೆ.

ಇದು ಹಲವು ಪ್ರಶ್ನೆಗಳನ್ನು ಎತ್ತಿದೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಈ ತೀರ್ಪಿಗೆ ಪ್ರತಿಕ್ರಿಯಿಸುತ್ತಾ ಹೇಳಿದೆ. **ಮನೋಹರ ಜೋಷಿ ಒಂದು ಚುನಾವಣಾ ಭಾಷಣದಲ್ಲಿ 'ಮಹಾರಾಷ್ಟ್ರದಲ್ಲಿ ಮೊದಲ ಹಿಂದೂ ರಾಷ್ಟ್ರವನ್ನು ಸ್ಥಾಪಿಸಲಾಗುವುದು' ಎಂದು ಸಾರಿದ್ದರೂ ಇದು ಸುಪ್ರೀಂಕೋರ್ಟಿನ ಪ್ರಕಾರ ಆತ ತನ್ನ ಧರ್ಮದ ಆಧಾರದ ಮೇಲೆ ಮಾಡಿರುವ ಮತಯಾಚನೆಯಲ್ಲ, ಹೆಚ್ಚೆಂದರೆ ಇಂತಹ ಒಂದು ಆಸೆಯ ಅಭಿವ್ಯಕ್ತಿಯಷ್ಟೆ. ಆದರೆ ಸುಪ್ರೀಂಕೋರ್ಟಿನ ಸಂವಿಧಾನ ಪೀಠ 1994ರಲ್ಲಿ 356ನೇ ಕಲಮಿನ ಕುರಿತಾದ ಒಂದು ದಾವೆಗೆ ಸಂಬಂಧಪಟ್ಟಂತೆ ಜಾತ್ಯಾತೀತತೆ ಸಂವಿಧಾನದ ಒಂದು ಮೂಲಭೂತ ಅಂಶ ಹಾಗೂ ಒಂದು ಮತೀಯ ಪ್ರಭುತ್ವ ಸ್ಥಾಪಿಸುವ ಯಾವುದೇ ಮನವಿ ಒಂದು ಜಾತ್ಯಾತೀತ-ವಿರೋಧಿ ಚಟುವಟಿಕೆ, ಅದರಿಂದಾಗಿ ಅದು ಅಸಂವಿಧಾನಿಕ ಎಂದಿತ್ತು. ಮಹಾರಾಷ್ಟ್ರದಲ್ಲಿ ಹಿಂದೂ ರಾಷ್ಟ್ರ ಸ್ಥಾಪಿಸುವುದಾಗಿ ಸಾರಿರುವುದು ಈ ವಿಧದ ಮನವಿ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಅಭಿಪ್ರಾಯಪಟ್ಟಿದೆ.**

ಸಂಕುಚಿತ ನಿಲುವು

ಹಿಂದುತ್ವ ಅಥವಾ ಹಿಂದೂ ಧರ್ಮದ ಆಧಾರದ ಮೇಲೆ ಮಾತಾಡಿಕೊಳ್ಳುವ ಮನವಿ ಒಂದು ಧರ್ಮದವರಿಗೆ ಅಥವಾ ಬೇರೆ ಯಾವುದೇ ಧಾರ್ಮಿಕ ಗುಂಪಿನ ವಿರುದ್ಧ ಮಾಡುವ ಮನವಿಯಾಗುವುದಿಲ್ಲ ಎಂದು ಕೂಡಾ ಸುಪ್ರೀಂಕೋರ್ಟು ಅಭಿಪ್ರಾಯಪಟ್ಟಿದೆ. **"ಈ ಇಡೀ ನಿಲುವೇ ಸಂಕುಚಿತವಾದ ಒಂದು ನಿಲುವು. ಈ ಹಿಂದುತ್ವ ಪ್ರಚಾರವನ್ನು ಹೇಗೆ ಅಲ್ಪಸಂಖ್ಯಾತರ ವಿರುದ್ಧ ಭಾವನೆಗಳನ್ನು ಉದ್ರೇಕಿಸಲು ಹಾಗೂ ಒಂದು ಹಿಂದೂ ಪ್ರಭುತ್ವವನ್ನು ಪ್ರತಿಪಾದಿಸಲು ಬಳಸಲಾಗುತ್ತಿದೆ ಎಂಬ ನಿರ್ದಿಷ್ಟ ಸಂದರ್ಭವನ್ನು ಈ ನಿಲುವು ಗಣನೆಗೆ ತೆಗೆದುಕೊಳ್ಳುವುದಿಲ್ಲ" ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಹೇಳಿದೆ. ಈ ನಿಲುವಿನಿಂದಾಗಿಯೇ ಠಾಕರೆಯವರ ಭಾಷಣಗಳ ವಿರುದ್ಧ ಮುಂಬೈ ಹೈಕೋರ್ಟಿನ ಪ್ರತಿಕೂಲ ತೀರ್ಪು ಬದಲಾಗಿದೆ ಎಂದು ಪಿ.ಬಿ. ಹೇಳಿದೆ.**

ಈಗ ಮಹಾರಾಷ್ಟ್ರದ ಮುಖ್ಯಮಂತ್ರಿ ಆಗಿರುವ ಮನೋಹರ ಜೋಷಿ 1990ರಲ್ಲಿ ವಿಧಾನಸಭಾ ಚುನಾವಣೆಯ ಪ್ರಚಾರ ಸಮಯದಲ್ಲಿ ಹಿಂದುತ್ವದ ಆಧಾರದ ಮೇಲೆ ಹಾಗೂ 'ರಾಮರಾಜ್ಯ' ತರಲು ತನಗೆ ಮತ ನೀಡಬೇಕೆಂದು ಕೇಳಿದ್ದರು. ಶಿವಸೇನೆ ಮುಖ್ಯಸ್ಥ ಬಾಳಠಾಕ್ರೆಯವರ ಚುನಾವಣಾ ಭಾಷಣಗಳು 'ಹಿಂದುತ್ವ'ದ ಮನವಿ, ಬೆದರಿಕೆಗಳಿಂದ ತುಂಬಿರುತ್ತಿತ್ತು. ಜೋಷಿ ಕಾಂಗ್ರೆಸ್(ಐ)ನ ಬಾಪೂರಾವ್ ಪಾಟೀಲರನ್ನು ಸೋಲಿಸಿ ಎಂಎಲ್‌ಎ ಆದರು. ಪಾಟೀಲ್ ಈ ಚುನಾವಣಾ ತಕರಾರು ಅರ್ಜಿ ಸಲ್ಲಿಸಿದರು- ಜೋಷಿ ಧರ್ಮದ ಆಧಾರದಲ್ಲಿ ಮತ ಯಾಚಿಸಿದರೆಂದು ಆಪಾದಿಸಿ. ಜೋಷಿ ತಾನು ಹಿಂದೂರಾಷ್ಟ್ರ ಸ್ಥಾಪಿಸುವ ಮಾತಾಡಿದೆ ಎಂದು ಒಪ್ಪಿಕೊಂಡರೂ ಅದರರ್ಥ ರಾಷ್ಟ್ರೀಯತೆ ಎಂದರು. ಈ ನಡುವೆ ಅಪಘಾತವೊಂದರಲ್ಲಿ ಪಾಟೀಲ್ ಮತ್ತು ಅವರ ಪತ್ನಿ ನಿಧನರಾದರೂ ಅವರ ಮಗ ದಾವೆಯನ್ನು ಮುಂದುವರಿಸಿದರು. ಏಪ್ರಿಲ್ 26, 1993ರಂದು ಮುಂಬೈ ಹೈಕೋರ್ಟ್ ಈ ಅರ್ಜಿಯ ಮೇಲೆ ತೀರ್ಪು ನೀಡಿ ಜೋಷಿಯವರ ಚುನಾವಣೆಯನ್ನು ವಜಾ ಮಾಡಿತು ಹಾಗೂ ಹೈಕೋರ್ಟಿನ ಆದೇಶದ ಮೇರೆಗೆ ಮುಖ್ಯ ಚುನಾವಣಾ ಆಯುಕ್ತರು ಜೋಷಿಯವರನ್ನು ಆರು ವರ್ಷಗಳ ಕಾಲ ಚುನಾವಣೆಗೆ ಸ್ಪರ್ಧಿಸಲು ಅನರ್ಹರಾಗಿಸಿದರು. ಆಗ ಜೋಷಿ ಮುಂಬೈ ಹೈಕೋರ್ಟ್ ತೀರ್ಪಿನ ವಿರುದ್ಧ ಸುಪ್ರೀಂಕೋರ್ಟಿಗೆ ಮನವಿ ಸಲ್ಲಿಸಿದರು. ಅದು ಮುಂಬೈ ಹೈಕೋರ್ಟಿನ ತೀರ್ಪಿಗೆ ತಡೆಯಾಜ್ಞೆ ನೀಡಿದ್ದರಿಂದ ಜೋಷಿ ಈ ವರ್ಷದ ಆರಂಭದಲ್ಲಿ ನಡೆದ ವಿಧಾನಸಭಾ ಚುನಾವಣೆಗಳಲ್ಲಿ ಸ್ಪರ್ಧಿಸಿ ಗೆದ್ದು ಮುಖ್ಯಮಂತ್ರಿಯಾಗಲು ಸಾಧ್ಯವಾಯಿತು. ಆದ್ದರಿಂದ ಸುಪ್ರೀಂಕೋರ್ಟಿನ ಈ ತೀರ್ಪನ್ನು ಮಹಾರಾಷ್ಟ್ರದ ಶಿವಸೇನೆ-ಬಿಜೆಪಿ ಕೂಟ ಬಹಳ ಆತಂಕದಿಂದ ನಿರೀಕ್ಷಿಸುತ್ತಿತ್ತು.

ಗಮನಾರ್ಹ ಸಂಗತಿಯೆಂದರೆ ಇದೇ ನ್ಯಾಯಪೀಠ 1987ರಲ್ಲಿ ಚುನಾಯಿತರಾದ ಇನ್ನೊಬ್ಬ ಶಿವಸೇನೆ ಎಂಎಲ್‌ಎ ಡಾ.ಯಶವಂತ ಪ್ರಭುರವರ ಆಯ್ಕೆಯನ್ನು ರದ್ದು ಮಾಡುವ ತೀರ್ಪನ್ನು ಕೂಡಾ ಈ ತೀರ್ಪಿನೊಂದಿಗೆ ನೀಡಿದೆ. ಅವರ ಚುನಾವಣಾ ಪ್ರಚಾರದಲ್ಲಿ ಬಾಳಾಠಾಕ್ರೆ ಮತ್ತು ಬಿಜೆಪಿಯ ಪ್ರಮೋದ್ ಮಹಾಜನ್ ಕೋಮುಗಳ ನಡುವೆ ವೈಷಮ್ಯ ಹುಟ್ಟಿಸುವ ಮಾತುಗಳನ್ನಾಡಿದ್ದು ಇದನ್ನು ಚುನಾವಣಾ ಭ್ರಷ್ಟಾಚಾರ ಎಂದು ನ್ಯಾಯಪೀಠ ಪರಿಗಣಿಸಿದೆ. ಈ ಬಗ್ಗೆ ಠಾಕ್ರೆಯವರ ಮಾತುಗಳನ್ನು ನ್ಯಾಯಾಲಯ ತೀವ್ರವಾಗಿ ಟೀಕಿಸಿದೆ. ಆದರೆ ಅದೇ ಠಾಕ್ರೆ ಮತ್ತು ಮಹಾಜನ್ ಜೋಷಿಯವರ ಪ್ರಚಾರ ಕಾರ್ಯದಲ್ಲಿ ಅಂತಹುದೇ ವೈಷಮ್ಯ ಹರಡುವ ಮಾತುಗಳನ್ನಾಡಿದರೂ ಇಲ್ಲಿ ಅವರು ಜೋಷಿಯವರ ಒಪ್ಪಿಗೆಯಿಂದ ಈ ಪ್ರಚಾರ ನಡೆಸಿದ್ದರು ಎಂದು ಸಾಬೀತು ಮಾಡಿಕೊಳ್ಳದೆ ಹೈಕೋರ್ಟ್ ತನ್ನ ತೀರ್ಪು ನೀಡಿದೆ ಎಂದು ಸುಪ್ರೀಂಕೋರ್ಟ್ ಈಗ ಹೇಳಿದೆ.

ಜೋಷಿಯವರ ಆಯ್ಕೆಯನ್ನು ಎತ್ತಿಹಿಡಿದ ಈ ತೀರ್ಪಿನಿಂದ ಶಿವಸೇನೆಯ ಮುಖ್ಯ ಕಚೇರಿಯಲ್ಲಿ ಆನಂದ ಉಕ್ಕಿ ಹರಿಯಿತು-ಸಹಜವಾಗಿಯೇ. ಆದರೆ ಅಲ್ಲಿ ಕೇಳಬಂದದ್ದು - "ಬಾಳಾ ಠಾಕ್ರೆಕೀ ಜೈ" - ಅದೇ ತೀರ್ಪು ತೀವ್ರವಾಗಿ ಟೀಕಿಸಿದ ವ್ಯಕ್ತಿಯ ಜೈಕಾರ!

ಈ ತೀರ್ಪಿನ ಮೂರು ದಿನಗಳ ನಂತರ ಡಿಸೆಂಬರ್ 14ರಂದು ಸುಪ್ರೀಂಕೋರ್ಟಿನ ಇನ್ನೊಂದು ನ್ಯಾಯಪೀಠ ಇನ್ನೊಬ್ಬ ಹಾಲಿ ಪದೆ ಮುಖ್ಯಮಂತ್ರಿಯ ಬಗ್ಗೆ ತೀರ್ಪು ನೀಡಿದೆ. ರಾಜಾಸ್ತಾನದ ಬಿಜೆಪಿ ಮುಖ್ಯಮಂತ್ರಿ ಶೇಖಾವತ್ 1993ರ ಚುನಾವಣೆಗಳಲ್ಲಿ ಧರ್ಮದ ಹೆಸರಲ್ಲಿ ಮತ ಯಾಚಿಸಿದ್ದರು ಎಂಬ ಆಪಾದನೆಯಿಂದ ರಾಜಾಸ್ತಾನ ಹೈಕೋರ್ಟ್ ಅವರನ್ನು ಈ ಹಿಂದೆ ಮುಕ್ತಗೊಳಿಸಿತ್ತು. ಆದರೆ ಸುಪ್ರೀಂಕೋರ್ಟಿನ ಈಗಿನ ತೀರ್ಪು ರಾಜಾಸ್ತಾನ ಹೈಕೋರ್ಟಿನ ತೀರ್ಪನ್ನು ರದ್ದು ಮಾಡಿದೆ ಹಾಗೂ ಈ ಬಗ್ಗೆ ಕಾನೂನಿನ ಪ್ರಕಾರ ವಿಚಾರಣೆ ನಡೆಸಬೇಕೆಂದು ಈ ಕೇಸನ್ನು ಮತ್ತೆ ರಾಜಾಸ್ತಾನ ಹೈಕೋರ್ಟಿಗೆ ಕಳಿಸಿದೆ. ಡಿಸೆಂಬರ್ 1992ರಲ್ಲಿ ಬಾಬ್ರಿ ಮಸೀದಿ ಧ್ವಂಸದ ಹಿನ್ನೆಲೆಯಲ್ಲಿ ಶ್ರೀರಾಮನ ಹೆಸರಲ್ಲಿ ಮತ ಯಾಚಿಸಿರುವ ಆಪಾದನೆಯಿದ್ದು, ಅದು ಜನತಾ ಪ್ರಾತಿನಿಧ್ಯ ಶಾಸನದ ಪ್ರಕಾರ ಭ್ರಷ್ಟ ನಡವಳಿಕೆಯಾದ್ದರಿಂದ ಈ ಬಗ್ಗೆ ವಿಚಾರಣೆ ಮಾಡಬೇಕಿತ್ತು ಎಂದು ಸುಪ್ರೀಂಕೋರ್ಟಿನ ಈ ತೀರ್ಪು ಹೇಳಿದೆ.

ಕಾನೂನಿನಲ್ಲಿ ಸಂದಿಗ್ಧತೆ ಬೇಡ

ಇವನ್ನೆಲ್ಲಾ ನೋಡಿದ ಮೇಲೂ 'ಹಿಂದುತ್ವ' ಧರ್ಮದ ಹೆಸರಲ್ಲಿ ಮತ ಯಾಚನೆ ಅಲ್ಲ ಎನ್ನಲು ಸಾಧ್ಯವೇ? ಇವರೆಲ್ಲಾ ತಾವು ಈ 'ತತ್ವ'ವನ್ನು ಎತ್ತಿ ಹಿಡಿಯುವವರಪ ಎನ್ನುತ್ತಿರುವವರೇ!

ಆದ್ದರಿಂದಲೇ ಜೋಷಿಯವರ ಆಯ್ಕೆಗೆ ಸಂಬಂಧಪಟ್ಟ **"ಈ ತೀರ್ಪು ಚುನಾವಣೆಗಳಲ್ಲಿ ಧರ್ಮದ ದುರುಪಯೋಗವನ್ನು ಟೀಕಿಸಿದರೂ ಒಟ್ಟಾರೆಯಾಗಿ ನೋಡಿದರೆ ಧರ್ಮವನ್ನು ಚುನಾವಣಾ ಉದ್ದೇಶಗಳಿಗೆ ಬಳಸುವ ಪ್ರಶ್ನೆಯ ಮೇಲೆ ಸಂದಿಗ್ಧತೆ ತೋರುವ ತೀರ್ಪು ಇದು ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಹೇಳಿದೆ. ಧರ್ಮವನ್ನು ರಾಜಕೀಯ ಗುರಿಸಾಧನೆಗೆ ಬಳಸುವುದಕ್ಕೆ ಇದು ಪ್ರೋತ್ಸಾಹ ನೀಡುತ್ತದೆ. ಆದ್ದರಿಂದ ಚುನಾವಣಾ ಉದ್ದೇಶಗಳಿಗೆ ಧರ್ಮದ ಬಳಕೆಯೆಂದರೇನು ಎಂಬ ಬಗ್ಗೆ ಹಾಗೂ ಅದನ್ನು ನಿಷೇಧಿಸುವ ಬಗ್ಗೆ ಯಾವುದೇ ಕಾನೂನಾತ್ಮಕ ಸಂದಿಗ್ಧತೆ, ಅನಿಶ್ಚಿತತೆ ಇರದಂತಾಗಲು ಜನತಾ ಪ್ರಾತಿನಿಧ್ಯ ಕಾನೂನಿಗೆ ಸಂಬಂಧಪಟ್ಟ ಅಂಶಗಳನ್ನು ವಿಮರ್ಶೆ ಮಾಡುವುದು ಈಗಅತೀ ಅವಶ್ಯವಾಗಿದೆ" ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಹೇಳಿದೆ.**

ಇತರ ಎಡಶಕ್ತಿಗಳು ಹಾಗೂ ಇತರ ಜಾತ್ಯಾತೀತರಿಂದಲೂ ಇಂತಹುದೇ ಪ್ರತಿಕ್ರಿಯೆ ವ್ಯಕ್ತಗೊಂಡಿದೆ(ಪುಟ 8 ನೋಡಿ)

ಕಾವೇರಿ ನೀರು: ಸುಪ್ರೀಂಕೋರ್ಟ್ ಸಲಹೆ ಸ್ವಾಗತಾರ್ಹ

ತಮಿಳುನಾಡಿನಲ್ಲಿ ಬೆಳೆದು ನಿಂತಿರುವ ಬೆಳೆಗಳ ರಕ್ಷಣೆಗಾಗಿ 30 ಟಿಎಂಸಿ ಕಾವೇರಿ ನೀರನ್ನು ಬಿಡುಗಡೆ ಮಾಡಬೇಕೆಂದು ಮುಖ್ಯಮಂತ್ರಿಗಳಿಗೆ ತಮಿಳುನಾಡಿನ ಮುಖ್ಯಮಂತ್ರಿಯವರು ತುರ್ತು ವಿನಂತಿ ಪತ್ರ ಬರೆದಿದ್ದರು. ಒಂದು ಕಡೆ ಆ ರೀತಿ ವಿನಂತಿ ಪತ್ರ ಬರೆದು ಮತ್ತೊಂದು ಕಡೆ 30 ಟಿಎಂಸಿ ನೀರನ್ನು ಬಿಡುಗಡೆ ಮಾಡುವಂತೆ ಕರ್ನಾಟಕ ಸರಕಾರಕ್ಕೆ ನಿರ್ದೇಶ ನೀಡಬೇಕೆಂದು ಕೋರಿ ಸುಪ್ರೀಂ ಕೋರ್ಟಿಗೆ ತಮಿಳುನಾಡು ಸರಕಾರ ಅರ್ಜಿ ಸಲ್ಲಿಸಿತ್ತು. ಡಿ. 13ರಂದು ಸುಪ್ರೀಂಕೋರ್ಟು ತಮಿಳುನಾಡು ಸರಕಾರದ ಅರ್ಜಿಯನ್ನು ತಳ್ಳಿಹಾಕಿದೆ.

ಕಾವೇರಿ ಜಲವಿವಾದ ನ್ಯಾಯ ಮಂಡಳಿಯು ಈಗಾಗಲೇ ಒಂದು ತಾತ್ಕಾಲಿಕ ನಿರ್ಣಯ ನೀಡಿ ಕರ್ನಾಟಕ ಸರಕಾರ ಎಷ್ಟು ನೀರು ಬಿಡಬೇಕೆಂದು ತಿಳಿಸಿದೆ. ಕರ್ನಾಟಕ ರಾಜ್ಯದಲ್ಲಿ ಆಗುವ ಮಳೆಯನ್ನಾಧರಿಸಿಯೇ ತಾತ್ಕಾಲಿಕ ನಿರ್ಣಯವನ್ನು ಕಾರ್ಯಾಚರಣೆಗೆ ತರಬೇಕಾಗಿದೆ. ರಾಜ್ಯದ ರೈತರ ನೀರಿನ ಅವಶ್ಯಕತೆಯನ್ನು ಆಧರಿಸಿಯೇ ತಮಿಳುನಾಡಿಗೆ ನೀರು ಬಿಡಬೇಕಾಗಿರುವುದರಿಂದ ತಮಿಳುನಾಡಿನ ಬೇಡಿಕೆ ನಿಜವಾಗಿದ್ದರೂ ಕೂಡಾ ಕಾವೇರಿಯಲ್ಲಿ ಸಾಕಷ್ಟು ನೀರಿಲ್ಲದಿದ್ದರೆ ಅವರ ಬೇಡಿಕೆಯನ್ನು ಪೂರೈಸುವ ಪ್ರಶ್ನೆ ಉದ್ಭವಿಸುವುದಿಲ್ಲ. ಪ್ರತಿ ವರ್ಷ ಆಗುವ ಮಳೆಯ ಆಧಾರದಲ್ಲಿ ಕಾವೇರಿ ನದಿಯ ನೀರಿನ ಪ್ರಮಾಣದ ಬಗ್ಗೆ ಹಾಗೆಯೇ ತಮಿಳುನಾಡಿಗೆ ನೀರು ಬಿಡುಗಡೆ ಮಾಡುವ ಕುರಿತು ಉಸ್ತುವಾರಿ ನೋಡಿಕೊಳ್ಳಲು ತಜ್ಞರನ್ನೊಳಗೊಂಡ ಒಂದು ಶಾಶ್ವತ ಸಮಿತಿಯನ್ನು ರಚಿಸುವಂತೆ ನ್ಯಾಯಾಲಯ ಎರಡೂ ರಾಜ್ಯಗಳಿಗೆ ಸಲಹೆ ಮಾಡಿರುವುದು ಅತ್ಯಂತ ಸೂಕ್ತ ವಿಚಾರವೇ ಸರಿ. ಕರ್ನಾಟಕ ರಾಜ್ಯದ ಮುಖ್ಯಮಂತ್ರಿ ದೇವೇಗೌಡರು "ಇದು ಪ್ರಥಮ ಗೆಲುವು" ಎಂದು ಪ್ರತಿಕ್ರಿಯಿಸದೆ ಪ್ರತಿ ವರ್ಷ ಉದ್ಭವಿಸಬಹುದಾದ ಕಾವೇರಿ ನೀರಿನ ಬಿಡುಗಡೆಯ ಸಮಸ್ಯೆಯ ಪರಿಹಾರಕ್ಕೆ ಸುಪ್ರೀಂಕೋರ್ಟಿನ ಸಲಹೆ ಸರಿಯಾಗಿದೆ, ಅದರಂತೆ ತಜ್ಞರ ಸಲಹಾ ಸಮಿತಿ ನೇಮಿಸುವ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ್ದರೆ ಒಳ್ಳೆಯದಾಗುತ್ತಿತ್ತು.

ನೆರೆಕರೆ ರಾಜ್ಯಗಳಲ್ಲಿ ಹೊಂದಾಣಿಕೆ ಅಗತ್ಯ. ಆ ದೃಷ್ಟಿಯಲ್ಲಿ ಎರಡೂ ರಾಜ್ಯಗಳಒಂದು ಶಾಶ್ವತ ತಜ್ಞರ ಸಮಿತಿಯನ್ನು ನೇಮಿಸಬೇಕೆಂದು ಸುಪ್ರೀಂ ಕೋರ್ಟಿನ ಸಲಹೆ ಸ್ವಾಗತಾರ್ಹ.

-ಎನ್.ಕೆ. ಉಪಾಧ್ಯಾಯ

ಜನವರಿ 1996: ಹೋರಾಟದ ಕಾರ್ಯಾಚರಣೆಯ ತಿಂಗಳು

ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಕರೆ

ನವದೆಹಲಿಯಲ್ಲಿ ಡಿಸೆಂಬರ್ 2 ಹಾಗೂ 3ರಂದು ಸಭೆ ಸೇರಿದ್ದ ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ(ಎಐಎಡಬ್ಲ್ಯುಯು) ಕೇಂದ್ರೀಯ ಕಾರ್ಯಕಾರಿ ಸಮಿತಿ ಕೃಷಿ ಕೂಲಿಕಾರರಿಗೆ ಒಂದು ಸಮಗ್ರ ಶಾಸನವನ್ನು ಸಂಸತ್ತಿನ ಮುಂದೆ ತರುವಲ್ಲಿ ಕೇಂದ್ರ ಸರಕಾರ ವಿಫಲವಾಗಿರುವುದನ್ನು ಬಲವಾಗಿ ಖಂಡಿಸಿದೆ. ಹಲವು ಕಾರ್ಮಿಕ ಮಂತ್ರಿಗಳು ಮತ್ತೆ ಮತ್ತೆ ಈ ಬಗ್ಗೆ ಹೇಳಿಕೆಗಳನ್ನು ನೀಡಿದರೂ ಅಂತಹ ಶಾಸನವೊಂದನ್ನು ತಂದೇ ಇಲ್ಲ.

ಆದ್ದರಿಂದ ಜನವರಿ 1996ನ್ನು ಕೃಷಿ ಕಾರ್ಮಿಕರಿಗೆ ಒಂದು ಸಮಗ್ರ ಶಾಸನಕ್ಕಾಗಿ, 5000 ರೂ.ಗಿಂತ ಕಮ್ಮಿಯಿರುವ ಎಲ್ಲಾ ಸಾಲಗಳ ರದ್ದತಿಗಾಗಿ ಹಾಗೂ ಗ್ರಾಮೀಣ ಬಡವರಿಗೆ ಸುಲಭ ಸಾಲ ಒದಗಿಸಬೇಕೆಂದು, ರೇಶನ್ ವ್ಯವಸ್ಥೆಯ ಮೂಲಕ ಶೇ. 50ರಷ್ಟು ಬೆಲೆಯಲ್ಲಿ ಗ್ರಾಮೀಣ ಬಡವರು, ಹರಿಜನ-ಗಿರಿಜನರು ಮತ್ತು ಭೂ ಹೀನರಿಗೆ ಜೀವನಾವಶ್ಯಕ ಸಾಮಗ್ರಿಗಳ ಪೂರೈಕೆಗಾಗಿ, ಕೃಷಿ ಕೂಲಿಕರರ ಸಾಮಾಜಿಕ ಬಹಿಷ್ಕಾರವನ್ನು ಒಂದು ಕ್ರಿಮಿನಲ್ ಅಪರಾಧವೆಂದು ಪರಿಗಣಿಸಬೇಕೆಂದು ಒತ್ತಾಯಿಸಲು, ಸರಕಾರದ ನೀತಿಯಿಂದಾಗಿ ಕೃಷಿ ಕೂಲಿಕಾರರು ಕಳಕೊಂಡ ಕೆಲಸದ ದಿನಗಳಿಗೆ ಪರ್ಯಾಯ ಉದ್ಯೋಗ ಒದಗಿಸಬೇಕೆಂದು, ಅಭಿವೃದ್ಧಿ ಯೋಜನೆಗಳಲ್ಲಿ ಭ್ರಷ್ಟಾಚಾರವನ್ನು ತಡೆಯಲು ಸಾಮಾಜಿಕ ಕಾರ್ಯಾಚರಣೆಗಳ ಮೂಲಕ ಸಾಧ್ಯವಾಗುವಂತೆ ಗ್ರಾಮೀಣ ಬಡವರ ಹಾಗೂ ಭೂ ಹೀನರ ಜಾಗರೂಕ ಸಮಿತಿಗಳ ರಚನೆ ಈ ಎಲ್ಲಾ ಬೇಡಿಕೆಗಳ ಈಡೇರಿಕೆಗಾಗಿ ಹೋರಾಟದ ಕಾರ್ಯಾಚರಣೆಯ ತಿಂಗಳಾಗಿಸಬೇಕು ಎಂದು ಗ್ರಾಮೀಣ ಜನಸಮೂಹಗಳಿಗೆ ಸಂಘ ಕರೆ ನೀಡಿದೆ.

ಅತ್ಯಂತ ದರಿದ್ರ ಸ್ಥಿತಿಯಲ್ಲಿರುವವರ ಜೀವನಮಟ್ಟ ಮತ್ತಷ್ಟು ಇಳಿಯದಂತೆ ತಡೆಯಲು ಸಂಘಟಿತರಾಗಿ, ಕಾರ್ಯೋನ್ಮುಖರಾಗಲು ತೀವ್ರ ಪ್ರಯತ್ನ ನಡೆಸುವ ಮೂಲಕ ಮೂವತ್ತು ಲಕ್ಷದ ಗುರಿ ದಾಟಬೇಕು ಎಂದು ಸಂಘ ತನ್ನ ಘಟಕಗಳಿಗೆ ಕರೆ ನೀಡಿದೆ.

ಏರುತ್ತಿರುವ ಬೆಲೆಗಳನ್ನು ಎದುರಿಸಲು ಕೂಲಿ ಹೆಚ್ಚಳಕ್ಕಾಗಿ ಮೊದಲ ಘಟ್ಟದಲ್ಲಿ ಕನಿಷ್ಟ 25 ಸಾವಿರ ಹಳ್ಳಿಗಳಲ್ಲಿ ಚಳುವಳಿ ಕೈಗೆತ್ತಿಕೊಳ್ಳಬೇಕು ಎಂದೂ ಸಂಘ ತನ್ನ ಘಟಕಗಳಿಗೆ ಕರೆ ನೀಡಿದೆ.

ಕೇಂದ್ರ ಸರಕಾರದ ಹೊಸ ಆರ್ಥಿಕ ನೀತಿಯಿಂದಾಗಿ ಈಗ ಬಡತನದ ರೇಖೆಯ ಕೆಳಗೆ ತಳ್ಳಲ್ಪಟ್ಟಿರುವ ದೇಶದ ಶೇ. 48ರಷ್ಟು ಜನಸಂಖ್ಯೆಯ ಉಳಿವಿಗಾಗಿ ಅಗತ್ಯ ಸಂಪನ್ಮೂಲ ಒದಗಿಸುವ ಒಂದು ಸಾಧನವಾಗಿ ಭೂಮಿಯನ್ನು ತಡೆಯಲು ಸಾವಿರಾರು ಎಕ್ರೆ ಜಮೀನಿನಲ್ಲಿ ಭೂ ಹೋರಾಟಗಳನ್ನು ಸಂಘ ಈಗಾಗಲೇ ನಡೆಸುತ್ತಿದೆ.

ಡಿಸೆಂಬರ್ 15ರ ರಾಷ್ಟ್ರೀಯ ಸಾಮೂಹಿಕ ಸಂಘಗಳ ವೇದಿಕೆಯ ಧರಣಿ ಕಾರ್ಯಕ್ರಮದಲ್ಲಿ ದಿಲ್ಲಿ ಸುತ್ತಮುತ್ತಲಿನ ಘಟಕಗಳು ಭಾಗವಹಿಸಬೇಕು ಎಂದೂ ಎಐಎಡಬ್ಲ್ಯುಯು ತನ್ನ ಘಟಕಗಳಿಗೆ ಕರೆ ನೀಡಿದೆ.

ಹಂಗಾಮಿ ಪ್ರಧಾನ ಕಾರ್ಯದರ್ಶಿ

ಇದುವರೆಗೆ ಎಐಎಡಬ್ಲ್ಯುಯುನ ಜಂಟಿ ಕಾರ್ಯದರ್ಶಿಗಳಲ್ಲೊಬ್ಬರಾಗಿದ್ದ ವಿಜಯರಾಘವನ್‌ರವರನ್ನು ಸಂಘದ ಹಂಗಾಮಿ ಪ್ರಧಾನ ಕಾರ್ಯದರ್ಶಿಯಾಗಿ ಕೇಂದ್ರ ಕಾರ್ಯಕಾರಿ ಸಮಿತಿ ನೇಮಿಸಿತು. ಪ್ರಧಾನ ಕಾರ್ಯದರ್ಶಿ ಎಂ.ಕೆ. ಕೃಷ್ಣನ್ ನವೆಂಬರ್ 14ರಂದು ನಿಧನ ಹೊಂದಿದ್ದರಿಂದ ಹಂಗಾಮಿ ಪ್ರಧಾನ ಕಾರ್ಯದರ್ಶಿಯವರನ್ನು ಆರಿಸಬೇಕಾಗಿ ಬಂತು.

ಸಂಸ್ಕೃತಿ ವರ್ತಮಾನ

ಡಿಸೆಂಬರ್ 6ರ ಕರಾಳ ದಿನವನ್ನು ನೆನಪಿಸಿಕೊಳ್ಳುವುದೆಂದರೆ......

ಅಯೋಧ್ಯೆಯಲ್ಲಿ ನಡೆದ ಮಹಾಪರಾಧದ ಮೂರನೇ ವಾರ್ಷಿಕದ ಸಂದರ್ಭದಲ್ಲಿ ಪ್ರಜಾಸತ್ತಾತ್ಮಕ ಹಾಗೂ ಜಾತ್ಯಾತೀತ ಶಕ್ತಿಗಳು ರಾಮಜನ್ಮಭೂಮಿ-ಬಾಬ್ರಿ ಮಸೀದಿ ವಿವಾದವನ್ನು ಒಂದು ನ್ಯಾಯಾಂಗ ತೀರ್ಮಾನಕ್ಕೆ ಒಪ್ಪಿಸಬೇಕೆಂದು ಆಗ್ರಹಪಡಿಸಬೇಕು ಎಂದು ಸಿಪಿಐ(ಎಂ) ಕರೆ ನೀಡಿದೆ. ಮಸೀದಿ ಇದ್ದಲ್ಲಿ ಒಂದು ದೇವಸ್ಥಾನವಿತ್ತೆ ಎಂದು ಸಂವಿಧಾನದ 143ನೇ ಕಲಮಿನ ಪ್ರಕಾರ ರಾಷ್ಟ್ರಪತಿಗಳು ಸಲ್ಲಿಸಿದ ಕೇಳಿಕೆಯನ್ನು ಕೇಳಲು ಸುಪ್ರೀಂ ಕೋರ್ಟ್ ನಿರಾಕರಿಸಿದ ಒಂದು ವರ್ಷದ ನಂತರವೂ ರಾವ್ ಸರಕಾರ ಈ ವಿಷಯದಲ್ಲಿ ರಾವ್ ಸರಕಾರದ ಕಾಲೆಳೆಯುತ್ತಿದೆ ಎಂದು ಅದು ಬಲವಾಗಿ ಖಂಡಿಸಿದೆ.

ಸಿಪಿಐ(ಎಂ) ವಾರಪತ್ರಿಕೆಯ ಡಿಸೆಂಬರ್ 10, 1995ರ ಸಂಚಿಕೆಯ "ಇನ್ನಷ್ಟು ಅಯೋಧ್ಯೆಗಳು ಬೇಡ" ಎಂಬ ಸಂಪಾದಕೀಯ ಕೂಡಾ ಕೇಂದ್ರ ಸರಕಾರ ಭೂಮಿಯನ್ನು ವಶಪಡಿಸಿಕೊಂಡು ಇಲ್ಲದಂತೆ ಮಾಡಿದ್ದ ವಿವಾದಿತ ಜಮೀನಿನ ಒಡೆತನ, ಮತ್ತಿತರ ವಿಷಯಗಳ ದಾವೆಗಳನ್ನೆಲ್ಲಾ ಸುಪ್ರೀಂಕೋರ್ಟ್ ಮತ್ತೆ ಜೀವ ಕೊಟ್ಟು ಅವನ್ನೆಲ್ಲಾ ಸಂವಿಧಾನದ 138(2) ಕಲಮಿನ ಪ್ರಕಾರ ತ್ವರಿತ ನ್ಯಾಯಾಂಗ ತೀರ್ಮಾನಕ್ಕೆ ಸುಪ್ರೀಂ ಕೋರ್ಟಿನ ವಿಶೇಷ ಪೀಠಕ್ಕೆ ಸಲ್ಲಿಸಲು ದಾರಿ ಮಾಡಿಕೊಟ್ಟಿತ್ತು ಎಂದು ನೆನಪಿಸಿದೆ.

"ಆದರೆ ಕಾಂಗ್ರೆಸ್(ಐ) ಕೇಂದ್ರ ಸರಕಾರ ಹಾಗೆ ಮಾಡಲಿಲ್ಲ. 138((2) ಕಲಮನ್ನು ಬಳಸಲು ನಿರಾಕರಿಸುವ ಮೂಲಕ ನರಸಿಂಹರಾವ್ ಸುಪ್ರೀಂಕೋರ್ಟ್ ಮತ್ತು ಸಂವಿಧಾನ ನಿರೂಪಿಸಿರುವಂತೆ ಜಾತ್ಯಾತೀತ ನೀತಿಗಳನ್ನು ರಕ್ಷಿಸುವ ಬದಲು ಕೋಮುವಾದಿ ಶಕ್ತಿಗಳನ್ನು ಸಂತೃಪ್ತಗೊಳಿಸುವುದನ್ನೇ ಅವಲಂಬಿಸಿದ್ದಾರೆ ಎಂದು ಬಯಲಾಗಿದೆ" ಎಂದು ಸಂಪಾದಕೀಯ ಖೇದ ವ್ಯಕ್ತಪಡಿಸಿದೆ.

ಕೋಮುವಾದದ ಅಪಾಯದಲ್ಲಿ ಹೆಚ್ಚಳ ಹಾಗೂ ಅದರೆದುರು ರಾಜಿ ಮಾಡಿಕೊಳ್ಳುವ ಕಾಂಗ್ರೆಸ್(ಐ)ನ ನಿಲುವು ಎರಡೂ ಅಯೋಧ್ಯಾ ವಿವಾದದೊಂದಿಗೆ ಹಾಸುಹೊಕ್ಕಾಗಿವೆ ಎಂದಿರುವ ಸಂಪಾದಕೀಯ ಈ ಇಡೀ ವಿವಾದವನ್ನು ನ್ಯಾಯಾಂಗ ತೀರ್ಪಿಗೆ ಒಪ್ಪಿಸಬೇಕೆಂಬ ಒತ್ತಾಯವನ್ನು ಪುನರುಚ್ಚರಿಸಿದೆ.

ಸ್ವಾತಂತ್ರ್ಯಾನಂತರ ಭಾರತದ ಜಾತ್ಯಾತೀತ ಅಡಿಗಲ್ಲಿಗೆ ಅತ್ಯಂತ ಆಘಾತಕಾರಿ ಹೊಡೆತ ನೀಡಿದ ಮೂರು ವರ್ಷಗಳ ಹಿಂದಿನ ಬಾಬ್ರಿ ಮಸೀದಿಯ ಬರ್ಬರ ಧ್ವಂಸಲೀಲೆಯನ್ನು ನೆನಪಿಸಿಕೊಳ್ಳುತ್ತಾ "ಡಿಸೆಂಬರ್ 6ನ್ನು ನೆನಪಿಸಿಕೊಳ್ಳುವುದೆಂದರೆ ಬಹುಸಂಖ್ಯಾತ ಕೋಮುವಾದ ಜನಗಳಲ್ಲಿ ಭಾವೋದ್ವೇಗವನ್ನು ಬಡಿದೆಬ್ಬಿಸಲು ಧಾರ್ಮಿಕ ಸಾಧನಗಳನ್ನು ಬಳಸಿ ಕೋಮು ತಿಕ್ಕಾಟವನ್ನು ಹೆಚ್ಚಿಸುವ ದುಷ್ಟ ಸಂಚಿನಲ್ಲಿ ಯಶಸ್ವಿಯಾಗದಂತೆ ನೋಡಿಕೊಳ್ಳಲು ಸದಾ ಜಾಗರೂಕತೆಯಿಂದಿರಬೇಕು ಎಂದು ನೆನಪಿಸಿಕೊಳ್ಳುವುದು" ಎಂದು ಪೀಪಲ್ಸ್ ಡೆಮಾಕ್ರಸಿ ಸಂಪಾದಕೀಯ ಹೇಳಿದೆ.

ಆರ್.ಎಸ್.ಎಸ್.-ವಿ.ಹೆಚ್.ಪಿ.-ಬಿಜೆಪಿ ಕೂಟದ ಈ ಭಯಾನಕ ಅಪರಾಧಕ್ಕೆ ಹೊಣೆಗಾರನಾದ ಒಬ್ಬನೇ ಒಬ್ಬ ಅಪರಾಧಿಯನ್ನೂ ಇದುವರೆಗೆ ಶಿಕ್ಷಿಸಿಲ್ಲ. ಅಥವಾ ಸಂವಿಧಾನ ನಿರೂಪಿದ ಜಾತ್ಯಾತೀತ ಚೌಕಟ್ಟಿನೊಳಗೆ ಈ ವಿವಾದವನ್ನು ಪರಿಹರಿಸಲು ನರಸಿಂಹರಾವ್ ಸರಕಾರ ಯಾವುದೇ ನೀತಿಬದ್ಧನಿಲುವು ತಳೆದಿಲ್ಲ ಎಂದು ಖೇದ ವ್ಯಕ್ತಪಡಿಸಿರುವ ಸಂಪಾದಕೀಯ ದೇಶದ ಜಾತ್ಯಾತೀತ ನೀತಿಗೆ ಸವಾಲೊಡ್ಡಿ ಅದರಿಂದ ತಪ್ಪಿಸಿಕೊಳ್ಳಲು ಯಾರನ್ನೂ ಬಿಡಬಾರದು, ಎಡ ಶಕ್ತಿಗಳಿಗೆ ಡಿಸೆಂಬರ್ 6ರ ನೆನಪಿನ ಸಂದರ್ಭ ಎಲ್ಲಾ ಸ್ವರೂಪಗಳಲ್ಲಿನ ಕೋಮುವಾದವನ್ನು ರಾಜಕೀಯವಾಗಿ, ಸೈದ್ಧಾಂತಿಕವಾಗಿ ಎದುರಿಸಲು ತಮ್ಮನ್ನು ಮತ್ತೊಮ್ಮೆ ಸಮರ್ಪಿಸಿಕೊಳ್ಳಬೇಕಾದ ಸಂದರ್ಭ ಎಂದಿದೆ.

ಬೆಳ್ಳಿ ತೆರೆಗೆ 'ಕಾಮ್ರೇಡ್ ಇಎಂಎಸ್'

ಭಾರತದ ರಾಜಕೀಯ ಇತಿಹಾಸಕ್ಕೆ ಹೊಸ ಆಯಾಮ ನೀಡಿದ, ತಮ್ಮ ಇಡೀ ಬದುಕನ್ನು ಬಡವರ ಏಳಿಗೆಗಾಗಿ ಸಮರ್ಪಿಸಿದ ಇಎಂಎಸ್ ನಂಬೂದರಿಪಾಡ್ ಅವರ ಬಗ್ಗೆ ನಾಳೆಯ ಜನಾಂಗಕ್ಕೆ ಮಾಹಿತಿ ನೀಡುವ ಅಪೂರ್ವವಾದ ಕೆಲಸವೊಂದು ಕೇರಳದಲ್ಲಿ ನಡೆದಿದೆ.

ಕೇರಳದ ರಾಜಕೀಯದಲ್ಲಿ, ಕೇರಳದ ಜನರ ಉಸಿರಿನಲ್ಲಿ ಬೆರೆತುಹೋಗಿರುವ ಇ.ಎಂ.ಎಸ್. ನಂಬೂದರಿಪಾಡ್ ಇಡೀ ಕೇರಳದಲ್ಲಿ 'ನಮ್ಮುಡೆ ಇಎಂಎಸ್(ನಮ್ಮ ಇಎಂಎಸ್) ಎಂದೇ ಹೆಸರುವಾಸಿ. ಈ ನಮ್ಮುಡೆ ಇಎಂಎಸ್ ಅವರ ಬದುಕಿನ ಬಗ್ಗೆ ನಿರ್ದೇಶಕ ಬಾಬು ಜಾನ್ ಡಾಕ್ಯುಮೆಂಟರಿ ಚಿತ್ರವನ್ನು ತಯಾರಿಸಿದ್ದಾರೆ.

ಇಎಂಎಸ್ ಅವರ 87ನೇ ಹುಟ್ಟುಹಬ್ಬಕ್ಕೆ ಕೇರಳಿಗರು ಸಲ್ಲಿಸಿದ ಪ್ರೀತಿಯ ಕಾಣಿಕೆ ಇದು. 32 ನಿಮಿಷಗಳ ಈ ಚಿತ್ರಕ್ಕೆ 'ಕಾಮ್ರೇಡ್ ಇಎಂಎಸ್' ಎಂದೇ ಹೆಸರಿಡಲಾಗಿದೆ. ಮಹಾತ್ಮಾಗಾಂಧಿ ವಿಶ್ವವಿದ್ಯಾಲಯದಲ್ಲಿ ನೌಕರರಾಗಿರುವ ಬಾಬು ಜಾನ್ ಅವರ ನಿರ್ದೇಶನದ ಪ್ರಥಮ ಪ್ರಯತ್ನ ಇದು. ನಂಬೂದರಿಪ್ಪಾಡ್ ಕೇರಳದಲ್ಲಿ ಪ್ರಥಮ ಕಮ್ಯುನಿಸ್ಟ್ ಸರಕಾರದ ನೇತೃತ್ವ ವಹಿಸಿ ಭಾರತದ ರಾಜಕೀಯಕ್ಕೆ ನೀಡಿದ ಹೊಸ ಆಯಾಮದ ಬಗ್ಗೆ ನ್ಯಾಯಮೂರ್ತಿ ವಿ.ಆರ್.ಕೃಷ್ಣಯ್ಯರ್ ಅವರು ಚಿತ್ರದಲ್ಲಿ ವಿವರಿಸಿದ್ದಾರೆ. ಪ್ರೇಮ್ ಜಿ ಹಾಗೂ ಕೊಚಾನುಜ ಪಿಶಾರಡಿ ಅವರು ಇಎಂಎಸ್ ಅವರ ಬಾಲ್ಯ ಜೀವನದ ಬಗ್ಗೆ ಮಾತನಾಡಿದ್ದಾರೆ.

ಚಿತ್ರವನ್ನು ವೀಕ್ಷಿಸಿದ ಇಎಂಎಸ್ ನಂಬೂದರಿಪಾಡ್ ಅವರು "ನಾನು ಬೆಳೆದು ಬಂದ ಬಗೆಯನ್ನು ಈ ಚಿತ್ರ ಸಮರ್ಥವಾಗಿ ಹಿಡಿದಿಟ್ಟಿದೆ" ಎಂದರು.

ಈ ಹಿಂದೆ ಖ್ಯಾತ ಚಿತ್ರ ನಿರ್ದೇಶಕರುಗಳಾದ ಅರವಿಂದನ್, ಜಾನ್ ಅಬ್ರಹಾಂ ಇಎಂಎಸ್ ಬಗ್ಗೆ ಚಿತ್ರ ನಿರ್ದೇಶಿಸುವ ಬಯಕೆ ಹೊಂದಿದ್ದರೂ ಅವರ ಆಸೆ ಕೈಗೂಡಿರಲಿಲ್ಲ. ಮತ್ತೊಬ್ಬ ನಿರ್ದೇಶಕ ಷಾಜಿ ಎನ್ ಕರುಣ್ ಚಿತ್ರ ಆರಂಭಿಸಿದರಾದರೂ ಆರ್ಥಿಕ ತೊಂದರೆಗಳಿಂದ ಮಧ್ಯದಲ್ಲಿಯೇ ಕೈ ಬಿಟ್ಟರು. ಈಗ ಇಎಂಎಸ್ ಅವರನ್ನು ಬೆಳ್ಳಿ ತೆರೆಗೆ ತರುವಲ್ಲಿ ಬಾಬು ಜಾನ್ ಯಶಸ್ವಿಯಾಗಿದ್ದಾರೆ.

-ಜೆ.ಎನ್.ಮೋಹನ್

ಸಾದರ-ಸ್ವೀಕಾರ

1. ಡಂಕಲ್ ಪ್ರಸ್ತಾವನೆ-ಪತ್ರಿಕಾರಂಗಕ್ಕೆ ಲಗ್ಗೆ
- ಲೇ. ಜಿ.ಎನ್. ಮೋಹನ್ 28 ರೂ.

2. ಕಳೆದು ಹೋದದ್ದು
- ಲೇ: ಪರಂಜ್ಯೋತಿ 35 ರೂ.

3. ಸಾಮಾನ್ಯ ರೋಗ ಲಕ್ಷಣಗಳು-ಪರಿಹಾರವೇನು?
- ಲೇ: ಡಾ. ಸಿ.ಆರ್. ಚಂದ್ರಶೇಖರ್ 30 ರೂ.

4. ಲೋಕಾಯತ
- ಲೇ: ಗೌರೀಶ ಕಾಯ್ಕಿಣಿ 30 ರೂ.

5. ಸಂಚು! ಕನ್ನಡ೦೦೧
- ಲೇ: ಅನಂತ ಕಲ್ಲೋಳ 22 ರೂ.

6. ಲೈಂಗಿಕ ಸಮಸ್ಯೆಗಳು ಮತ್ತು ಪರಿಹಾರಗಳು
- ಲೇ: ಡಾ. ಬಿ.ಡಿ. ಸತ್ಯನಾರಾಯಣ 20 ರೂ.

7. ಏಡ್ಸ್ ರೋಗ ಎಂದರೇನು
- ಲೇ: ಡಾ. ಸಿ.ಆರ್. ಚಂದ್ರಶೇಖರ್ 40 ರೂ.

ಪ್ರಕಾಶಕರು

ನವಕರ್ನಾಟಕ ಪಬ್ಲಿಕೇಷನ್ ಪ್ರೈವೇಟ್ ಲಿಮಿಟೆಡ್
ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ,
ಬೆಂಗಳೂರು-560 001

ಟೆಲಿಕಾಂ ಹಗರಣ ಇದು ನಿಮಗೆ ಗೊತ್ತೇ?

ಟೆಲಿಕಾಂ ಹಗರಣ ಈಗ ದೊಡ್ಡ ಸುದ್ದಿಯಾಗಿದೆ. ಸಂಸತ್ತಿನ ಎರಡೂ ಸದನಗಳಲ್ಲಿ ಒಂದು ವಾರ ಕಾಲ ಕಲಾಪಗಳು ನಡೆಯದಂತಾಗಿದೆ. ದೂರ ಸಂಪರ್ಕ ಮಂತ್ರಿಗಳು ತಮಗೆ ಬೇಕಾದವರಿಗೆ ದೂರಸಂಪರ್ಕ ಸೇವೆಗಳ ಕಾಂಟ್ರಾಕ್ಟ್ ಕೊಡಿಸಿದ್ದಾರೆ ಎಂಬ ಆಪಾದನೆಯ ಮೇಲೆ ಅವರ ರಾಜೀನಾಮೆ ಕೇಳಲಾಗುತ್ತಿದೆ. ಆದರೆ ಟೆಲಿಕಾಂ ಖಾಸಗೀಕರಣ ಹಗರಣದ ಸ್ವರೂಪ ಕೇವಲ ಇಷ್ಟೇ ಅಲ್ಲ. ಕಳೆದ ವಾರ ಹೇಳಿರುವಂತೆ ಖಾಸಗೀಕರಣದ ಪ್ರಯತ್ನದ ಆರಂಭದಿಂದಲೇ ಈ ಹಗರಣದ ಆರಂಭವಾಗಿದೆ. ಈ ಹಗರಣದ ಬಗ್ಗೆ ಒಂದು ತಿಂಗಳ ಹಿಂದೆಯೇ ಸಿಪಿಐ(ಎಂ) ಕೇಂದ್ರ ಸಮಿತಿ ವಾರಪತ್ರಿಕೆ 'ಪೀಪಲ್ಸ್ ಡೆಮಾಕ್ರಸಿ'ಯಲ್ಲಿ ಕಾಂ. ನಿಲೋತ್ಪಲ ಬಸುರವರು ಬರೆದ ಲೇಖನದ ಕೆಲವು ಅಂಶಗಳನ್ನು ಇಲ್ಲಿ ಕೊಡುತ್ತಿದ್ದೇವೆ.

ಸಂಪನ್ಮೂಲದ ಕೊರತೆಯ ಲೆಕ್ಕಾಚಾರವೇ ತಪ್ಪು

ಸರಕಾರ ರಾಷ್ಟ್ರೀಯ ದೂರಸಂಪರ್ಕ ನೀತಿಯನ್ನು ಸಂಸತ್ತಿನಲ್ಲಿ ಮಂಡಿಸಿದಾಗ ಅದರ ಧ್ಯೇಯೋದ್ದೇಶಗಳೇನೋ ಚೆನ್ನಾಗಿಯೇ ಇದ್ದವು. ಆದರೆ ದೂರಸಂಪರ್ಕವನ್ನು ವ್ಯಾಪಕವಾಗಿ ಬೆಳೆಸಲು ಬೇಕಾಗುವ ಸಂಪನ್ಮೂಲದ ಲೆಕ್ಕಾಚಾರ ಮಾತ್ರ ಸರಿಯಾಗಿರಲಿಲ್ಲ. ಬಂಡವಾಳವನ್ನು ಆಹ್ವಾನಿಸುವುದನ್ನು ಸಮರ್ಥಿಸಲು ಸಂಪನ್ಮೂಲದ ಅಭಾವವನ್ನು ಉತ್ಪ್ರೇಕ್ಷಿಸಿ ಹೇಳಲಾಗಿತ್ತೆಂದು ಆ ಮೇಲೆ ತಿಳಿಯಿತು. ಸರಕಾರದ ದಸ್ತಾವೇಜಿನಲ್ಲಿ 23,000 ಕೋಟಿ ರೂಪಾಯಿಗಳ ಸಂಪನ್ಮೂಲದ ಕೊರತೆಯಾಗುತ್ತದೆ ಎಂದು ಹೇಳಲಾಗಿತ್ತು. ಆದರೆ ಅಂಚೆ-ತಂತಿ ಮಂಡಳಿಯ ಮಾಜಿ ಅಧ್ಯಕ್ಷರೊಬ್ಬರಾದ ದೇವೇಂದ್ರ ಕುಮಾರ್ ಸಂಘಾಲ್ ರ ಅಧ್ಯಯನದ ಪ್ರಕಾರ ಸಂಪನ್ಮೂಲದ ಕೊರತೆಯಾಗುವುದು 5300 ಕೋಟಿ ರೂ. ಮಾತ್ರ. ಅವರು ದೂರಸಂಪರ್ಕ ವಲಯದ ವಿವಿಧ ವರದಿಗಳಿಂದ, ಸಂಸತ್ತಿನಲ್ಲಿ ನೀಡಿದ ಅಂಕಿ-ಅಂಶಗಳಿಂದಲೇ ಈ ತೀರ್ಮಾನಕ್ಕೆ ಬಂದಿದ್ದರು. ಇಷ್ಟು ಸಂಪನ್ಮೂಲ ಸಂಗ್ರಹಿಸಲು ಖಾಸಗಿಯವರ, ಅದರಲ್ಲೂ ವಿದೇಶೀ ಬಹುರಾಷ್ಟ್ರೀಯ ಕಂಪನಿಗಳ ಇಕ್ವಿಟಿ ಆಹ್ವಾನಿಸುವ ಅಗತ್ಯವಿರಲಿಲ್ಲ.

ಟೆಂಡರ್‌ನ ಶರತ್ತುಗಳಲ್ಲೇ....

ಮೂಲಭೂತ ದೂರಸಂಪರ್ಕ ಸೇವೆಗಳನ್ನು ಖಾಸಗಿಯವರಿಗೆ ವಹಿಸಿಕೊಡುವ ಟೆಂಡರ್‌ಗಳ ಶರತ್ತುಗಳಲ್ಲೇ ಎರಡು ಸಿಟ್ಟಿಗೆಬ್ಬಿಸುವ ಅಂಶಗಳಿದ್ದವು. ಮೊದಲನೆಯದಾಗಿ, ಈ ಟೆಂಡರ್‌ನಲ್ಲಿ ಭಾಗವಹಿಸುವ ಭಾರತೀಯ ಕಂಪನಿಗಳು ಕಡ್ಡಾಯವಾಗಿ ವಿದೇಶೀ ಕಂಪನಿಗಳೊಂದಿಗೆ ಇಕ್ವಿಟಿ ಪಾಲುದಾರಿಕೆ ಹೊಂದಬೇಕು. ಅದರ ಪಾಲು 49% ದವರೆಗೂ ಇರಬಹುದು. ಸ್ವತಂತ್ರ ಭಾರತೀಯ ಕಂಪನಿಗಳ ವಿರುದ್ಧ ಇದು ಒಂದು ಸ್ಪಷ್ಟ ಭೇದಭಾವದ ವರ್ತನೆ ಇದು. ಎರಡನೆಯದಾಗಿ, ಈ ಟೆಂಡರ್‌ನಲ್ಲಿ ವಿದೇಶೀ ಸರಕಾರೀ ಕಂಪನಿಗಳೂ ಭಾಗವಹಿಸಬಹುದಾಗಿತ್ತು, ಆದರೆ ಭಾರತದ ಸಾರ್ವಜನಿಕ ವಲಯದ ಕಂಪನಿಗಳು ಭಾಗವಹಿಸುವಂತಿರಲಿಲ್ಲ!

ಬೇಜವಾಬ್ದಾರಿತನವೇ ಅಥವಾ....

ದೂರಸಂಪರ್ಕ ಕೇವಲ ಸೇವೆ ಒದಗಿಸುವ ಇನ್ನೊಂದು ಉದ್ದಿಮೆಯಲ್ಲ. ಅದೊಂದು ದೇಶದ ಭದ್ರತೆಯ ದೃಷ್ಟಿಯಿಂದ ಸೂಕ್ಷ್ಮವಾದ ವಲಯ. ದೂರಸಂಪರ್ಕವನ್ನು ದೇಶದ ಎರಡನೇ ರಕ್ಷಣಾ ವ್ಯವಸ್ಥೆಯೆನ್ನಲಾಗುತ್ತದೆ. ಇಂತಹ ಒಂದು ವ್ಯವಸ್ಥೆಯಲ್ಲಿ ಖಾಸಗೀಕರಣ ಮಾಡುವಾಗ ವಿದೇಶೀ ಕಂಪನಿಗಳಿಗೆ ಅವಕಾಶ ನೀಡುವಾಗ ಇದರಿಂದ ಏನಾಗಲು ಸಾಧ್ಯ ಎಂಬ ಬಗ್ಗೆ ತನ್ನ ರಕ್ಷಣಾ ಇಲಾಖೆಯೊಂದಿಗೆ ಸಮಾಲೋಚಿಸುವುದು ಕೂಡಾ ಸರಕಾರಕ್ಕೆ ಅಗತ್ಯವೆನಿಸಲಿಲ್ಲ. ಅಥವಾ ಈ ರೀತಿ ವಹಿಸಿಕೊಡುವುದರಿಂದ ದೂರಸಂಪರ್ಕ ಇಲಾಖೆಯ ಭವಿಷ್ಯದ ಆದಾಯದ ಮೇಲೆ ಎಂತಹ ಪರಿಣಾಮ ಬೀರಬಹುದೆಂಬ ಬಗ್ಗೆ ಕೂಡಾ ಅಧ್ಯಯನ ನಡೆಸಿಲ್ಲ ಎಂದು ನಾಚಿಕೆಯಿಲ್ಲದೆ ಕಳೆದ ಸಂಸತ್ ಅಧಿವೇಶನದ ವೇಳೆಗೆ ರಾಜ್ಯಸಭೆಯಲ್ಲಿ ಒಪ್ಪಿಕೊಳ್ಳಲಾಯಿತು! ದೂರಸಂಪರ್ಕ ಇಲಾಖೆ ಹಾಗೂ ಮಂತ್ರಿಗಳು ಈಗ ಖಾಸಗಿಯವರಿಗೆ ವಹಿಸಿಕೊಟ್ಟು ದೇಶದ ಬೊಕ್ಕಸಕ್ಕೆ ಎಷ್ಟು ಲೈಸೆನ್ಸ್ ಶುಲ್ಕ ತಲುಪಿಸಿಕೊಟ್ಟಿದ್ದೇವೆ ಎಂದಷ್ಟೇ ತನ್ನ ಬೆನ್ನು ತಾನೇ ತಟ್ಟಿಕೊಂಡು ಹೇಳಿಕೊಂಡಿದ್ದಾರಷ್ಟೇ.

ಸಂಸತ್ತನ್ನು ವಿಶ್ವಾಸಕ್ಕೆ ತೆಗೊಳ್ಳಲು ಭಯವೇಕೆ?

ಒಂದು ಸ್ವತಂತ್ರ "ಭಾರತ ದೂರಸಂಪರ್ಕ ಹತೋಟಿ ಪ್ರಾಧಿಕಾರ(TRAI) ರಚಿಸುವ ಮಾತು ಸರಕಾರ ಮಂಡಿಸಿದ ಹೊಸ ದೂರಸಂಪರ್ಕ ನೀತಿಯಲ್ಲಿತ್ತು. ಸಾಮಾನ್ಯವಾಗಿ ಹಲವು ಕಂಪನಿಗಳು ವಲಯದಲ್ಲಿರುವ ಸಂದರ್ಭದಲ್ಲಿ ಸ್ವತಂತ್ರ ಹತೋಟಿ ಸಂಘಟನೆಯೊಂದು ಅತ್ಯವಶ್ಯಕ ಎಂದು ಹಲವು ದೇಶಗಳು ಮನಗಂಡಿವೆ. ವಿವಿಧ ಕಂಪನಿಗಳ ನಡುವೆ ಸಮಾನ ಸ್ಪರ್ಧೆ, ದೇಶದ ಭದ್ರತಾ ಹಿತಾಸಕ್ತಿಗಳ ರಕ್ಷಣೆ, ಬಳಕೆದಾರರ ಹಿತಾಸಕ್ತಿ ರಕ್ಷಣೆ ಇತ್ಯಾದಿಗಳ ಉಸ್ತುವಾರಿ ಈ ಪ್ರಾಧಿಕಾರ ಕೆಲಸ ಮಾಡಬೇಕು. ವಾಸ್ತವವಾಗಿ ಭಾರತ ಸರಕಾರದ ದೂರಸಂಪರ್ಕ ವ್ಯವಸ್ಥೆಯನ್ನು ಖಾಸಗಿಯವರಿಗೆ ವಹಿಸಲು ಟೆಂಡರ್ ಕರೆಯುವ ಮೊದಲು ಈ ಪ್ರಾಧಿಕಾರವನ್ನು ರಚಿಸಬೇಕಾಗಿತ್ತು.

ಆದರೆ ಹಾಗೆ ಮಾಡಲಿಲ್ಲ. ಇದೇ ದೂರಸಂಪರ್ಕ ಇಲಾಖೆಯ ನಿಜವಾದ ಉದ್ದೇಶಗಳ ಬಗ್ಗೆ ಸಂಶಯ ಮೂಡಿಸಲು ಸಾಕಷ್ಟಾಗುತ್ತದೆ. ಟೆಂಡರ್ ಕರೆಯುವ ಮೊದಲೇ ದೂರಸಂಪರ್ಕ ಇಲಾಖೆಗೆ ಎಸ್.ಟಿ.ಡಿ., ಐ.ಎಸ್.ಡಿ. ಸೇವೆಗಳ ಇಕ್ವಿಟಿ ಹಕ್ಕುಗಳನ್ನು ಕಡಿತ ಮಾಡಿ ಇಲಾಖೆ ಸುಮಾರು 38000 ಕೋಟಿ ರೂ. ಆದಾಯ ಕಳಕೊಳ್ಳುವಂತೆ ಮಾಡಲಾಗಿತ್ತು. ವಾಸ್ತವವಾಗಿ ಇದನ್ನು TRAI ನಿರ್ಧರಿಸಬೇಕಾಗಿತ್ತು.

ಮೊದ ಮೊದಲು ಭಾರತ ಸರಕಾರಕ್ಕೆ ಪ್ರಾಧಿಕಾರ ರಚನೆಯ ಯೋಚನೆಯಲ್ಲೇ ಇರಲಿಲ್ಲ. ಆದರೆ ಕೆಲವು ಕಂಪನಿಗಳಿಗೆ ವಿಶೇಷ ಒಲವು ತೋರಲಾಗಿದೆ ಎಂಬ ಸಂಶಯ ಹರಡಲಾರಂಭಿಸಿದಾಗ ನಿರ್ವಾಹವಿಲ್ಲದೆ ಸಂಸತ್ತಿನಲ್ಲೊಂದು ಮಸೂದೆ ತಂದಿತು.

ಆದರೆ ಈಗಲೂ ಸರಕಾರ ತನ್ನ ಕಣ್ಣುಮುಚ್ಚಾಲೆ ಆಟ ನಡೆಸಲು ಪ್ರಯತ್ನಿಸಿತು. ಈ ಮಸೂದೆ ಪ್ರಕಾರ TRAI ಒಂದು ಸ್ವತಂತ್ರ ರಚನೆಯಾಗಿರದೆ ದೂರಸಂಪರ್ಕ ಮಹಾ ನಿರ್ದೇಶಕರ ಕೈಕೆಳಗಿರುವ ಶಾಸನಾತ್ಮಕ ಅಧಿಕಾರವಿಲ್ಲದ ಸಂಸ್ಥೆಯಾಗಿತ್ತು. ಸಹಜವಾಗಿಯೇ ಆಳುವ ಪಕ್ಷ ಅಲ್ಪಮತದಲ್ಲಿರುವ ರಾಜ್ಯಸಭೆಯಲ್ಲಿ ಈ ಸಮೂದೆ ಪಾಸಾಗಲಿಲ್ಲ- ಒಂದು ಸೆಲೆಕ್ಷನ್ ಕಮಿಟಿಗೆ ಅದನ್ನು ಒಪ್ಪಿಸಬೇಕೆಂಬ ಸಲಹೆ ಬಂದಾಗ ಹಿಂದೇಟು ಹಾಕಿ ಪ್ರತಿಪಕ್ಷಗಳೊಡನೆ ಸಮಾಲೋಚಿಸಿ ನಂತರ ಸಮಗ್ರ ಮಸೂದೆ ತರುವುದಾಗಿ ಸುಖರಾಂ ತಿಳಿಸಿದರು.

ಸರಕಾರದ ಇತ್ತೀಚಿನ ವಂಚಕ ಸಂಸ್ಕೃತಿಗೆ ಅನುಗುಣವಾಗಿ ಈ ಭರವಸೆ ಈಡೇರಿಯೇ ಇಲ್ಲ. TRAI ರಚಿಸಲು ಸುಗ್ರೀವಾಜ್ಞೆ ತಯಾರಿಸಲಾಗಿದೆಯಂತೆ. ಆದರೆ ಇದುವರೆಗೂ ಅದಕ್ಕೆ ರಾಷ್ಟ್ರಪತಿಗಳ ಒಪ್ಪಿಗೆಯ ಮೊಹರು ಬಿದ್ದಿಲ್ಲ. ಒಟ್ಟಿನಲ್ಲಿ ದೇಶ ಭದ್ರತೆಯ ಈ ಪ್ರಮುಖ ಪ್ರಶ್ನೆಯಲ್ಲಿ ಸರಕಾರ ಸಂಸತ್ತನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ತನ್ನ ಮನಬಂದಂತೆ ಆರಂಭದಿಂದಲೇ ಮಾಡುತ್ತಾ ಬಂದಿದೆ.

ಏಕೆ? ಇದು 'ಸುಧಾರಣೆ' ತರುವ ರೀತಿಯೇ? ಅಥವಾ 'ವ್ಯವಹಾರ'ಗಳನ್ನು ಕುದುರಿಸಲಿಕ್ಕಾಗಿಯೇ ಈ ಸುಧಾರಣೆಗಳೇ ಎಂಬ ಸಂಶಯವೆದ್ದರೆ ಆಶ್ಚರ್ಯವೇನು?

ಒಟ್ಟಿನಲ್ಲಿ 'ಸುಧಾರಣೆ'ಯ ಹೆಸರಲ್ಲಿ ಇನ್ನೊಂದು ಪ್ರಮುಖ ವಲಯದಲ್ಲಿ ಭಾರತದ ಸ್ವಾವಲಂಬನೆಗೆ ಕೊಡಲಿಯೇಟು ಬಿದ್ದಿದೆ. ಇದು ಟೆಲಿಕಾಂ ಹಗರಣದ ಸಾರ.



ಉದಾರ ಆರ್ಥಿಕಕತೆಯ ಫಲ ಇದು
- ಉದಾರ ಭ್ರಷ್ಟಾಚಾರ

ಕರ್ನಾಟಕ ಸುದ್ದಿ

ಭೂರಹಿತರ ಪ್ರತಿಭಟನಾ ಸಭೆ

ಬೆಳ್ತಂಗಡಿ: ಬೆಳ್ತಂಗಡಿ ತಾಲೂಕು ಲ್ಯಾಲ ಪಂಚಾಯತು ವ್ಯಾಪ್ತಿಯಲ್ಲಿ ಸರಕಾರಿ ಸ್ಥಳಗಳಲ್ಲಿ ಮನೆ ಕಟ್ಟಿ ವಾಸ್ತವ್ಯವಿರುವವರಿಗೆ ಹಕ್ಕು ಪತ್ರ, ವಸತಿಹೀನರಾದ ಬಡವರಿಗೆ ನಿವೇಶನ ಒದಗಿಸುವಂತೆ ಹಾಗೂ ಪಂಚಾಯತು ಕಾರ್ಯ ಚಟುವಟಿಕೆಗಳ ಅವ್ಯವಹಾರಗಳ ಮೇಲೆ ಅಸಮಧಾನ ಸೂಚಿಸಿ ಭೂರಹಿತರು ನ.27ರಂದು ಲ್ಯಾಲ ಪಂಚಾಯತು ವಠಾರದಲ್ಲಿ ಪ್ರತಿಭಟನೆ ಹಾಗೂ ಸಾರ್ವಜನಿಕ ಸಭೆ ನಡೆಸಿದರು.

ಕರ್ನಾಟಕ ಪ್ರಾಂತ ರೈತ ಸಂಘ, ಬೆಳ್ತಂಗಡಿ ಶಾಖೆಯ ಆಶ್ರಯದಲ್ಲಿ ನಡೆದ ಭೂರಹಿತರ ಪ್ರತಿಭಟನಾ ಸಭೆಯಲ್ಲಿ ದ.ಕ. ಜಿಲ್ಲಾ ರೈತ ಸಂಘದ ಅಧ್ಯಕ್ಷ ಕಾಂ. ಜನಾರ್ಧನ ನಾಯಕ್, ಕಾಂ. ಬಿಸ್.ಎಂ. ಹರಿದಾಸ್, ನ್ಯಾಯವಾದಿ ಕಾಂ. ಬಿ.ಎಂ.ಭಟ್ ಭಾಗವಹಿಸಿ, ಲ್ಯಾಲ ಪಂಚಾಯತು ವ್ಯಾಪ್ತಿಯ ಬಡಜನರಿಗೆ ನಿವೇಶನ, ಸರಕಾರಿ ಭೂಮಿಯಲ್ಲಿ ಈಗಾಗಲೇ ಮನೆ ಕಟ್ಟಿ ಕುಳಿತವರಿಗೆ ನಿವೇಶನದ ಹಕ್ಕು ಪತ್ರ ನೀಡುವಂತೆ ಒತ್ತಾಯಿಸಿದರು. ಕಾಂ. ಡಾಕಯ್ಯ ನಾಯ್ಕ ಪ್ರಾರಂಭದಲ್ಲಿ ಸ್ವಾಗತಿಸಿ ಕೊನೆಯಲ್ಲಿ ವಂದಿಸಿದರು.

ಕಷ್ಟಪಡುತ್ತಿದ್ದ 25 ಕುಟುಂಬಗಳಿಗೆ ಬೆಳ್ತಂಗಡಿ ತಾಲೂಕು ರೈತ ಸಂಘದ ನೇತೃತ್ವದಲ್ಲಿ ಸರಕಾರ ಭೂಮಿಯನ್ನು ಆಕ್ರಮಿಸಿ ಶ್ರಮದಾನದ ಮೂಲಕ ಮನೆ ಕಟ್ಟಿಸಿಕೊಡಲಾಯಿತು. ಮತ್ತು ಅವರಿಗೆ ಹಕ್ಕುಪತ್ರ ನೀಡಲು ಒತ್ತಾಯಿಸಲಾಗಿತ್ತು. ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳು ಈ ಬಡ ನಿರ್ಗತಿಕರ ವಾಸ್ತವ್ಯಕ್ಕೆ ಪ್ರತಿರೋಧ ವ್ಯಕ್ತಪಡಿಸಿದರು. ಹೊಸದಾಗಿ ಕಟ್ಟಿದ ಮನೆಯಲ್ಲಿ ಕುಳಿತರೆ ಜಾಗ್ರತೆ ಎಂದು ಸಭೆಯಲ್ಲಿ ಎಚ್ಚರಿಕೆ ಕೊಡಲಾಯಿತು. ಸದ್ರಿ 25 ಮನೆಗಳ ವಠಾರಕ್ಕೆ ಕ್ರಾಂತಿನಗರ ಎಂದು ಹೆಸರಿಡಲಾಯಿತು.



ಚಿಂತಾಮಣಿಯಲ್ಲಿ ಸಿಪಿಐ(ಎಂ) ಧರಣಿ

ರೈತ ವಿರೋದಿ ನೀತಿಗಳನ್ನು ಹೀಗೆಯೇ ಮುಂದುವರಿಸಿದಲ್ಲಿ ರೈತಾಪಿ ವರ್ಗ ಸರಕಾರದ ವಿರುದ್ಧ ಸಿಡಿದೇಳುವುದಾಗಿ ಸಿಪಿಐ(ಎಂ) ಮುಖಂಡ ಜಿ.ಸಿ. ಬಯ್ಯಾರೆಡ್ಡಿ ಎಚ್ಚರಿಸಿದರು.

ಅವರು ವಿದ್ಯುತ್ ಕಡಿತ ಪಂಪ್‌ಸೆಟ್‌ಗಳಿಗೆ ವಿದ್ಯುತ್ ದರ ನಿಗದಿ ಮತ್ತಿತರ ನೀತಿಗಳನ್ನು ಹಿಂದಕ್ಕೆ ಪಡೆಯುವಂತೆ ಒತ್ತಾಯಿಸಿ ಸಿಪಿಐ(ಎಂ) ರಾಜ್ಯಾದ್ಯಂತ ಕೆಇಬಿ ಕಛೇರಿಗಳ ಮುಂದೆ ಸಾಮೂಹಿಕ ಧರಣಿ ನಡೆಸುವಂತೆ ನೀಡಿದ್ದ ಕರೆಯಂತೆ ಇಲ್ಲಿನ ಕೆಇಬಿ ಎದುರು ಧರಣಿನಿರತ ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡುತ್ತಿದ್ದರು.

ರೈತರ ಹಿತಾಸಕ್ತಿಗೆ ಧಕ್ಕೆ ತರುವಂತಹ ನೀತಿಗಳು ಮುಂದುವರಿದಲ್ಲಿ 1980ರಲ್ಲಿ ಗುಂಡೂರಾಯರ ಸರಕಾರದ ವಿರುದ್ಧ ಹಾಗೂಅಧಿಕಾರಿಗಳ ವಿರುದ್ಧ ರೈತಾಪಿ ವರ್ಗ ಸಿಡಿದೆದ್ದಂತೆ ಈಗಲೂ ದಂಗೆ ಏಳಲು ಹೆಚ್ಚು ದಿನಗಳಿಲ್ಲ ಎಂದು ಎಚ್ಚರಿಸಿದರು.

ಬಂಡವಾಳಶಾಹಿಗಳಿಂದ ಬರಬೇಕಾದ ಸಾವಿರಾರು ಕೋಟಿ ತೆರಿಗೆಯನ್ನು ಸಮರ್ಪಕ ರೀತಿಯಲ್ಲಿ ಸಂಗ್ರಹ ಮಾಡಿದರೆ ರಾಜ್ಯದಲ್ಲಿ ವಿದ್ಯುತ್ ಅಭಾವ ವಿಲ್ಲದಂತೆಯೇ ಮಾಡಬಹುದಾಗಿದೆ ಎಂದರು.

ಈ ಸಂದರ್ಭದಲ್ಲಿ ಮನವಿ ಸ್ವೀಕರಿಸಲು ಬಂದ ಕೆಇಬಿಯ ಕಾರ್ಯನಿರ್ವಾಹಕ ಅಭಿಯಂತರರನ್ನು ಮುಷ್ಕರ ನಿರತ ಕಾರ್ಯಕರ್ತರು ಹಾಗೂ ಸಾರ್ವಜನಿಕರು ತೀವ್ರ ತರಾಟೆಗೆ ತೆಗೆದುಕೊಂಡರು. ಸಮರ್ಪಕ ಉತ್ತರ ನೀಡುವುದು ಅಧಿಕಾರಿಗಳಿಂದಾಗಲಿಲ್ಲ.

ಧರಣಿಯಲ್ಲಿ ಸಿಪಿಐ(ಎಂ)ನ ಮುಖಂಡರಾದ ಅಶ್ವಥನಾರಾಯಣರೆಡ್ಡಿ, ಗೋಪಿನಾಥ್, ಚಿನ್ನಪ್ಪ ರೆಡ್ಡಿ, ರಾಮಚಂದ್ರಪ್ಪ, ನರಸಿಂಹಯ್ಯ, ರಾಜಕುಮಾರ್ ಹಾಗೂ ತಾಲ್ಲೂಕಿನ ವಿವಿಧ ಭಾಗಗಳಿಂದ ಬಂದಿದ್ದ ಸುಮಾರು 300ಕ್ಕೂ ಹೆಚ್ಚು ರೈತರು ಭಾಗವಹಿಸಿದ್ದರು.

ಇದಕ್ಕೂ ಮುನ್ನ ಕಾರ್ಯಕರ್ತರು, ರೈತರು ನಗರದ ಬೀದಿಗಳಲ್ಲಿ ಮೆರವಣಿಗೆ ನಡೆಸಿ, ಸರಕಾರದ ವಿರುದ್ಧ ಘೋಷಣೆ ಹಾಗೂ ವಿದ್ಯುತ್ ಕಳ್ಳರನ್ನು ಉಗ್ರವಾಗಿ ಶಿಕ್ಷಿಸುವಂತೆ ಒತ್ತಾಯಿಸಿದರು.

'ಭೂಪಾಲ್ ಅನಿಲ ದುರಂತ ಒಂದು ಸಂವಾದ'

ತುಮಕೂರು: ದೇಶದಲ್ಲಿ ಬಂದು ಬಂಡವಾಳ ಹೂಡಲು ಹೊರಟಿರುವ ಬಹುರಾಷ್ಟ್ರೀಯ ಕಂಪನಿಗಳು ನಮ್ಮ ಸಂಪನ್ಮೂಲಗಳನ್ನು ಬಳಸಿ ಲಾಭ ಗಳಿಸುವುದಷ್ಟೇ ತಮ್ಮ ಕಾರ್ಯವೆಂದು ಭಾವಿಸಿದೆ. ಇಲ್ಲಿಯ ಸಾಮಾಜಿಕ ಹೊಣೆಗಾರಿಕೆಯೆಡೆ ಸಹ ಗಮನಹರಿಸಬೇಕೆಂದು ಪ್ರಾಂಶುಪಾಲರಾದ ಶ್ರೀ ಗೋವಿಂದರಾಜು ಅವರು ಅಭಿಪ್ರಾಯ ಪಟ್ಟರು.

ಶ್ರೀಯುತರು ಭಾರತ ಜ್ಞಾನ ವಿಜ್ಞಾನ ಸಮಿತಿ, ತುಮಕೂರು ವಿಜ್ಞಾನ ಕೇಂದ್ರ ಹಾಗು ಊರುಕೆರೆ ಕ.ರಾ.ವಿ.ಪ. ಘಟಕಗಳು ಜಂಟಿಯಾಗಿ ದಿನಾಂಕ 5-12-95 ರಂದು ಊರುಕೆರೆ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಏರ್ಪಡಿಸಿದ್ದ ' ಭೂಪಾಲ್ ದುರಂತದ ಸಂವಾದ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು. ಚಿಣ್ಣರಮೇಳ ಜಿಲ್ಲಾ ಸಂಚಾಲಕ ಸೈಯದ್ ಮುಜೀಬ್ ಅವರು ಹಾಜರಿದ್ದು ಮಾತನಾಡಿದರು. ಭೂಪಾಲ್ ಅನಿಲ ದುರಂತವು MNCಗಳ ಮೂಲಕ ಸಾಮ್ರಾಜ್ಯಶಾಹಿ ಶಕ್ತಿಗಳು ನಡೆಸಿದ ರಣರಂಗ ಪ್ರಯೋಗ ಎಂದು ಅಪಾದಿಸಿದರು. ಈದುರಂತಕ್ಕೆ ಕಾರಣವಾಗಿರುವ UCC ಉತ್ಪನ್ನಗಳನ್ನು ಬಹಿಷ್ಕರಿಸಬೇಕೆಂದು ಕರೆ ನೀಡಿದರು.

ಈ ಕಾರ್ಯಕ್ರಮದಲ್ಲಿ ವಿಜ್ಞಾನ ಕೇಂದ್ರದ ಕಛೇರಿ ಕಾರ್ಯದರ್ಶಿ ಜಿ. ಅಶ್ವಥ, ಡಿ.ವೈ.ಎಫ್.ಐ ನ ಸಹಕಾರ್ಯದರ್ಶಿ ಆರ್. ರವೀಶ ಅವರು ಉಪಸ್ಥಿತರಿದ್ದರು. ಶಿಕ್ಷಕರಾದ ಈಶ್ವರಪ್ಪ ರವರು ನಿರೂಪಿಸಿ, ವಂದಿಸಿದರು. ವಿಜ್ಞಾನ ಶಿಕ್ಷಕರಾದ ಮಿಡಿಗೇಶಿ ನಾರಾಯಣರವರು ಉಪಸ್ಥಿತರಿದ್ದರು.

ಮಹಿಳಾ ಸ್ವಾತಂತ್ರ್ಯ

ಮಹಿಳೆಯರ ಕುರಿತಾಗಿ ಕಾವಿ
ಪರಿವಾರ
ಹೇಳುವುದು ಏನೆಂದು ಗೊತ್ತೇನೆ
ಮೀರಾ?
ನಿನಗಿಲ್ಲ ಎಲ್ಲಿಯೂ ಸಮಾನ
ಹಕ್ಕು
ನೀನೊಂದು ಮನೆಯಲ್ಲಿ ಸಾಕಿರುವ
ಬೆಕ್ಕು.

–ವಿಡಂಬಾರಿ

ಕ್ಯೂಬಾ ಸೌಹಾರ್ದ ದಿನಾಚರಣೆ

ಮಾವಿನಕುರ್ವಾ: ಮಾವಿನಕುರ್ವಾನ ಹಂಚು ಕಾರ್ಖಾನೆಯಲ್ಲಿ ಕ್ಯೂಬಾ ಸೌಹಾರ್ದದಿನ ಆಚರಿಸಲಾಯಿತು. ಅಮೇರಿಕಾ ವಿಧಿಸಿರುವ ದಿಗ್ಬಂಧನವನ್ನು ತಕ್ಷಣ ತೆಗೆದುಹಾಕಬೇಕೆಂದು ಒತ್ತಾಯಿಸಲಾಯಿತು. ಸಭೆಯನ್ನುದ್ದೇಶಿಸಿ ಸ್ಥಳೀಯ ಕಾರ್ಮಿಕ ನಾಯಕರಾದ ರಾಮಶಿವಯ್ಯಗೌಡ ಹಾಗು ಮಂಜುಪಾಯುಗೌಡ ಮಾತನಾಡಿ ಕ್ಯೂಬಾದ ಜನತೆಗೆ ಸೌಹಾರ್ದ ವ್ಯಕ್ತಪಡಿಸಿದರು.

ನೂತನ ಪೆನ್ಶನ್ ನೀತಿ ಪ್ರತಿಭಟನಾ ಧರಣಿ

ದಾಂಡೇಲಿ: ಸಿಐಟಿಯು ಕೇಂದ್ರ ಸಮಿತಿಯ ಕರೆಯ ಮೇರೆಗೆ ದಾಂಡೇಲಿಯಲ್ಲಿ ಸಿಐಟಿಯು ನೇತೃತ್ವದಲ್ಲಿ ಕಾರ್ಮಿಕರು ಪ್ರತಿಭಟನೆ ನಡೆಸಿದರು. ಡಿಸೆಂಬರ್ 4ರಂದು WCPM ಎಂಪ್ಲಾಯಿಸ್ ಯೂನಿಯನ್ ಕಛೇರಿಯಿಂದ ಮೆರವಣಿಗೆಯನ್ನು ಪ್ರಾರಂಭಿಸಿ ಕಾರ್ಮಿಕರ ವಸತಿಗಳ ಪ್ರಮುಖ ಬೀದಿಗಳಲ್ಲಿ ಕೇಂದ್ರ ಸರಕಾರದ ಕಾರ್ಮಿಕ ವಿರೋಧಿ ಪೆನ್ಶನ್ ಯೋಜನೆಯ ವಿರುದ್ಧ ಘೋಷಣೆಗಳ ಕೂಗುತ್ತ ದಾಂಡೇಲಿಯ ಕಾರ್ಮಿಕ ಇಲಾಖೆಯ ಕಚೇರಿ ಎದುರಿಗೆ ಧರಣಿ ನಡೆಸಲಾಯಿತು. ನಂತರ ಸಭೆಯನ್ನುದ್ದೇಶಿಸಿ ಕಾಂ.ಭೀಮರಾವ್, ಕಾಂ. ಮಾಧವ, ಕಾಂ. ಹರೀಶ್, ಕಾಂ. ಸಾವಂತ, ಕಾಂ. ಮನೋಹರ ನಾಯ್ಕ ರವರು ಈ ಪೆನ್ಶನ್ ಯೋಜನೆಯಿಂದ ಕಾರ್ಮಿಕರಿಗೆ ಆಗುತ್ತಿರುವ ಅನ್ಯಾಯ ಹಾಗು ಆ ಯೋಜನೆಯ ಬಗ್ಗೆ ಸಿಐಟಿಯು ಧೋರಣೆ ಎನು?. ಎನ್ನುವುದನ್ನು ವಿವರಿಸಿ ಹೇಳಿದರು. ನಂತರ ಕಾರ್ಮಿಕ ಇಲಾಖೆ ಮುಖ್ಯಸ್ತರಿಗೆ ಮನವಿ ಪತ್ರ ಅರ್ಪಿಸಲಾಯಿತು. ಪ್ರತಿಭಟನಾ ಮೆರವವಣಿಗೆಯಲ್ಲಿ ಹಾಗು ಧರಣಿಯಲ್ಲಿ ಭಾಗವಹಿಸಿದ ಎಲ್ಲಾ ಕಾರ್ಮಿಕರಿಗೆ ಧನ್ಯವಾದಗಳನ್ನು ಅರ್ಪಿಸಿ ಧರಣಿ ಸತ್ಯಾಗ್ರಹ ಮುಕ್ತಾಯಗೊಳಿಸಲಾಯಿತು.

ಸಕಲೇಶಪುರ: ಕೇಂದ್ರ ಸರಕಾರವು ಸುಗ್ರೀವಾಜ್ಞೆಯ ಮುಖಾಂತರ ಜಾರಿಗೆ ತಂದಿರುವ ನೂತನ ಪಿಂಚಣಿ ಯೋಜನೆಯನ್ನು ವಿರೋದಿಸಿ ಚಳುವಳಿ ನಡೆಸಲು ಸಿಐಟಿಯು ಕೇಂದ್ರ ಸಮಿತಿ ಕೊಟ್ಟ ಕರೆಯನ್ವಯ ಸಕಲೇಶಪುರದಲ್ಲಿ ತೋಟ ಕಾರ್ಮಿಕರು 4.12.95ರಂದು ಪ್ರತಿಭಟನಾ ಪ್ರದರ್ಶನ ನಡೆಸಿದರು.

ಸಕಲೇಶಪುರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದ ನಂತರ ಕಾರ್ಮಿಕರು ಅಂಚೆ ಕಚೇರಿಯ ಮುಂದೆ ಮತ ಪ್ರದರ್ಶನ ನಡೆಸಿ ಅಲ್ಲಿಂದ ತೆರಳಿ ಉಪವಿಭಾಗಾಧಿಕಾರಿಯವರ ಮುಖಾಂತರ ಕೇಂದ್ರದ ಕಾರ್ಮಿಕ ಸಚಿವರಿಗೆ 12 ಬೇಡಿಕೆಗಳುಳ್ಳ ಮನವಿಯನ್ನು ಸಲ್ಲಿಸಲಾಯಿತು. ಸುಮಾರು ಮುನ್ನೂರಕ್ಕೂ ಹೆಚ್ಚು ಕಾರ್ಮಿಕರಿದ್ದ ಈ ಪ್ರತಿಭಟನಾ ಕಾರ್ಯಕ್ರಮದ ನೇತೃತ್ವವನ್ನು ಸಿಐಟಿಯು ರಾಜ್ಯ ಕಾರ್ಯದರ್ಶಿಗಳಲ್ಲೊಬ್ಬರಾದ ಕಾಂ. ವಿ.ಸುಕುಮಾರ್, ತೋಟ ಕಾರ್ಮಿಕರ ಸಂಘದ ಸಹ ಕಾರ್ಯದರ್ಶಿ ಕಾಂ. ದೂಜ ವಹಿಸಿದ್ದರು.

ವಿದ್ಯುತ್ ಕಡಿತ ವಿರೋಧಿಸಿ ಧರಣಿ

ಶಿಡ್ಲಘಟ್ಟ: ವಿದ್ಯುತ್ ಕಡಿತ ಮತ್ತು ಅವ್ಯವಸ್ಥೆಯನ್ನು ವಿರೋಧಿಸಿ ಇದನ್ನು ಸರಿಪಡಿಸುವ ಬೇಡಿಕೆಗಳಿಗಾಗಿ ಒತ್ತಾಯಿಸಿ ವಿದ್ಯುಚ್ಛಕ್ತಿ ಕಛೇರಿಯ ಮುಂದೆ ಡಿ. 11ರಂದು ಶಿಡ್ಲಘಟ್ಟ ತಾಲೂಕು ಘಟಕದ ನೇತೃತ್ವದಲ್ಲಿ 150 ಮಂದಿ ರೈತರು ಮತ್ತು ಕಾರ್ಮಿಕರು ಧರಣಿ ನಡೆಸಿದರು. ನಂತರ ವಿದ್ಯುಚ್ಛಕ್ತಿಯ ಲೋಪದೋಷಗಳ ಬಗ್ಗೆ ಕೆ.ಎಂ.ವೆಂಕಟೇಶ್, ರಹಮತ್ತುಲ್ಲಾ, ಕೆ.ಎನ್. ಪಾಪಣ್ಣನವರು ಮಾತನಾಡಿದರು. ನಂತರ ಸಂಜೆ ಕಛೇರಿಯ ಅಧಿಕಾರಿಗಳ ಮುಖಾಂತರ ಮುಖ್ಯಮಂತ್ರಿಗಳಿಗೆ ಬೇಡಿಕೆಗಳ ಬಗ್ಗೆ ಮನವಿಯನ್ನು ಅರ್ಪಿಸಲಾಯಿತು. ಆರ್‌ಮುನಿಯಪ್ಪ,ಅಬ್ದುಲ್ ಸುಬಾನ್‌ಕಾರ್ಮಿಕರಪರವಾಗಿನೇತೃತ್ವವಹಿಸಿದ್ದರು.

ಬಿಜಾಪುರ: ನಗರದಲ್ಲಿ ವಿದ್ಯುತ್ ಕಡಿತ ವಿರೋಧಿಸಿ ಬೃಹತ್ ಮೆರವಣಿಗೆ ನಡೆಸಿ ಜಿಲ್ಲಾಧಿಕಾರಿಗಳಿಗೆ ಮನವಿ ಅರ್ಪಿಸಿದರು.

ಸಿಂದಗಿ, ಬಿ. ಬಸವನಬಾಗೇವಾಡಿ ಪ್ರದೇಶಗಳಲ್ಲಿ ಮತ ಪ್ರದರ್ಶನ ನಡೆಸಿ ತಹಸೀಲ್ದಾರ್, ಕೆಇಬಿ ಆಫೀಸ್‌ಗೆ ಮನವಿ ಪತ್ರಗಳನ್ನು ಅರ್ಪಿಸಲಾಯಿತು.

ಭೂಸುಧಾರಣಾ ತಿದ್ದುಪಡಿ ನಕಲು ದಹನ

ಹೊನ್ನಾವರ: ಜನತಾದಳ ಸರಕಾರ ತಂದಿರುವ ಭೂಸುಧಾರಣಾ ತಿದ್ದುಪಡಿ ಮಸೂದೆಯ ಪ್ರತಿಯನ್ನು ಹೊನ್ನಾವರದ ತಹಸಿಲ್ದಾರ ಕಚೇರಿ ಎದುರು ಸಭೆಸೇರಿದ ಸಿ.ಪಿ.ಎಂ. ಪಕ್ಷದ ಕಾರ್ಮಿಕರು, ರೈತರು, ಪಕ್ಷಾಭಿಮಾನಿಗಳು ದಹನ ಮಾಡಿದರು. ಪಕ್ಷದ ನಾಯಕರಾದ ಸುರೇಶ ತಾಂಡೇಲ, ಟಿ,ಎಸ್. ನಾಯ್ಕ, ತಿಲಕ ಗೌಡ, ಕೊಪ್ಪಿಕರ ಮುಂತಾದವರು ಸಭೆಯನ್ನುದ್ದೇಶಿಸಿ ಮಾತನಾಡಿದರು.

ಕನಿಷ್ಟ ಕೂಲಿ ಪರಿಷ್ಕರಿಸಲು ಒತ್ತಾಯ

ಹಂಚು ಕಾರ್ಮಿಕರ ಕನಿಷ್ಟ ಕೂಲಿಯನ್ನು ತಕ್ಷಣ ಪರಿಷ್ಕರಿಸಿ, ಹೊಸ ಕನಿಷ್ಟಕೂಲಿ ನಿಗದಿಗೊಳಿಸಬೇಕೆಂದು ಒತ್ತಾಯಿಸಿ, ಹೊನ್ನಾವರದ ಹಂಚು ಕೈಗಾರಿಕೆಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರು ಮೆರವಣಿಗೆ ಮೂಲಕ ಬಂದು ಕಾರ್ಮಿಕ ಅಧಿಕಾರಿಗಳಿಗೆ ಮನವಿ ಅರ್ಪಿಸಿದರು.

ಸಿಪಿಐ(ಎಂ) ಬೆಳಗಾವಿ ಪ್ರಾದೇಶಿಕ ಸಮಿತಿ ರಚನೆ

ಸಿಪಿಐ(ಎಂ)ನ ಬೆಳಗಾವಿ ಪ್ರಾದೇಶಿಕ ಸಮಿತಿ ಡಿಸೆಂಬರ್ 9ರಂದು ಅಸ್ತಿತ್ವಕ್ಕೆ ಬಂದಿದೆ. ಈ ಜಿಲ್ಲೆಯ ಸದಸ್ಯರ ಸಭೆಯೊಂದು ನಡೆದು ರಾಜ್ಯ ಕಾರ್ಯದರ್ಶಿ ಕಾಂ.ಪಿ.ರಾಮಚಂದ್ರ ರಾವ್ ಉದ್ಘಾಟನಾ ಭಾಷಣ ಮಾಡಿದರು. ರಾಜ್ಯ ಸಮಿತಿ ಸದಸ್ಯರು ಹಾಗೂ ಧಾರವಾಡ ಜಿಲ್ಲಾ ಸಮಿತಿ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಸಿ.ಆರ್.ಭಟ್‌ರವರೂ ಹಾಜರಿದ್ದರು.

ಕಾಂ. ವಿ.ಪಿ. ಕುಲಕರ್ಣಿಯವರನ್ನು ಹೊಸದಾಗಿ ಆರಂಭವಾಗಿರುವ ಬೆಳಗಾವಿ ಪ್ರಾದೇಶಿಕ ಸಮಿತಿಯ ಕಾರ್ಯದರ್ಶಿಗಳಾಗಿ ಆರಿಸಲಾಯಿತು. ಸಮಿತಿಯ ಇತರ ಸದಸ್ಯರೆಂದರೆ ಎಸ್.ಹೆಚ್.ಕಪ್ಪಣ್ಣನವರ್, ಎಲ್.ಎಸ್. ನಾಯಕ್, ಜಿ.ಬಿ. ತೋರಣಗಲ್, ಗೈಬುಸಾಬ್ ಮತ್ತು ಎಫ್.ಎಂ.ನದಾಫ್.

ಡಾಲರ್ ಕಣ್ಣಿನ 'ಅಮೇರಿಕ ಗಿಡುಗ'

'ಡಾಲರ್ ಕಣ್ಣಿನಾ ಗಿಡುಗನ ಕೊಂದು ಕಾಪಾಡಬೇಕಿದೆ ಜಗವನ್ನು ಇಂದು...'ಎಂದು ಅಮೇರಿಕದ ದಾಳಿಯ ವಿರುದ್ಧ ಕವಿಗಳು ಕರೆ ನೀಡಿದ್ದರು.

ಈಗ ಯುವಕರ ಸರದಿ. ಈ 'ಡಾಲರ್ 'ಕಣ್ಣಿನ ಗಿಡುಗ' ಯುವಕ ಸಂಸ್ಕೃತಿಯ ಮೇಲೆ ಮಾಡುತ್ತಿರುವ ದಾಳಿಯನ್ನು ಬಿಂಬಿಸುವ ಪ್ರಯತ್ನವೊಂದನ್ನು ತೊಕ್ಕೊಟ್ಟಿನ ಯುವಕರು ನಡೆಸಿದರು.

ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿವೈಎಫ್‌ಐ)ನ 5ನೇ ರಾಜ್ಯ ಸಮ್ಮೇಳನ ಮಂಗಳೂರಿನಲ್ಲಿ ನಡೆದ ಸಂದರ್ಭದಲ್ಲಿ ಏನಾದರೂ ವಿಶೇಷವಾದದ್ದನ್ನು ನೀಡಬೇಕೆಂದು ನಿರ್ಧರಿಸಿದ ಡಿವೈಎಫ್‌ಐನ ತೊಕ್ಕೊಟ್ಟು ಘಟಕ ಅಮೇರಿಕದ ಕೃತ್ಯಗಳನ್ನು ಬಯಲಿಗೆಳೆಯಲು ನಿರ್ಧರಿಸಿತು. ಅತ್ಯಂತ ಸರಳವಾಗಿ ಈ ವಿಷಯ ಎಲ್ಲರಿಗೂ ಗೊತ್ತು ಮಾಡಲು 'ಟ್ಯಾಬ್ಲೋ'ನಿರ್ಮಿಸಿ ಮಂಗಳೂರಿನ ಬೀದಿ ಬೀದಿಗಳಲ್ಲಿ ಕೊಂಡೊಯ್ದರು.

'ಅಮೇರಿಕ ಮುಂದು ಮಾಡುತ್ತಿರುವ ಸಂಸ್ಕೃತಿ ನೇರವಾಗಿ ಕಚ್ಚುತ್ತಿರುವುದು ಯುವಕರನ್ನೇ. ಉದ್ಯೋಗ ಸಿಗದೆ ಹತಾಶೆಯಲ್ಲಿ ಮುಳುಗಿ ಹೋಗಿರುವ ಯುವಕರಲ್ಲಿ ಅಮೇರಿಕ ಬಣ್ಣ ಬಣ್ಣದ ಕನಸುಗಳನ್ನು ಸೃಷ್ಟಿಸಿ ಅವರು ಕಾನುನು ಮೀರುವಂತೆ ಮಾಡುತ್ತಿದೆ.' ಎನ್ನುತ್ತಾರೆ ತೊಕ್ಕೊಟ್ಟು ಸದಸ್ಯರು.

ಗ್ಯಾಟ್ ಒಪ್ಪಂದದ ಮುಖವಾಡದಡಿಯಲ್ಲಿ ಭಾರತವನ್ನು ಪ್ರವೇಶಿಸುತ್ತಿರುವ ಈ ಗಿಡುಗ ಇಲ್ಲಿನ ಯುವಕರ ನೆತ್ತರನ್ನು ಹೀರುತ್ತಿದೆ ಎಂದು ಬಿಂಬಿಸಲಾಗಿತ್ತು. ವಿಶ್ವದ ಪ್ರತಿಕೃತಿಯ ಮೇಲೆ ಯುವಕನೊಬ್ಬನನ್ನು 'ಅಮೇರಿಕ ಗಿಡುಗ' ಕುಕ್ಕಿ ತಿನ್ನುತ್ತಿದ್ದುದನ್ನು ಮಂಗಳೂರಿನ ನೋಡುಗರ ಗಮನ ಸೆಳೆಯಿತು.

–ಜೆ.ಎನ್.ಮೋಹನ್



24/12/199

ದೇವೇಗೌಡರ ಜನತಾದಳ ಸರಕಾರ ಒಂದು ವರ್ಷ ಪೂರೈಸಿದೆ. ಜನಗಳು ಈ ಸರಕಾರದಿಂದ ಏನು ನಿರೀಕ್ಷಿಸಿದ್ದರು, ಈ ಸರಕಾರ ಅವನ್ನು ಎಷ್ಟರಮಟ್ಟಿಗೆ ಈಡೇರಿಸಿದೆ ಎಂಬ ಆಧಾರದಲ್ಲಿ ವಿಮರ್ಶೆ ಮಾಡಿದರೆ ಈ ಸರಕಾರ ಕೆಲವು ಸಾಧನೆಗಳನ್ನು ಮಾಡಿವೆ, ಹಲವಾರು ವಿಷಯಗಳಲ್ಲಿ ತೀರಾ ಜನ-ವಿರೋಧಿಗಳನ್ನು ಅನುಸರಿಸಿ ವಿಫಲವಾಗಿದೆ-ಈ ಬಗ್ಗೆ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಗಳ ವಿಮರ್ಶೆ.

ಜನತಾದಳ ಸರಕಾರದ ಒಂದು ವರ್ಷ ಸಾಧನೆ ಮತ್ತು ವೈಫಲ್ಯ

1994 ಡಿಸೆಂಬರ್‌ನಲ್ಲಿ ಸಾರ್ವತ್ರಿಕ ಚುನಾವಣೆ ನಡೆದು ಕರ್ನಾಟಕ ರಾಜ್ಯದಲ್ಲಿ ಕಾಂಗ್ರೆಸ್(ಐ) ಸೋತು ಜನತಾದಳ ಸರಕಾರವು ಅಧಿಕಾರಕ್ಕೆ ಬಂತು. ಶ್ರೀಯುತ ದೇವೇಗೌಡರು ಮುಖ್ಯಮಂತ್ರಿಯಾದರು. ಈಗ ಈ ಸರಕಾರಕ್ಕೆ ಆಡಳಿತೆಯಲ್ಲಿ ಒಂದು ವರ್ಷ ತುಂಬಿದೆ. ಈ ಸಂದರ್ಭವನ್ನು ಉಪಯೋಗಿಸಿಕೊಂಡು ರಾಜ್ಯದ ವಿವಿಧ ಪತ್ರಿಕೆಗಳು ತಮ್ಮ ಸಂಪಾದಕೀಯವನ್ನು 'ದೇವೇಗೌಡರ ಆಡಳಿತೆಯ ಒಂದು ವರ್ಷ'ದ ಕುರಿತು ಬರೆದಿದ್ದಾರೆ. ಹಾಗೂ ಕಾಂಗ್ರೆಸ್(ಐ) ಪಕ್ಷ ಮತ್ತ ಬಿಜೆಪಿ ಪಕ್ಷಗಳು ಪ್ರಮುಖ ವಿರೋಧ ಪಕ್ಷಗಳಾಗಿ ಈ ಸರಕಾರದ ಸಾಧನೆ 'ಶೂನ್ಯ' ಎಂಬ ಧಾಟಿಯಲ್ಲಿ ಟೀಕೆ ಮಾಡಿದ್ದಾರೆ. ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)ದ ಕರ್ನಾಟಕ ಘಟಕವು ಈ ಸಂದರ್ಭದಲ್ಲಿ ಪ್ರತ್ಯೇಕವಾಗಿ ಸಭೆ ಸೇರಿ ಈ ಕುರಿತು ಒಂದು ವಿಮರ್ಶಾ ವರದಿಯನ್ನು ಅಂಗೀಕರಿಸದಿದ್ದರೂ 1995ರಲ್ಲಿ ನಡೆದ 5–6 ಸಭೆಗಳಲ್ಲಿ ಆಗಿಂದಾಗ್ಗೆ ಚರ್ಚೆ ಮಾಡಿ ಈ ಸರಕಾರದ ಕುರಿತು ಮೂಡಿದ ಅಭಿಪ್ರಾಯಗಳ ಆಧಾರದಲ್ಲಿ ಈ ಸಂದರ್ಭದಲ್ಲಿ ಪಕ್ಷದ ಅಭಿಪ್ರಾಯವನ್ನು ಈ ಲೇಖನದ ಮೂಲಕ ಅಭಿವ್ಯಕ್ತಪಡಿಸಲು ನಾವು ಇಚ್ಛಿಸುತ್ತೇವೆ.

ಮೊಟ್ಟ ಮೊದಲು ಈ ಸಂಪಾದಕೀಯಗಳ ಮತ್ತು ವಿರೋಧ ಪಕ್ಷಗಳ ಮುಖಂಡರ "ವಿಮರ್ಶೆ"ಯ ಕುರಿತು ನಮ್ಮ ವಿಮರ್ಶೆ-ಇವು ತೀರಾ ನಕಾರಾತ್ಮಕವಾದ ವಿಮರ್ಶೆಯಾಗಿದೆ. ಅಲ್ಲದೆ, ಪ್ರಮುಖವಾಗಿ ಮುಂದೆ ಬರುವ ಪುರಸಭೆಗಳ ಚುನಾವಣೆ ಮತ್ತು ಲೋಕಸಭಾ ಚುನಾವಣೆಗಳನ್ನು ದೃಷ್ಟಿಯಲ್ಲಿಟ್ಟು ಮಾಡಿದ ಟೀಕೆಯಾಗಿದೆ ಎಂಬುದು.

ನಮ್ಮ ಪಕ್ಷವು ಹಿಂದೆ ಕಾಂಗ್ರೆಸ್(ಐ) ಸರಕಾರಗಳನ್ನು ಟೀಕೆ ಮಾಡುವಾಗಲೂ ಇಂದು ಜನತಾದಳದ ಸರಕಾರವನ್ನು ಟೀಕೆ ಮಾಡುವಾಗಲೂ ಪ್ರಮುಖವಾಗಿ ಅವುಗಳು ರಾಜ್ಯದ ಬಹುಭಾಗದ ಜನರ ಅದರಲ್ಲೂ ಕೆಳವಿಭಾಗಗಳ ಬಡವರ ಹಿತಗಳನ್ನು ದೃಷ್ಟಿಯಲ್ಲಿಟ್ಟುಕೊಂಡೇ ವಿಮರ್ಶೆ ಮಾಡುತ್ತಾ ಬಂದಿದೆ ಎಂಬುದನ್ನು ಪ್ರಥಮತಃ ಉಲ್ಲೇಖಿಸಲು ಇಚ್ಛಿಸುತ್ತದೆ. ವೀರೇಂದ್ರಪಾಟೀಲರು ಲಿಕ್ಕರ್ ಲಾಬಿಯ ಒತ್ತಡಕ್ಕೆ ಒಳಗಾಗದೆ ದೃಢವಾಗಿ ಎಕ್ಸೈಸ್ ವಸೂಲಿ ಮಾಡಿ ರಾಜ್ಯದ ಬೊಕ್ಕಸವನ್ನು ಭರ್ತಿ ಮಾಡಿದ ಪ್ರಯತ್ನವನ್ನು ಹೊಗಳಿತ್ತು. ಅಲ್ಲದೆ, ಅವರನ್ನು ರಾಜೀವ್ ಗಾಂಧಿ ಅಧಿಕಾರದಿಂದ ಕಿತ್ತು ಹಾಕಿದುದನ್ನು ಖಂಡಿಸಿತ್ತು. ಆ ಮೇಲೆ ಅಧಿಕಾರಕ್ಕೆ ಬಂದ ಶ್ರೀ ಬಂಗಾರಪ್ಪನವರು ತಂದ ಹಲವು ಜನಪರ ಕಲ್ಯಾಣ ಯೋಜನೆಗಳ ಉದ್ದೇಶಗಳನ್ನು ಸ್ವಾಗತ ಮಾಡಿತ್ತಾದರೂ ಈ ಯೋಜನೆಗಳನ್ನು ಉಪಯೋಗಿಸಿಕೊಂಡು ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಭ್ರಷ್ಟಾಚಾರವೆಸಗಿದುದನ್ನು ತೀವ್ರವಾಗಿ ಖಂಡಿಸಿತ್ತು. ಶ್ರೀಮಾನ್ ಮೊಯಿಲಿಯವರು ಖಾಸಗಿ ವಿದ್ಯಾಸಂಸ್ಥೆಗಳು ತಮ್ಮ ಆಡಳಿತದಲ್ಲಿರುವ ಮೆಡಿಕಲ್ ಕಾಲೇಜುಗಳನ್ನು ಇಂಜಿನಿಯರಿಂಗ್ ಕಾಲೇಜುಗಳನ್ನು ಉಪಯೋಗಿಸಿಕೊಂಡು ಸಿಕ್ಕಾಬಟ್ಟೆ ಕ್ಯಾಪಿಟೇಶನ್ ಫೀಸ್ ವಸೂಲಿ ಮಾಡುತ್ತಿದ್ದಾಗ ಅವರ ವಿರುದ್ಧ ಸ್ವಲ್ಪ ಸಮಯ ವಿದ್ಯಾಭ್ಯಾಸ ಲಾಬಿಯ ಒತ್ತಡಕ್ಕೆ ಮಣಿಯದೆ ಕೆಲವು ದೃಢವಾದ ಕ್ರಮಗಳನ್ನು ಕೈಗೊಂಡಾಗ ನಮ್ಮ ಪಕ್ಷವು ಆ ಕ್ರಮಗಳನ್ನು ಶ್ಲಾಘಿಸಿತ್ತು. ಅದೇ ವೇಳೆ ಈ ಕಾಂಗ್ರೆಸ್(ಐ) ಸರಕಾರಗಳು ನರಸಿಂಹರಾಯರ ನೂತನ ಆರ್ಥಿಕ ನೀತಿಗಳನ್ನು ರಾಜ್ಯದಲ್ಲಿ ಚಾಚೂ ತಪ್ಪದೇ ಅನುಸರಿಸಿದುದರಿಂದ ರಾಜ್ಯದ ಅಭಿವೃದ್ಧಿ ಕಾರ್ಯಗಳು, ಉತ್ಪತ್ತಿ ಕಾರ್ಯಕ್ರಮಗಳು, ನೀರಾವರಿ, ವಿದ್ಯುಚ್ಛಕ್ತಿ, ಆರೋಗ್ಯ, ಸ್ಥಳೀಯ ಆಡಳಿತಗಳು, ಮಾರ್ಗಗಳು ಹಾಗೂ ಕೈಗಾರಿಕೆಗಳು-ಹಿಂದೆ ಬಿದ್ದುದನ್ನು ಉದಾಹರಿಸಿ ಅವುಗಳನ್ನು ತೀವ್ರ ಖಂಡನೆ ಮಾಡಿತ್ತು. ಈ ನೂತನ ಆರ್ಥಿಕ ನೀತಿಗಳನ್ನು ಸತತವಾಗಿ 3-4 ವರ್ಷ ವಿರೋಧಿಸಿದುದರ ಪರಿಣಾಮವಾಗಿ ಅವರ ಪರಿಣಾಮಗಳ ಸ್ವಯಂ ಅನುಭವದ ಆಧಾರದಲ್ಲಿ ರಾಜ್ಯದ ಜನತೆ ಕಾಂಗ್ರೆಸ್(ಐ) ಪಕ್ಷವನ್ನು ರಾಜ್ಯದಲ್ಲಿ ಸೋಲಿಸಿದರು. ಮಾತ್ರವಲ್ಲ, ಅಂತಹುದೇ ಆರ್ಥಿಕ ಧೋರಣೆಗಳುಳ್ಳ ಬಿಜೆಪಿಯನ್ನು, ಆ ಪಕ್ಷವು ಅದೆಷ್ಟು ಪ್ರಚಾರ ಗಿಟ್ಟಿಸಿಕೊಂಡರೂ ಅಧಿಕಾರಕ್ಕೆ ಬರಲು ತಡೆ ಮಾಡಿದರು. ಪರ್ಯಾಯ ಆರ್ಥಿಕ ಧೋರಣೆಗಳು ಅನುಸರಿಸುತ್ತದೆ ಹಾಗೂ ಜಾತ್ಯಾತೀತ ಧೋರಣೆಯನ್ನು ದೃಢವಾಗಿ ಅನುಷ್ಠಾನಕ್ಕೆ ತರುತ್ತದೆ ಎಂದು ಭರವಸೆ ಇಟ್ಟು ಜನತಾದಳದ ಸರಕಾರವನ್ನು ಅಧಿಕಾರಕ್ಕೇರಿಸಿತು ನಮ್ಮ ಕರ್ನಾಟಕದ ಜನತೆ.

ಜನತಾದಳದ ರಾಜ್ಯ ಸರಕಾರದ ವಿಮರ್ಶೆಯನ್ನು ನಮ್ಮ ಪಕ್ಷವು ಜನತೆಯ ನಿರೀಕ್ಷೆಗಳ ಆಧಾರದಲ್ಲಿ ಮಾಡಲಿಚ್ಛಿಸುತ್ತೇವೆ.

ಒಂದು, ಹಲವು ವರ್ಷಗಳಿಂದ ವರ್ಷಕ್ಕೆ ಎರಡು ಬಾರಿ ಎಂಬಂತೆ ರಾಜ್ಯದಲ್ಲಿ ಮತೀಯ ದ್ವೇಷ ವಾತಾವರಣವನ್ನು ಸೃಷ್ಟಿಸಲು ಈದ್ಗಾ ಮೈದಾನಿನಲ್ಲಿ ಧ್ವಜಾರೋಹಣ ಎಂಬ ವಿಷಯವನ್ನು ಬಿಜೆಪಿ ಉಪಯೋಗಿಸುತ್ತಾ ಬಂದಿತ್ತು. ಜನತಾದಳದ ದೇವೇಗೌಡರ ಸರಕಾರವು ಅಧಿಕಾರಕ್ಕೆ ಬಂದ ಶುರುವಿನಲ್ಲೇ ಈ ಪ್ರಶ್ನೆಗೆ ಒಂದು ಶಾಂತ ರೀತಿಯ ಪರಿಹಾರವನ್ನು ಕಂಡುಕೊಂಡು ಬಿಜೆಪಿಯ ಪಿತೂರಿಯನ್ನು ಕೊನೆಗಾಣಿಸಿ ರಾಜ್ಯದಲ್ಲಿ ಮತೀಯ ವಾತಾವರಣ ಕೆಡಿಸುವುದಕ್ಕೆ ಒಂದು ರೀತಿಯಲ್ಲಿ ತಡೆ ಹಾಕಿದುದು - ಜನತಾದಳ ಸರಕಾರದ ಒಂದು ಪ್ರಮುಖ ಸಾಧನೆ. ರಾಜ್ಯದ ಎಲ್ಲಾ ಪ್ರಜಾಸತ್ತಾತ್ಮಕ ಜಾತ್ಯಾತೀತ ಪ್ರಜೆಗಳ, ರಾಜ್ಯದ ಮತೀಯ ಸೌಹಾರ್ದತೆಯನ್ನು ಅಪೇಕ್ಷಿಸುವ ಬಹುಮತದ ಜನತೆಯ ಅಭಿನಂದನೆಗೆ ರಾಜ್ಯ ಸರಕಾರವು ಒಳಗಾಯಿತು. ನಮ್ಮ ಪಕ್ಷವೂ ಆಗಲೂ, ಈಗಲೂ ಈ ಬಗ್ಗೆ ಜನತಾದಳ ಸರಕಾರವನ್ನು ಶ್ಲಾಘಿಸುತ್ತದೆ.

ಎರಡು, ರೈತರ ಸಾಲದ ವಿಷಯದಲ್ಲಿ ಕೊನೆಯ ಒಂದು ಹೆಜ್ಜೆಯಾಗಿಯಾದರೂ ನಬಾರ್ಡ್ ಸಂಸ್ಥೆಯು ಮನಮೋಹನ ಸಿಂಗ್ ಕಾಂಗ್ರೆಸ್ ಪ್ರಭಾವಕ್ಕೊಳಗಾಗಿ ಈ ಕ್ರಮವನ್ನು ತೀರಾ ವಿರೋಧಿಸಿದರೂ ರೈತರು 1995 ಮಾರ್ಚ್ 31ರ ಒಳಗೆ ತಮ್ಮ ಸಾಲವನ್ನು ಸಂಪೂರ್ಣವಾಗಿ ಹಿಂತಿರುಗಿಸಿದರೆ, ಅದರ ಮೇಲಿನ ಎಲ್ಲಾ ಬಡ್ಡಿಯನ್ನು ಬಿಟ್ಟುಬಿಟ್ಟು ರೈತರಿಗೆ ಸ್ವಲ್ಪಮಟ್ಟಿಗೆ ಪರಿಹಾರ ... ಕ್ರಮವನ್ನು ರಾಜ್ಯದ ರೈತರೂ ಸ್ವಾಗ... ನಮ್ಮ ಪಕ್ಷವೂ ಸ್ವಾಗತಿಸಿದೆ. ಬಂಡವಾ...ಳಿಗೆ ಅದರಲ್ಲೂ ದೊಡ್ಡದೊಡ್ಡ ಬಂ...ಹಿಗಳಿಗೆ ಕೇಂದ್ರ ಕಾಂಗ್ರೆಸ್ ಸರಕಾ... ರೀತಿಯಲ್ಲಿ ಸಾಲದ ವಿಷಯದಲ್ಲಿ '... ಒದಗಿಸುತ್ತಿರುವಾಗ ರಾಜ್ಯದ ... ಅದರಲ್ಲೂ ರೈತರಿಗೆ ದೇವೇಗೌಡ... ರವು(ಹಿಂದಿನ ರಾಮಕೃಷ್ಣ ಹೆಗ್ಡೆ ಸರಕಾ... ದಂತೆ ಮತ್ತು ಎಡರಂಗದ ಸ... ಮಾಡುತ್ತಾ ಬಂದಂತೆ) ಸತಾಯಿ...ದನ್ನು ನಮ್ಮ ಪಕ್ಷವು ಸ್ವಾಗತಿಸಿದೆ.

ಮೂರು, ಗ್ರಾಮಾಂತರಗಳಲ್ಲಿ ... ಶೌಚಾಲಯಗಳನ್ನು ಕಟ್ಟುವ ಮತ್ತು ... ತರದ ಮತ್ತು ಪೇಟೆ ಪಟ್ಟಣಗಳ ... ಪ್ರತಿಯೊಬ್ಬನಿಗೆ ಮನೆ ನಿವೇಶನ ಮ...ಗಳನ್ನು ಕಟ್ಟುವ ಭರವಸೆಗಳನ್ನು ಜನ...ರವು ಕೊಟ್ಟಿದೆ. ಅದನ್ನು ರಾಜ್ಯ... ಸ್ವಾಗತಿಸಿದೆ. ನಮ್ಮ ಪಕ್ಷವೂ ಸ್ವಾಗತಿಸಿ... ಹಿಂದೆ ಕಾಂಗ್ರೆಸ್ ಸರಕಾರಗಳು ಈ ... ಕೊಟ್ಟ ಭರವಸೆಗಳಂತೆ ಇದು ಹುಸಿ...ರದು ಎಂದು ಮಾತ್ರ ನಮ್ಮ ಪಕ್ಷವು... ವನ್ನು ಎಚ್ಚರಿಸಿದೆ.

ನಾಲ್ಕು, ಅಕ್ರಮ ಭೂಮಿಯನ್ನು ಸಕ್ರಮಗೊಳಿಸಲು ಕ್ರಮ ತೆಗೆದುಕೊ...

ಉತ್ತರಪ್ರದೇಶ ನಗರಸಭಾ ಚುನಾವಣೆಗಳ ಪಾಠವೇನು?

ಜಾತ್ಯಾತೀತ ಶಕ್ತಿಗಳ ವಿಶಾಲ ಐಕ್ಯತೆ ಅಗತ್ಯ

-ಪ್ರಕಾಶ್ ಕಾರಟ್

ಉತ್ತರಪ್ರದೇಶದ ನಗರಸಭೆಗಳ ಚುನಾವಣೆಗಳು ವ್ಯಾಪಕ ಆಸಕ್ತಿ ಕೆರಳಿಸಿದ್ದವು. ಕಾರಣ ಅವು ಮುಂಬರುವ ವಿಧಾನಸಭಾ ಮತ್ತು ಸಂಸದೀಯ ಚುನಾವಣೆಗಳ ಫಲಿತಾಂಶ ಹೇಗಿರಬಹುದೆಂದು ಮುನ್ಸೂಚನೆ ನೀಡುತ್ತವೆ ಎಂಬ ನಿರೀಕ್ಷೆ. ಬಿಜೆಪಿಯ ಯಶಸ್ಸು, ಅದರಲ್ಲೂ 11 ಕಾರ್ಪೊರೇಶನ್ ಗಳಲ್ಲಿ ಅದರ ಗೆಲುವು ತಮ್ಮ ಪಕ್ಷ ಲಕ್ನೌದಲ್ಲಿ ಅಧಿಕಾರ ಗಿಟ್ಟಿಸುವ, ರಾಜ್ಯದಿಂದ ಲೋಕಸಭಾ ಚುನಾವಣೆಗಳನ್ನು ಗೆಲ್ಲುವ ದೃಢ ಸೂಚನೆ ನೀಡಿವೆ ಎಂದು ಬಿಜೆಪಿ ಹೇಳಿಕೊಂಡಿದೆ. ಸಂಸತ್ತಿಗೆ ಅತೀ ಹೆಚ್ಚು ಸದಸ್ಯರನ್ನು ಕಳಿಸುವ ರಾಜ್ಯ ಉತ್ತರಪ್ರದೇಶ ಮತ್ತು ಹಿಂದುತ್ವ ಶಕ್ತಿಗಳ ಕೋಮುವಾದಿ ತಂತ್ರದ ಕೇಂದ್ರ ಕೂಡಾ ಉತ್ತರಪ್ರದೇಶವೇ ಆಗಿರುವುದರಿಂದ ಈ ಚುನಾವಣಾ ಫಲಿತಾಂಶಗಳನ್ನು ವಿಶ್ಲೇಷಿಸಿ ಸೂಕ್ತ ಪಾಠ ಕಲಿಯಬೇಕಾಗುತ್ತದೆ.

ಬಿಜೆಪಿ ದೊಡ್ಡ ನಗರಗಳಲ್ಲಿ ಪ್ರಾಬಲ್ಯ ಹೊಂದಿರುವ ಪಕ್ಷ ಎಂಬುದು ಸ್ಪಷ್ಟವಾಗಿದೆ. ಏಕೆಂದರೆ ಹನ್ನೊಂದು ಮಹಾನಗರಪಾಲಿಕೆಗಳಲ್ಲಿ ಎಂಟರಲ್ಲಿ ಮೇಯರ್ ಸ್ಥಾನ ಗಿಟ್ಟಿಸಿಕೊಂಡಿದೆ. ಇಲ್ಲೀಗ ಮೇಯರ್ ಸ್ಥಾನ ನೇರವಾಗಿ ಚುನಾಯಿತಗೊಳ್ಳುವ ಸ್ಥಾನ. ಬಿಜೆಪಿ ಅಭ್ಯರ್ಥಿಗಳು ಕಾನಪುರ, ಲಕ್ನೌಗಳಲ್ಲಿ ದೊಡ್ಡ ಅಂತರದಿಂದ ಗೆದ್ದಿದ್ದಾರೆ. ಇದರರ್ಥ 1990-91ರಲ್ಲಿ ಉಂಟಾಗಿದ್ದ ಕೋಮು ಧ್ರುವೀಕರಣ ಈಗಲೂ ಮುಂದುವರಿದಿದೆ. ಕೋಮು ಆಧಾರದಲ್ಲಾಗಿರುವ ತೀಕ್ಷ್ಣ ವಿಭಜನೆಯ ಪ್ರಯೋಜನ ಬಿಜೆಪಿಗೆ ದಕ್ಕಿದೆ. ಸಣ್ಣ ನಗರಗಳಲ್ಲಿ ಕೂಡಾ ಸ್ವಲ್ಪ ಕಮ್ಮಿ ಪ್ರಮಾಣದಲ್ಲಾದರೂ ಇಂತಹ ವಿಭಜನೆ ನಡೆದಿದೆ.

ಹನ್ನೊಂದು ಕಾರ್ಪೊರೇಶನ್ ಗಳ 830 ಸ್ಥಾನಗಳಲ್ಲಿ ಬಿಜೆಪಿ 429 ಸ್ಥಾನಗಳನ್ನು ಗೆದ್ದಿದೆ. ಇದು 52% ವಾಗುತ್ತದೆ. ನಗರಪಾಲಿಕಾ ಪರಿಷದ್(ನಗರಸಭೆ)ಗಳ ಅಧ್ಯಕ್ಷರ ನೇರ ಚುನಾವಣೆಗಳಲ್ಲಿ 192ರಲ್ಲಿ 92 ಅಂದರೆ 42% ಸ್ಥಾನಗಳನ್ನು ಅದು ಪಡೆದಿದೆ. ನಗರ ಪಂಚಾಯತ್(ಟೌನ್ ಕಮಿಟಿಗಳು) ಅಧ್ಯಕ್ಷರ ಚುನಾವಣೆಗಳಲ್ಲಿ 414ರಲ್ಲಿ 100 ಅಂದರೆ 24% ಸ್ಥಾನಗಳನ್ನು ಪಡೆದಿವೆ. ಈ ಮೂರನೇ ವಿಧದಲ್ಲಿ ಅರೆಪಟ್ಟಣ ಹಾಗೂ ಗ್ರಾಮೀಣ ಪ್ರದೇಶಗಳೂ ಸೇರುತ್ತವೆ. ಅಂದರ ಬಿಜೆಪಿಯ ಶಕ್ತಿ ನಗರಪ್ರದೇಶಗಳಲ್ಲಿ ಕೇಂದ್ರೀಕೃತವಾಗಿದ್ದು ಅವುಗಳಿಂದ ಹೊರಗೆ ಸಾಗಿದಂತೆ ಅದರ ಪ್ರಭಾವ ಕಡಿಮೆಯಾಗುತ್ತಾ ಹೋಗುತ್ತದೆ ಎಂಬುದು ಇದರಿಂದ ಕಂಡು ಬರುತ್ತದೆ.

ಎರಡು ಮುಖ್ಯ ಕಾರಣಗಳು

ಮತದಾನದ ಶೇಕಾಡಗಳ ವಿವರ ಇನ್ನೂ ಸಿಕ್ಕಿಲ್ಲವಾದರೂ ಬಿಜೆಪಿ ಗೆಲುವು ಸಾಧಿಸಿರುವುದು ಅದು ಪಡೆದ ಮತಗಳ ಶೇಕಡಾ ಹೆಚ್ಚಳದಿಂದೇನೂ ಅಲ್ಲ. ಬಿಜೆಪಿಯ ಗೆಲುವಿಗೆ ಎರಡು ಮುಖ್ಯ ಕಾರಣಗಳಿವೆ.

ಮೊದಲನೆಯದಾಗಿ, ಕಾಂಗ್ರೆಸ್(ಐ) ನ ಪ್ರಭಾವದಲ್ಲಿ ಭಾರೀ ಇಳಿಕೆ. ಕಳೆದ ಸುತ್ತಿನ ಕಾರ್ಪೊರೇಶನ್ ಮತ್ತು ನಗರಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್(ಐ) ನಗರ ಪ್ರದೇಶಗಳಲ್ಲಿ ಪ್ರಮುಖ ಶಕ್ತಿಯಾಗಿತ್ತು. ಈ ಬಾರಿ 11 ಕಾರ್ಪೊರೇಶನ್‌ಗಳಲ್ಲಿ ಕಾಂಗ್ರೆಸ್‌ನ ಎರಡೂ ಬಣಗಳು ಅಂದರೆ ಅಧಿಕೃತ ಬಣ ಮತ್ತು ತಿವಾರಿ ಕಾಂಗ್ರೆಸ್ ಪಡೆದದ್ದು ಕೇವಲ 2.5% ಸ್ಥಾನಗಳು. ಉಳಿದೆರಡು ಹಂತಗಳಲ್ಲೂ ಅದರ ಸಾಧನೆ ಇಷ್ಟೇ ಶೋಚನೀಯ. ಕಾಂಗ್ರೆಸ್(ಐ)ನ ಕುಸಿತದಿಂದಾಗಿ ಗ್ರಾಮೀಣ ಮಧ್ಯಮ ವರ್ಗಗಳಲ್ಲಿ, ಮುಖ್ಯವಾಗಿ ಮೇಲ್ಜಾತಿಯಿಂದ ಬಂದವರಲ್ಲಿ ಬಿಜೆಪಿಯ ನೆಲೆ ಕ್ರೋಢೀಕರಣಗೊಂಡಿತು.

ಎರಡನೆಯದಾಗಿ, ಜಾತ್ಯಾತೀತ ವಿರೋಧ ಪಕ್ಷಗಳ ನಡುವಿನ ಒಟ್ಟಾರೆ ಅನೈಕ್ಯತೆಯಿಂದ ಕೂಡಾ ಬಿಜೆಪಿಗೆ ಪ್ರಯೋಜನವಾಯಿತು.(1992ರ ವಿಧಾಸಭಾ ಚುನಾವಣೆಗಳಲ್ಲಿ ನಿರ್ಣಾಯಕ ಅಂಶವಾಗಿದ್ದ ಸಮಾಜವಾದಿ ಪಕ್ಷ-ಬಿಎಸ್.ಪಿ. ಮೈತ್ರಿಯಲ್ಲುಂಟಾದ ಒಡಕು ವಿಶೇಷವಾಗಿ ಬಿಜೆಪಿಗೆ ನೆರವಾಗಿದೆ). ರಾಷ್ಟ್ರೀಯ ಮಟ್ಟದಲ್ಲಿ ಜನತಾದಳ ಮತ್ತು ಸಮಾಜವಾದಿ ಪಕ್ಷದ ಐಕ್ಯತೆಯ ಪ್ರಯತ್ನ ಆರಂಭವಾದದ್ದು ಉತ್ತರಪ್ರದೇಶದ ನಗರಸಭಾ ಚುನಾವಣೆಗಳ ನಂತರ. ಈ ಚುನಾವಣೆಗಳಲ್ಲಿ ಜನತಾದಳ, ಸಮಾಜವಾದಿ ಪಕ್ಷ ಅಥವಾ ಎಡಪಕ್ಷಗಳ ನಡುವೆ ಒಪ್ಪಂದವಾಗಲೀ, ಸೀಟು ಹೊಂದಾಣಿಯಾಗಲೀ ಇರಲಿಲ್ಲ. ಇದರಿಂದಾಗಿ ಸಾಮಾನ್ಯವಾಗಿ ಬಿಜೆಪಿಗೆ ಗೆಲುವಿನ ನಿರೀಕ್ಷೆಯಿಲ್ಲದ ಪೂರ್ವ ಮತ್ತು ಮಧ್ಯ ಯುಪಿಯ ಕೆಲವೆಡೆ ಕೂಡಾ ಅನುಕೂಲವಾಗಿದೆ. ಇಂತಹ ಸನ್ನಿವೇಶದಲ್ಲಿ ತನ್ನ ಪ್ರಸ್ತುತ ಚುನಾವಣಾ ನೆಲೆ ಉಳಿಸಿಕೊಂಡರೂ ಅದರ ಗೆಲುವು ಖಚಿತವಾಗಿತ್ತು.

ಜಾತ್ಯತೀತ ಐಕ್ಯತೆಯಿದ್ದಲ್ಲಿ

ಜಾತ್ಯಾತೀತ ಶಕ್ತಿಗಳ ಐಕ್ಯತೆ ಬೆಸೆಯುವುದು ಸಾಧ್ಯವಾಗಿದ್ದರೆ ಬಿಜೆಪಿಯ ಮೇಲೆ ತಡೆ ಹಾಕಬಹುದಾಗಿತ್ತು. ಅಲಹಾಬಾದ್ ನಗರದಲ್ಲಿ ಮೇಯರ್ ಚುನಾವಣೆಯಲ್ಲಿ ಎಸ್.ಪಿ., ಜನತಾದಳ, ಎಡಪಕ್ಷಗಳು ಹಾಗೂ ತಿವಾರಿ ಕಾಂಗ್ರೆಸ್ಸಿನ ಬೆಂಬಲ ಪಡೆದಿದ್ದ ಪಕ್ಷೇತರ ಅಭ್ಯರ್ಥಿ ಬಿಜೆಪಿ ಅಭ್ಯರ್ಥಿಯನನು ಸೋಲಿಸಿದರು. ಬುಲಂದ್ ಶಹರ್ ಜಿಲ್ಲೆಯಲ್ಲೂ ಎಸ್.ಪಿ., ಸಿಪಿಐ(ಎಂ) ಹಾಗೂ ದಲಿತ ಸೇನೆ(ಜನತಾದಳಕ್ಕೆ ಸೇರಿದ್ದು)ಯ ಐಕ್ಯತೆಯಿಂದಾಗಿ ಬಿಜೆಪಿ 22 ನಗರಪಾಲಿಕೆ ಮತ್ತು ನಗರ ಪಂಚಾಯತುಗಳಲ್ಲಿ ಕೇವಲ 5ನ್ನು ಗೆಲ್ಲುವುದು ಸಾಧ್ಯವಾಯಿತು. ನಗರಪಾಲಿಕೆಗಳು ಮತ್ತು ನಗರ ಪಂಚಾಯತುಗಳಲ್ಲಿ ದೊಡ್ಡ ಸಂಖ್ಯೆಯಲ್ಲಿ ಪಕ್ಷೇತರರು ಗೆದ್ದಿರುವುದು ಈ ಹಂತಗಳಲ್ಲಿ ಜಾತಿ, ಸಮುದಾಯ ಹಾಗೂ ಅಭ್ಯರ್ಥಿಗಳ ವೈಯಕ್ತಿಕ ಸ್ಥಾನಮಾನಗಳು ಹೆಚ್ಚಾಗಿ ಪರಿಗ್ಣನೆಗೆ ಬಂದಿರುವುದು ಕಾಣುತ್ತದೆ. ಜಾತ್ಯಾತೀತವಾದ ವಿರೋಧ ಪಕ್ಷಗಳು ಒಗ್ಗಟ್ಟಿನಿಂದ ಹೋರಾಡಿದರೆ ಮುಂದಿನ ಸಂಸದೀಯ ಚುನಾವಣೆಗಳಲ್ಲಿ ಈ ವ್ಯಾಪಕ ವಿಭಾಗವನ್ನು ತಮತ್ತ ಸೆಳೆಯುವುದು ಸಾಧ್ಯ.

ನಗರಪ್ರದೇಶಗಳಲ್ಲಿ ದುರ್ಬಲವಾಗಿದ್ದ ಸಮಾಜವಾದಿ ಪಕ್ಷ ಎರಡನೇ ದೊಡ್ಡ ಪಕ್ಷವಾಗಿ ಮೂಡಿ ಬಂದಿದೆ ... ಅದು ಬಹಳ ಹಿಂದಿದೆ. 11 ಕಾ...ಶನ್‌ಗಳಲ್ಲಿ 17% ಸ್ಥಾನಗಳನ್ನು, ನಗ...ಗಳಲ್ಲಿ 14% ಸ್ಥಾನಗಳನ್ನು ಹಾಗೂ ... ಪಂಚಾಯತುಗಳಲ್ಲಿ 11% ಸ್ಥಾನಗಳನ್ನು... ಜಾತ್ಯಾತೀತವಾದ ವಿರೋಧ ಪಕ್ಷಗ... ಸಾಧ್ಯವಾದಷ್ಟು ವಿಶಾಲವಾದ ಐಕ್ಯತೆ ... ವುದು ಎಷ್ಟು ಅಗತ್ಯ ಎಂಬುದನ್ನು ... ಪಕ್ಷಕ್ಕೆ ಮನದಟ್ಟು ಮಾಡಿಸಿದೆ. ... ಕೋಮು ಶಕ್ತಿಗಳ ಹಿಡುಗನ್ನು ತಡೆ...ದರೆ ಇಂತಹದೊಂದು ವಿಶಾಲ ಐಕ್ಯ... ವಾರ್ಯ ಎನ್ನುವ ಸಿಪಿಐ(ಎಂ) ನಿಲು...ಯೆಂಬುದು ಈ ನಗರಸಭಾ ಚುನಾ...ಳಿಂದ ದೃಢಗೊಂಡಿದೆ.

ಈಗ ಮುಲಾಯಂಸಿಂಗ್ ಈ ... ತೆಗೆ ಸ್ಪಂದಿಸಿ ಜನತಾದಳದೊಡನೆ ... ಆರಂಭಿಸಿದ್ದು ಬಿಜೆಪಿಯ ವಿರುದ್ಧ ... ಸಬಹುದಾದ ಎಲ್ಲರನ್ನು ಸೇರಿಸಿಕೊ... ಜವಾಬ್ದಾರಿಯನ್ನು ಸಮಾಜವಾದಿ ಪಕ್ಷ ... ಕಾಗಿದೆ. ಒಂದು ಸಂಕುಚಿತ ನಿಲುವು ... ಹಾನಿಕಾರಕ ಎಂದು ಈ ಸ್ಥಳೀಯ ... ಚುನಾವಣೆಗಳು ತೋರಿಸಿಕೊಟ್ಟಿವೆ ... ಚಿತ ಚುನಾವಣಾ ಲೆಕ್ಕಾಚಾರದಿಂದ ... ಖ್ಯಾತರನ್ನಷ್ಟೇ ಒಲಿಸಿಕೊಳ್ಳುವ ಏಕ... ಮನವಿಗಳಿಂದ ಬಿಜೆಪಿಗಷ್ಟೇ ಲಾಭ. ... ಆಗ ಅದು ಇಡೀ ಹಿಂದೂ ಸಮಾಜ... ತಾನೇ ಎಂದು ಹೇಳಿಕೊಳ್ಳಲು ಅವಕಾ...ತ್ತದೆ. ಚುನಾವಣಾ ಪ್ರಚಾರ ಕಾಲದ... ಸಮಾಜವಾದಿ ಪಕ್ಷದಿಂದ ಸ್ಥಳೀಯ ... ಡರು ಮುಸ್ಲಿಂ ಸಮುದಾಯವನ್ನು... ಮಾಡಿದ ಮನವಿ ಕೋಮು ಆಧ... ಧ್ರುವೀಕರಣ ಹೆಚ್ಚಲು ನೆರವಾಯಿತ... ರಿಂದ ಸಮಾಜವಾದಿ ಪಕ್ಷ ಎಲ್ಲಾ ... ಗಳ ಜನರು ಸ್ಪಂದಿಸಬಹುದಾದ ಒಂದು ... ಸಾಮಾಜಿಕ ಹಾಗೂ ರಾಜಕೀಯ ... ಯನ್ನು ಮುಂದಿಟ್ಟು ಆ ಮೂಲಕ ಸ... ಹಾಗೂ ಜಾತಿ ವಿಭಜನೆಗಳನ್ನು ಮೀ... ಬೇಕಾಗಿದೆ.

ಒಂದು ಸಕಾರಾತ್ಮಕ ಅಂಶ

ಮುಸ್ಲಿಂ ಮಹಿಳೆಯರು ಉತ...

ಪಿ. ರಾಮಚಂದ್ರರಾವ್

ಎಂದು ಜನತಾದಳ ಸರಕಾರವು ಭರವಸೆ ಕೊಟ್ಟಿದೆ. ಇವನ್ನು ಜನತೆ ಸ್ವಾಗತ ಮಾಡಿದೆ, ನಮ್ಮ ಪಕ್ಷವೂ ಸ್ವಾಗತ ಮಾಡಿದೆ. ಅದೇ ವೇಳೆ ಈ ವಿಷಯದಲ್ಲಿ ಜನತಾದಳ ಸರಕಾರದ ಮಂತ್ರಿಗಳು ಕಾಫಿ ತೋಟದ ಮಾಲೀಕರ ಅಕ್ರಮವನ್ನು ಸಕ್ರಮಗೊಳಿಸುವ ವಿಷಯದಲ್ಲಿ ತೋರಿಸುತ್ತಿರುವ ಆಸಕ್ತಿಯನ್ನು ಲಕ್ಷಾಂತರ ಬಡವರ ಅಕ್ರಮ ಸಾಗುವಳಿಯನ್ನು ಸಕ್ರಮಗೊಳಿಸುವುದರಲ್ಲಿ ಆಸಕ್ತಿ ತೋರಿಸುತ್ತಿಲ್ಲ ಎಂದು ನಮ್ಮ ಪಕ್ಷವು ಟೀಕಿಸಿದೆ. ಮತ್ತು ಕೂಡಲೇ ಈ ಬಗ್ಗೆ ಸೂಕ್ತ ನಿರ್ದೇಶನಗಳನ್ನು ಅಧಿಕಾರಿಗಳಿಗೆ ಕೊಟ್ಟು ಈ ನನೆಗುದಿಗೆ ಬಿದ್ದ ಪ್ರಶ್ನೆಗೆ ಪರಿಹಾರ ಕಂಡುಕೊಳ್ಳಲು ಮುಂದಾಗಬೇಕೆಂದು ಒತ್ತಾಯಿಸಿದೆ.

ಇದು ಜನತಾದಳ ಸರಕಾರದ ಸಾಧನೆ (ಮತ್ತು ಸಾಧಿಸಲು ಹೊರಟ ಉತ್ತಮ ಕೆಲಸ ಕಾರ್ಯಗಳು)ಯಾದರೆ ಜನತಾದಳವು ಈ ಒಂದು ವರ್ಷದಲ್ಲಿ ಜನತೆಯ ಹಾಗೂ ನಮ್ಮ ಪಕ್ಷದ ಆಸೆಗಳಿಗೆ ತೀರಾ ತಣ್ಣೀರೆರಚಿದ ಕೆಲವು ಕ್ರಮಗಳನ್ನು ಕೈಗೊಂಡಿರುವುದನ್ನು ನಾವು ಈ ಪರಿಶೀಲಿಸೋಣ. ನಮ್ಮ ಪಕ್ಷವು ಈ ಕ್ರಮಗಳನ್ನು ಖಂಡಿಸಿದೆ ಮಾತ್ರವಲ್ಲ ಈ ಕ್ರಮಗಳನ್ನು ಬೇಗನೇ ಕೈಬಿಡಬೇಕೆಂದು ಒತ್ತಾಯ ಮಾಡುವ ಹೋರಾಟದ ಕಾರ್ಯಕ್ರಮಗಳನ್ನು ಹಾಕಿಕೊಂಡು ಬಂದಿದೆ.

ಒಂದು ಕರ್ನಾಟಕ ಭೂ ಸುಧಾರಣಾ ಕಾನೂನಿಗೆ ತೀರಾ ಜನವಿರೋಧಿ ತಿದ್ದುಪಡಿಗಳನ್ನು ತಂದು ಬಡ ರೈತರ ಲಕ್ಷಾಂತರ ಕುಟುಂಬಗಳ ಭೂ ಹಸಿವೆಗೆ ತಣ್ಣೀರೆರಚಿದೆ. ಮತ್ತು ರೈತರಲ್ಲದ ಅದರಲ್ಲೂ ವ್ಯಾಪಾರ ಮತ್ತು ಕೈಗಾರಿಕೆಗಳಿಂದ ಅಪಾರ ಲಾಭ ಗಳಿಸುವವರಿಗೆ (ವಿದೇಶೀಯರನ್ನು ಸೇರಿಸಿ) ದೊಡ್ಡ ಪ್ರಮಾಣದಲ್ಲಿ ಹತ್ತು ಹಲವು ಬಾಬ್ತಿನಲ್ಲಿ ಭೂಮಿಯನ್ನು ಕಬಳಿಸಲಿಕ್ಕೆ ರಾಜಮಾರ್ಗ ಮಾಡಿಕೊಟ್ಟಿದೆ ಜನತಾದಳ ಸರಕಾರ. ಇದು ರಾಜ್ಯದ ಎಲ್ಲಾ ಜನತೆಯನ್ನು ದಂಗುಬಡಿಸಿದೆ. ಮತ್ತು ಗ್ರಾಮಾಂತರದ ಲಕ್ಷಾಂತರ ಕುಟುಂಬಗಳ ಆಸೆಗಳನ್ನು ಮಣ್ಣುಗೂಡಿಸಿದೆ. ಈ ವಿಷಯದಲ್ಲಿ ರಾಜ್ಯದ ಜನತೆ ಮತ್ತು ನಮ್ಮ ಪಕ್ಷವು ಈ ತಿದ್ದುಪಡಿಗಳನ್ನು ತೀವ್ರವಾಗಿ ವಿರೋಧಿಸುತ್ತಾ ಬಂದಿದೆ. ದೇವೇಗೌಡರು ಮಣ್ಣಿನ ಮಗ ಎಂದು ಹೇಳಿ ರಾಜ್ಯದ ಬಹುಭಾಗದ ಬಡ ಮಣ್ಣಿನ ಮಕ್ಕಳಿಗೆ ದ್ರೋಹ ಬಗೆದಿದ್ದಾರೆ ಮಾತ್ರವಲ್ಲ ಕಾಂಗ್ರೆಸ್ ಪಕ್ಷಕ್ಕಿಂತಲೂ ಒಂದು ಹೆಜ್ಜೆ ಮುಂದೆ ಹೋಗಿ ನೂತನ ಆರ್ಥಿಕ ನೀತಿಗಳ ಹಿಂದಿರುವ ಚಿಂತನೆಗೆ ತನ್ನ ಬೆಂಬಲವನ್ನು ವ್ಯಕ್ತಪಡಿಸಿದೆ ರಾಜ್ಯದ ಜನತಾದಳ ಸರಕಾರ.

ಎರಡು, ನೀರಾವರಿ ಯೋಜನೆಗಳ ವಿಷಯದಲ್ಲಿ ರಾಜ್ಯದ ಜನತೆಯ ಬೆಂಬಲದಿಂದ ಕೇಂದ್ರ ಸರಕಾರದ ಮೇಲೆ ಒತ್ತಡ ಹೇರುವ ಮೂಲಕ ಹಾಗೂ ರಾಜ್ಯದಲ್ಲಿ ಈ ಪ್ರಶ್ನೆಗೆ ಅತ್ಯಂತ ಹೆಚ್ಚಿನ ಆದ್ಯತೆ ಕೊಟ್ಟು ಭ್ರಷ್ಟಾಚಾರ ನಿಲ್ಲಿಸಿ ಯುದ್ಧೋಪಾದಿಯಲ್ಲಿ ಕ್ರಮ ತೆಗೆದುಕೊಳ್ಳಲು ಜನತಾದಳ ಸರಕಾರ ಈವರೆಗೆ ತಪ್ಪಿದೆ. ಕೇಂದ್ರ ಸರಕಾರದ ಮೇಲೆ ಅದು ಯಾವ ಒತ್ತಡವನ್ನು ಬೀರುತ್ತಿಲ್ಲ. ಭ್ರಷ್ಟಾಚಾರವನ್ನು ನಿಲ್ಲಿಸಲು ಏನೇನು ಕ್ರಮ ತೆಗೆದುಕೊಳ್ಳಲಿಲ್ಲ, ಯುದ್ಧೋಪಾದಿಯಲ್ಲಿ ಅಲ್ಲದಿದ್ದರೂ ತ್ವರಿತಗತಿಯಲ್ಲಿ ನಡೆಯುವಂತೆ ಮಾಡಲು ಏನೇನೂ ಕ್ರಮ ತೆಗೆದುಕೊಳ್ಳಲಿಲ್ಲ. ಆದ ಕಾರಣ ಕರ್ನಾಟಕ ಪ್ರಾಂತ ರೈತ ಸಂಘವು ನಮ್ಮ ಪಕ್ಷದ ಸಹಾಯ ಪಡೆದು ಈ ವಿಷಯದಲ್ಲಿ ಪ್ರಮುಖವಾಗಿ ಬಿಜಾಪುರ, ರಾಯಚೂರು, ಗುಲ್ಬರ್ಗಾ, ಬೀದರ್, ಬಳ್ಳಾರಿ ಜಿಲ್ಲೆಗಳಲ್ಲಿ ಕೈಗೆ ತೆಗೆದುಕೊಂಡ ನೀರಾವರಿ ಯೋಜನೆಗಳನ್ನು 2000 ಇಸವಿಯೊಳಗೆ ಪೂರ್ತಿಗೊಳಿಸಿ ಎಲ್ಲಾ ಕ್ರಮ ವಹಿಸುವುದಕ್ಕಾಗಿ ವ್ಯಾಪಕ ಚಳುವಳಿ ಮಾಡುತ್ತಿದೆ. ಯೋಜನೆಯಲ್ಲಿದ್ದ ಈವರೆಗೆ ಕೈಗೆತ್ತಿಕೊಳ್ಳದ ನೀರಾವರಿ ಕಾಲುವೆಗಳ ಕೆಲಸಗಳನ್ನು

ಪುಟ 8 ನೋಡಿ

ಪ್ರಚಾರಕರಾಗಿಯೂ-ಈ ಚುನಾವಣೆಗಳ ಒಂದು ಸಕಾರಾತ್ಮಕ ಅಂಶ. ಒಂದು ಪ್ರಮುಖ ಇಸ್ಲಾಮೀ ಕೇಂದ್ರವಾದ ದೇವಬಂದ್ ನ ಮುಫ್ತಿ ಒಂದು ಫತ್ವಾ(ಧಾರ್ಮಿಕ ಆದೇಶ) ಹೊರಡಿಸಿ ಮಹಿಳೆಯರು ಚುನಾವಣೆಗಳಲ್ಲಿ ಭಾಗವಹಿಸಬಾರದು ಎಂದು ನಿಷೇಧಿಸಿದರು. ಇದನ್ನು ಪ್ರತಿಭಟಿಸಿದಾಗ ಅದನ್ನು ಸ್ವಲ್ಪ ತಿದ್ದಲಾಯಿತು. ಮಹಿಳೆಯರು ಚುನಾವಣೆಗಳಲ್ಲಿ ಭಾಗವಹಿಸಬೇಕಾದರೆ ಕೆಲವು ಶರತ್ತುಗಳನ್ನು ಪಾಲಿಸಬೇಕು, ಅವುಗಳಲ್ಲೊಂದು ಅವರು ಬುರ್ಖಾ ಧರಿಸಬೇಕು ಎಂದು. ನೂರಾರು ಮಹಿಳೆಯರು ಈ 'ಆದೇಶ'ವನ್ನು ಉಲ್ಲಂಘಿಸಿ ಚುನಾವಣಾ ಕಣಕ್ಕಿಳಿದರು. ದೇವಬಂದ್ ನಲ್ಲೇ ಒಬ್ಬ ಮುಸ್ಲಿಂ ಯುವತಿ ಬುರ್ಖಾ ಧರಿಸದೆ ಚುನಾವಣೆಗೆ ಸ್ಪರ್ಧಿಸಿ ಬಿಜೆಪಿ ಪ್ರತಿಸ್ಪರ್ಧಿ ಹಾಗೂ ಇನ್ನೊಬ್ಬ ಮುಸ್ಲಿಂ ಸಾಂಪ್ರದಾಯಿಕ ಮಹಿಳಾ ಅಭ್ಯರ್ಥಿಯನ್ನು ಭಾರೀ ಅಂತರದಿಂದ ಸೋಲಿಸಿದರು. ಮಹಿಳೆಯರಿಗೆ ಸಮಾನ ಸ್ಥಾನಮಾನ ನೀಡದೆ ವಂಚಿಸುವ ಮೂಲಭೂತವಾದಿಗಳ ತಂತ್ರಕ್ಕೆ ತಲೆಬಾಗದೆ ಇಂತಹ ಈ ಪ್ರಜಾಸತ್ತಾತ್ಮಕ ಪ್ರವೃತ್ತಿಯನ್ನು ಪೋಷಿಸಬೇಕಾಗಿದೆ.

ಬಿ.ಎಸ್.ಪಿ. ಮುಖಂಡರು ಯೋಚಿಸಬೇಕು

ಏಕಾಂಗಿಯಾಗಿ ಹೋರಾಡಿದ ಬಿ.ಎಸ್.ಪಿ. ಪರಿಶಿಷ್ಟ ಜಾತಿಗಳ ಮತದಾರರ ನಡುವೆ ತನ್ನ ಬಲವಾದ ನೆಲೆಯನ್ನು ಉಳಿಸಿಕೊಂಡು ನಗರ ಪ್ರದೇಶಗಳಲ್ಲಿ ಮೂರನೇ ಶಕ್ತಿಯಾಗಿ ಮೂಡಿ ಬಂದಿದೆ. ಮೀರಟ್, ಅಲೀಗಢ್, ಫಾರೂಖಾಬಾದ್, ಆಗ್ರಾ ಮುಂತಾದೆಡೆ ಮುಸ್ಲಿಂ ಅಭ್ಯರ್ಥಿಗಳನ್ನು ನಿಲ್ಲಿಸಿ ಮುಸ್ಲಿಂ ಮತಗಳನ್ನು ಪಡೆಯುವುದೂ ಅದಕ್ಕೆ ಸಾಧ್ಯವಾಗಿದೆ. ಇದೇ ತಂತ್ರವನ್ನು ಬಳಸಿ ಮುಂಬರುವ ವಿಧಾನಸಭಾ ಹಾಗೂ ಲೋಕಸಭಾ ಚುನಾವಣೆಗಳಲ್ಲೂ ತನ್ನ ಚುನಾವಣಾ ನೆಲೆಯನ್ನು ವಿಸ್ತರಿಸಿಕೊಳ್ಳುವ ನಿರೀಕ್ಷೆ ಅದಕ್ಕಿದೆ. ಆದರೆ ಇದು ಕೇವಲ ಭ್ರಮೆಯಾಗಿ ಉಳಿದೀತು. ನಿಜ, ಬಿಜೆಪಿಗೆ ದಲಿತರ ನಡುವೆ ಬಲವಾದ ಬೆಂಬಲವಿದೆ. ಆದರೆ ಇತರ ಕೋಮುಗಳ ಅಭ್ಯರ್ಥಿಗಳನ್ನು ನಿಲ್ಲಿಸಿ ಹೆಚ್ಚು ಮತ ಗಿಟ್ಟಿಸುವ ತಂತ್ರ ಹಿಂದಿನ ಚುನಾವಣೆಯಷ್ಟು ಪರಿಣಾಮಕಾರಿಯಾಗಿ ಇನ್ನು ಮುಂದೆ ಫಲ ನೀಡಲಿಕ್ಕಿಲ್ಲ. ಲಕ್ನೋ ಮತ್ತು ದಿಲ್ಲಿಯಲ್ಲಿ ಅಧಿಕಾರದ ಪ್ರಶ್ನೆ ಬಂದಾಗ ಬಿಜೆಪಿಯನ್ನು ಸೋಲಿಸಬೇಕೆಂದು ಬಯಸುವವರ ವರ್ತನೆ ಸ್ಥಳೀಯ ಚುನಾವಣೆಗಳಿಗಿಂತ ಭಿನ್ನವಾಗಿರುತ್ತದೆ. ಈ ಮತದಾರರನ್ನು ಆಕರ್ಷಿಸಬೇಕಾದರೆ ಅದು ಒಂದು ವಿಶಾಲತಮ, ವಿಶ್ವಾಸಾರ್ಹ ಜಾತ್ಯಾತೀತ ಪರ್ಯಾಯದಿಂದ ಮಾತ್ರ ಸಾಧ್ಯ. ಹೆಚ್ಚೆಂದರೆ ಬಿ.ಎಸ್.ಪಿ. ಈ ವ್ಯಾಪಕ ಬೆಂಬಲದಿಂದ ದಲಿತ ಮತಗಳ ಒಂದು ವಿಭಾಗವನ್ನು ಪ್ರತ್ಯೇಕಿಸಿಬಹುದಷ್ಟೆ.

ಇಂತಹ ವಿಚ್ಛಿದ್ರಕಾರಿ ತಂತ್ರಗಳು ಅತ್ಯಂತ ದಲಿತ ವಿಭಾಗಗಳಿಗೆ, ಹಿಂದುತ್ವ ಸಮಾಜ ವ್ಯವಸ್ಥೆಗೆ ಬಲಿಯಾದವರಿಗೆ ಪ್ರಯೋಜನಕಾರಿಯಾಗುವುದೆ ಎಂದು ಯೋಚಿಸುವುದು ಬಿ.ಎಸ್.ಪಿ. ಮುಖಂಡತ್ವಕ್ಕೆ ಬಿಟ್ಟದ್ದು.

ಎಡ-ಜಾತ್ಯಾತೀತ ಶಕ್ತಿಗಳ ಕರ್ತವ್ಯ

ಆದ್ದರಿಂದ ಉತ್ತರ ಪ್ರದೇಶದ ನಗರಸಭಾ ಚುನಾವಣೆಗಳು ಎಡ ಮತ್ತು ಜಾತ್ಯಾತೀತ ಶಕ್ತಿಗಳ ಮುಂದೆ ಈ ಕರ್ತವ್ಯಗಳನ್ನಿಟ್ಟಿದೆ-

1) ಎಲ್ಲಾ ಜಾತ್ಯಾತೀತವಾದ ವಿರೋಧ ಶಕ್ತಿಗಳ ನಡುವೆ ವ್ಯಾಪಕ ಐಕ್ಯತೆ ಬೆಸೆಯಲು ಇನ್ನೂ ಗಂಭೀರ ಪ್ರಯತ್ನಗಳು ನಡೆಯಬೇಕಾಗಿದೆ.

2) ಸಮಾಜವಾದಿ ಪಕ್ಷ ಮತ್ತು ಜನತಾದಳಗಳೆರಡೂ ತಂತಮ್ಮ ವ್ಯಕ್ತಿನಿಷ್ಠ ಪೂರ್ವಾಗ್ರಹಗಳನ್ನು ಬದಿಗಿಟ್ಟು ಅವರಿಬ್ಬರ ನಡುವೆ ಹಾಗೂ ಎಡಪಕ್ಷಗಳ ನಡುವೆ ಒಂದು ಪೂರ್ಣ ತಿಳುವಳಿಕೆ ಹಾಗೂ ಹೊಂದಾಣಿಕೆ ಬರುವಂತಾಗಬೇಕು. ಸಮಾಜವಾದಿ ಪಕ್ಷ ಮತ್ತು ಜನತಾದಳ ಐಕ್ಯತೆಯ ಪ್ರಯತ್ನಕ್ಕೆ ಮುತುವರ್ಜಿ ವಹಿಸಿದ ಮಹತ್ವದ ಹೆಜ್ಜೆಯಿಟ್ಟಿದ್ದು ಇದನ್ನು ಮುಂದುವರಿಸಬೇಕು.

3) ಎಲ್ಲಾ ಜಾತ್ಯಾತೀತ ಹಾಗೂ ಎಡ ಪಕ್ಷಗಳು ಕೋಮುವಾದಿ ಶಕ್ತಿಗಳ ವಿರುದ್ಧ ಜನಗಳನ್ನು ಅಣಿನೆರೆಸಲು ಒಂದು ಜಂಟಿ ಪ್ರಚಾರ-ಪ್ರಕ್ಷೋಭೆಯನ್ನು ಕೈಗೆತ್ತಿಕೊಳ್ಳಬೇಕು.

ಈ ನಿಟ್ಟಿನಲ್ಲಿ ಬಿಜೆಪಿಯನ್ನು ಸೋಲಿಸುವ ಚುನಾವಣಾ ತಂತ್ರಗಳನ್ನು ರೂಪಿಸಬೇಕು.

ಹಾಲಿನಲ್ಲಿ ವಿಷ ಸೇರಿಸಿದ ಬಿಜೆಪಿ

ಇದು ಗುಜರಾತಿನಲ್ಲಿ ಬಿಜೆಪಿ ಮಾಡಿದ ಮಹತ್ಸಾಧನೆ. ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಳಿ ಗುಜರಾತಿನಲ್ಲಿದೆ. ಇದಕ್ಕೆ ಡಾ. ವಿ.ಕುರಿಯನ್ ಎಂಬಾತ ಅಧ್ಯಕ್ಷರು. ಈ ಕುರಿಯನ್ ಗುಜರಾತಿನಲ್ಲಿ ಐವತ್ತು ವರ್ಷಗಳ ಹಿಂದೆ ಹೈನುಗಾರರ ಸಹಕಾರ ಸಂಘವನ್ನು ಸ್ಥಾಪಿಸಿದರು. ಇದು ಹಾಲು ಕೊಳ್ಳುವುದು ಮಾತ್ರವಲ್ಲ, ಅದನ್ನು ಸಂಸ್ಕರಿಸುವುದು ವಿವಿಧ ಹಾಲಿನ ಉತ್ಪನ್ನವನ್ನು ತಯಾರಿಸಿ ಮಾರುವುದರ ಜೊತೆಗೆ ಹೈನುಗಾರರಿಗೆ ಬೇಕಾಗುವ ಪ್ರಾಣಿಗಳ ಮೇವು ಔಷದಿ ಇತ್ಯಾದಿಗಳನ್ನು ಪೂರೈಸುತ್ತ ಎಲ್ಲ ರೀತಿಯ ಆರ್ಥಿಕ ಚಟುವಟಿಕೆಗಳ ಮಾದರಿಯಲ್ಲೇ ಹೈನುಗಾರರ ಸಹಕಾರ ಸಂಘ ದೇಶದಾದ್ಯಂತ ಬೆಳೆದು ಬಂದವು. ಗುಜರಾತ್‌ನ ಅಮೂಲ್‌ನಲ್ಲಿ ಆದದ್ದನ್ನು ಒಂದು ಮಹತ್ತರ ಸಾಧನೆ ಎಂದೇ ವಿಶ್ವದಾದ್ಯಂತ ಪರಿಗಣಿಸಲಾಗುತ್ತಿದೆ. ನಮಗೆಲ್ಲ ಪರಿಚಿತವಾಗಿರುವ ಅಮೂಲ್ ಚಾಕಲೇಟ್‌ಗಳು, ಜೀಸ್ ಇತ್ಯಾದಿಗಳೆಲ್ಲ ಅಲ್ಲೇ ತಯಾರಾಗುವಂತವು. ಒಟ್ಟಿನಲ್ಲಿ ಹೇಳುವುದಾದರೆ ನಮ್ಮ ದೇಶದಲ್ಲಿನ ಬಿಳಿಕ್ರಾಂತಿ(ಹಾಲಿನ ಉತ್ಪಾದನೆಯಲ್ಲಿ)ಯ ಹಿಂದೆ ಈ ಅಮೂಲ್ ನ ಅನುಭವವಿದೆ ಎನ್ನಲಾಗುತ್ತಿದೆ. ಇರಲಿ.

ಅಮೂಲ್‌ನ ಸಹಕಾರಿ ಸಂಸ್ಥೆಗೆ ಇಂತಹ ಬಲವಿದೇ ಎಂಬುದರಿಂದಲ್ಲೇ ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಳಿಯನ್ನು ಡಾ.ಕುರಿಯನ್‌ರ ನೇತೃತ್ವದಲ್ಲಿ ಸ್ಥಾಪಿಸಲಾಯಿತು. ಗುಜರಾತಿನಲ್ಲಿ ಆದಿಗೆ ಎಣ್ಣೆ ವ್ಯಾಪಾರದಲ್ಲಿ ಇಲ್ಲಿಯ ಗುಜರಾತೀ ವ್ಯಾಪಾರಸ್ಥರ ಏಕಾಧಿಪತ್ಯ ಇತ್ತು. ಅವರು ಇಡೀ ದೇಶದಲ್ಲಿನ ಬೆಲೆಗಳನ್ನು ನಿಯಂತ್ರಿಸುತ್ತಿದ್ದರು.

ಇದನ್ನು ತಡೆಯಲು ಈ ಎಣ್ಣೆಕಾಳುಗಳ ವ್ಯಾಪಾರ ಮಾಡಲು ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಳಿಗೆ ಕೇಂದ್ರ ಸರ್ಕಾರ ಅನುಮತಿ ನೀಡಿತು. ಆಗಿನಿಂದ ಗುಜರಾತಿನ ಬಿಜೆಪಿ ಸರ್ಕಾರಕ್ಕೆ ಚುಚ್ಚಿದಂತಾಗಿ ಅದು ಚಡಪಡಿಸತೊಡಗಿತು. ತೈಲ ಸಾಮ್ರಾಟರ ಕೃಪೆಯಲ್ಲಿ ಇರುವ ಈ ಬಿಜೆಪಿ ಸರ್ಕಾರ ಅವರ ಋಣವನ್ನು ಈ ಹೈನುಗಾರಿಕೆ ಅಭಿವೃದ್ಧಿ ಮಂಡಳಿಗೆ ಅಡೆತಡೆ ಒಡ್ಡುವುದರ ಮೂಲಕ ತೀರಿಸಿಕೊಳ್ಳುತ್ತಿದೆ. ಅಮೂಲ್ ಈಗ ಐವತ್ತು ವರ್ಷಗಳಾಗುತ್ತಿರುವುದರಿಂದ ಚಿನ್ನದ ಹಬ್ಬ ಆಚರಿಸುವುದಿತ್ತು. ಎಲ್ಲ ತಯಾರಿಗಳನ್ನು ಮಾಡಿಕೊಳ್ಳಲಾಗಿತ್ತು. ಆದರೆ ಬಿಜೆಪಿ ಸರ್ಕಾರ ಇಲ್ಲಿ ತೊಂದರೆಗಳನ್ನು ಸೃಷ್ಟಿಸಿ ಈ ಚಿನ್ನದಹಬ್ಬ ಆಗದಂತೆ ಕಿರುಕುಳ ನೀಡಿತು. ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಳಿಗೆ ಮೂರು ಜನರನ್ನು ಬಿಜೆಪಿ ಸರ್ಕಾರ ನೇಮಿಸಿತು. ಇವರು ಕಿರುಕುಳ ನೀಡುವುದಕ್ಕೆ ನೇಮಕವಾಗಿದ್ದಾರೆ.

ಈಗ ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಳಿ ಚಿನ್ನದ ಹಬ್ಬದ ಆಚರಣೆಯನ್ನು ಹಿಂದಕ್ಕೆ ತೆಗೆದು ಕೊಂಡಿದೆ.

ತೈಲ ಕೊರಗಳ ಸೇವೆಯಲ್ಲಿ ಇಷ್ಟನ್ನು ಬಿಜೆಪಿ ಮಾಡದಿದ್ದರೆ ಹೇಗೆ ಅಲ್ಲವೆ?

ಪೆಟ್ರೋಲಿಯಂ ವಲಯದ ಉದಾರೀಕರಣ

ಇದನ್ನು ಹಂತ ಹಂತವಾಗಿ ಮಾಡುತ್ತೇವೆಂದು ಪೆಟ್ರೋಲಿಯಂ ಖಾತೆಯ ಕೇಂದ್ರ ಮಂತ್ರಿ ಕ್ಯಾಪ್ಟನ್ ಸತೀಶ್ ಶರ್ಮ ಹೇಳಿದ್ದಾರೆ. ಆಗ ಈಗಿನ ನಿಯಂತ್ರಿತ ಬೆಲೆಗಳ ಬದಲು ಮಾರುಕಟ್ಟೆ ಬೆಲೆಗಳು ಇರುತ್ತವೆ. ಈ ವಲಯದ ಮೇಲೆ ಸರ್ಕಾರದ ಯಾವುದೇ ನಿರ್ಬಂಧಗಳಿರುವುದಿಲ್ಲ.

ಹಾಗೆ ಯಾವುದೇ ದೇಶದ ಆರ್ಥಿಕದಲ್ಲಿ ಈ ಪೆಟ್ರೋಲಿಯಂ ಮತ್ತು ಅದರ ಉತ್ಪನ್ನಗಳ ಪಾತ್ರ ಬಹಳಮುಖ್ಯವಾದುದು. ಅದುಎಷ್ಟುಮುಖ್ಯ ಎಂದರೆ ಈ ಉತ್ಪನ್ನಗಳಿಲ್ಲದೆ ದಿನಗಳೇ ಕಳೆಯುವುದಿಲ್ಲ.

ಈಗಿನ ವ್ಯವಸ್ಥೆಯಲ್ಲಿ ಈ ವಲಯದ ಮೇಲೆ ಸರ್ಕಾರದ ಹಲವು ನಿರ್ಬಂಧಗಳಿವೆ. ಈ ಉತ್ಪನ್ನಗಳ ಆಮದು ಅವುಗಳ ಬೆಲೆ ನಿಯಂತ್ರಣ ಎಲ್ಲವೂ ಸರ್ಕಾರದಿಂದಲೇ ಆಗಬೇಕು. ಈ ನಿರ್ಬಂಧಗಳನ್ನು ತೆಗೆದು ಹಾಕಿದರೆ ಆಗ ಜಾಗತಿಕ ಬೆಲೆಗಳಲ್ಲಿ ಏರುಪೇರಾದಾಗ ಇಲ್ಲಿಯೂ ಅದರ ಪರಿಣಾಮ ಬಹಳ ದೊಡ್ಡದಾಗಿ ಆಗುತ್ತದೆ.

ನಮ್ಮ ವ್ಯಾಪಾರ ಬಾಕಿ ಬಿಕ್ಕಟ್ಟು ಬಹಳ



ನರಸಿಂಹರಾವ್ ಸರಕಾರದ 54ನೇ ತಿಂಗಳಲ್ಲಿ

ದೊಡ್ಡ ಪ್ರಮಾಣದಲ್ಲಿ ಇದ್ದು ಅದರ ಜೊತೆಗೆ ಡಾಲರಿಗೆದುರಾಗಿ ರೂಪಾಯಿಯ ಬೆಲೆ ಕುಸಿಯತೊಡಗಿದರೆ ಅದರ ಪರಿಣಾಮದ ನೋವು ದೇಶದ ಜನಕ್ಕೆಲ್ಲ ಆಗುತ್ತದೆ. ಆದರೆ ಈ ಪರಿಣಾಮ ಬಡವರಿಗೆ ತೀರ ಹೆಚ್ಚಿನ ನೋವಿನದ್ದಾಗಿರುತ್ತದೆ. ಈಗ ಈ ಮಂತ್ರಿಗಳು ಹೇಳುತ್ತಿರುವುದು ಅದೇ "ಈ ನೋವನ್ನು ನಾವು ಹಂತ ಹಂತವಾಗಿ ನಿಮಗೆ ನೀಡುತ್ತೇವೆ" ಎಂದು.

ಹೇಗಿದೆ ಉದಾರೀಕರಣ.

ಯಾರದೊ ದುಡ್ಡಿನಲ್ಲಿ ಎಲ್ಲಮ್ಮನ ಜಾತ್ರೆ

ಯಾರದೊ ದುಡ್ಡಿನಲ್ಲಿ ಎಲ್ಲಮ್ಮನ ಜಾತ್ರೆಗೆ ಹೋಗುವುದಾದರೆ ಅದು ಬಹಳ ಖುಷಿದಾಯಕವೇ? ಕೇಂದ್ರ ಸರ್ಕಾರ ಅದನ್ನೇ ಮಾಡುತ್ತಿದೆ ಎಂದು ಯೋಜನಾ ಆಯೋಗದ ಸದಸ್ಯ ಡಾ. ಅರ್ಜುನ್ ಸೇನ್ ಗುಪ್ತಾ ಹೇಳುತ್ತಿದ್ದಾರೆ.

ಹೇಗೆ ಎಂದಿರಾ?

ಅದು ಹೀಗೆ. ಸರ್ಕಾರ ಹಣಕಾಸು ಕೊರತೆ ಅನುಭವಿಸುತ್ತಿದೆ. ಈ ಕೊರತೆಯನ್ನು ಇನ್ನೂ ಕಡಿಮೆ ಗೊಳಿಸಬೇಕೆಂದು ವಿಶ್ವಬ್ಯಾಂಕ್, ಐಎಂಎಫ್‌ಗಳು ಭಾರತ ಸರ್ಕಾರದ ಮೇಲೆ ಒತ್ತಡ ಹೇರುತ್ತಿವೆ. ಅದಕ್ಕೆ ಭಾರತ ಸರ್ಕಾರ ಸಾರ್ವಜನಿಕ ವಲಯದ ಉದ್ದಿಮೆಗಳ ಶೇರುಗಳನ್ನು ಮಾರಿ ಬಂದ ಹಣದಿಂದ ಈ ಕೊರತೆ ನೀಗಿಸುತ್ತಿದೆ.

ಇದನ್ನೇ ಡಾ.ಸೇನ್ ಗುಪ್ತಾ ಟೀಕಿಸಿರುವುದು. ಅವರು ಹೇಳುವುದು ಹೀಗೆ ಬಂದಹಣವನ್ನು ಮತ್ತೆ ಸಾರ್ವಜನಿಕ ವಲಯದ ಈ ಉದ್ದಿಮೆಗಳಲ್ಲೇ ಹೂಡ ಬೇಕೆಂದು.

ಸಾರ್ವಜನಿಕ ವಲಯದ ಈ ಉದ್ದಿಮೆಗಳ ಶೇರು ಮಾರುವುದೇ ತಪ್ಪು ಎನ್ನುವುದು ಬೇರೆ ಮಾತು. ಆದರೆ ಕೇಂದ್ರ ಸರ್ಕಾರ ಉದಾರೀಕರಣದ ಹೆಸರಿನಲ್ಲಿ ಎಂತಹ ನೀಚತನಕ್ಕಿಳಿದಿದೆ ಎಂದರೆ ಲಕ್ಷ ಲಕ್ಷ ಜನರಿಗೆ ಅನ್ನ ಬಟ್ಟೆ ನೀಡುವ ಈ ಸಾರ್ವಜನಿಕ ವಲಯದ ಉದ್ದಿಮೆಗಳನ್ನು ನುಂಗಿ ತನ್ನ ಬೊಕ್ಕಸದ ಕೊರತೆ ನೀಗಿಕೊಳ್ಳುತ್ತಿದೆ ಇಷ್ಟೇ ಅಲ್ಲ. ಖಾಸಗಿಯವರಿಗೆ ಅಪಾರ ಲಾಭ ಮಾಡಿಕೊಳ್ಳುವಂತೆ ಮೂರು ಕಾಸಿಗೆ ಈ ಶೇರುಗಳನ್ನು ಘಟಕಗಳನ್ನು ಮಾರುತ್ತಿದೆ.

"ಹಣದುಬ್ಬರ ಇಳಿಯುತ್ತದೆ" ಆದರೆ ಬೆಲೆಗಳು ಗಗನದಲ್ಲೇ ಉಳಿಯುತ್ತವೆ

ಹಣದುಬ್ಬರ ಇಳಿಯುತ್ತದೆ ಎಂದು ಈ ದೇಶದ ಹಣಕಾಸು ಮಂತ್ರಿ ಡಾ. ಮನಮೋಹನ ಸಿಂಗರು ಹೇಳಿದ್ದಾರೆ. ಲೋಕ ಸಭೆಯಲ್ಲಿ ಎಡ ಪಕ್ಷಗಳ ಒತ್ತಡಕ್ಕೆ ಮಣಿದ ಅವರು ಬೆಲೆ ಪರಿಸ್ಥಿತಿಯ ಬಗ್ಗೆ ಹೇಳಿಕೆ ನೀಡುತ್ತ ಹಣದುಬ್ಬರ ಇಳಿಯುತ್ತದೆ ಎಂಬುದನ್ನು ಅಂಕಿ ಅಂಶಗಳ ಸಮೇತ ವಿವರಿಸಿದರು. ಸರ್ಕಾರ ಸರಿಯಾದ ನೀತಿಗಳನ್ನೇ ಈ ಹಣದುಬ್ಬರ ತಡೆಯಲು ಉಪಯೋಗಿಸಿದೆ ಎಂದೆಲ್ಲ ಅವರು ಹೇಳಿದರು. ಆದರೆ ಎಲ್ಲಕ್ಕಿಂತ ಅವರಿಗೆ ಮುಖ್ಯವಾದದ್ದು ಹಣಕಾಸು ಕೊರತೆಯನ್ನು ಒಟ್ಟುತ್ಪಾದನೆಯ ಶೇ 6.7 ಕ್ಕೆ ತಂದು ನಿಲ್ಲಿಸುವುದು. ಇದು ಬ್ಯಾಂಕ್ ಫಂಡ್ ಧಣಿಗಳ ಅಪ್ಪಣೆ. ಬೆಲೆಯೇರಿಕೆ ತಡೆಯುವುದರ ವಿರುದ್ಧ ಕಾರ್ಯಕ್ರಮವಲ್ಲಿ ಇಲ್ಲ. ಹಣದುಬ್ಬರ ಪ್ರಶ್ನೆಯನ್ನು ಎಡಪಕ್ಷಗಳು ಎತ್ತಿದಾಗ ಸರಕಾರ ಮೊದಲು ಅದನ್ನು ಬಿಟ್ಟು ಆರ್ಥಿಕ ಪರಿಷ್ಕರಣೆಯ ಭಾಗವಾಗಿ ಚರ್ಚೆಗೆ ತಗೊಂಡು ತಪ್ಪಿಸಿಕೊಳ್ಳಲು ಪ್ರಯತ್ನಿಸಿತು. ಎಡಪಕ್ಷಗಳ ಒತ್ತಾಯದಿಂದ ಲೋಕಸಭಾಧ್ಯಕ್ಷರು ಎರಡು ದಿನಗಳೊಳಗೆ ಸರಕಾರ ಈ ಬಗ್ಗೆ ಹೇಳಿಕೆ ನೀಡಬೇಕು ಎಂದು ಆದೇಶಿಸಿದರೂ ಸರಕಾರ ಅದನ್ನು ಪಾಲಿಸದಿದ್ದಾಗ ಎಡಪಕ್ಷಗಳು ಮತ್ತೆ ಘರ್ಜಿಸಿದವು. ಹಣಕಾಸು ಮಂತ್ರಿಗಳು ಒಂದು ಸಬೂಬು ಹೇಳಿದರೆ ಸಂಸದೀಯ ವ್ಯವಹಾರಗಳ ಮಂತ್ರಿ ಇನ್ನೊಂದು ಸಬೂಬು ಹೇಳಿ ಹಣದುಬ್ಬರದ ಬಗ್ಗೆ ಸರಕಾರದ ಮುಜುಗರವನ್ನು ಬಯಲಿಗೆ ತಂದಂತಾಯಿತು.

ಇರಲಿ, ಒಮ್ಮೆ ಹಣದುಬ್ಬರದ ಪ್ರಮಾಣ ಇಳಿಯಿತೆಂದೇ ಇಟ್ಟುಕೊಳ್ಳೋಣ. ಅದರಿಂದ ಪರಿಸ್ಥಿತಿ ಸುಧಾರಿಸುವುದಿಲ್ಲ. ಏಕೆ ಗೊತ್ತೆ? ಏರಿದ ಬೆಲೆಗಳು ಇಳಿಯುವುದಿಲ್ಲ. ಅವು ಇನ್ನೂ ಹೆಚ್ಚೆಚ್ಚು ಏರುವುದು ಸ್ವಲ್ಪ ಕಡಿಮೆ ಆಗಬಹುದು ಅಷ್ಟೇ. ಹಣದುಬ್ಬರ ಇಳಿದರೂ ಜನರ ಆದಾಯಗಳು ಹೆಚ್ಚುವುದಿಲ್ಲ. ಉದಾರೀಕರಣದಿಂದಾಗಿ ಹೆಚ್ಚುತ್ತಲೇ ಇವೆ. ಹೀಗಿರುವಾಗ ಹಣದುಬ್ಬರದ ಅಂಕಿ ಸ್ವಲ್ಪ ಇಳಿದರೆ ಅಂತಹ ಲಾಭವೇನೂ ಜನಸಾಮಾನ್ಯರಿಗೆ ಆಗುವುದಿಲ್ಲ.


ಬಹುಶಃ ಆದ್ದರಿಂದಲೇ ಡಾ.ಸಿಂಗರು ಹಣದುಬ್ಬರ ಕಡಿಮೆ ಮಾಡುತ್ತೇವೆ ಎಂದಿರಬಹುದು. ಜೊತೆಗೆ ಇದು ಚುನಾವಣಾ ಸಮಯವೂ ಹೌದಲ್ಲವೇ?

ಬೆಲೆಯೇರಿಕೆ ಬಗ್ಗೆ ಸಂಸತ್ತಿನಲ್ಲಿ ಹಣಕಾಸು ಮಂತ್ರಿಗಳ ಹೇಳಿಕೆ - ವ್ಯಂಗ್ಯಚಿತ್ರಕಾರರು ಕಂಡಂತೆ



ಹೇಳೀಪ್ಪ, ನಿಮ್ಮ ಇಲಾಖೆಯಲ್ಲೂ ಫೈಲ್ ಕಳೆದಿದೆಯೇ, ವಿಸ್ಸಮಚಾರ....?

'ಬಿಸಿನೆಸ್ ಲೈನ್'ನಲ್ಲಿ ರವಿಕಾಂತ್



ಜನಸಾಮಾನ್ಯರಿಗೊಂದು ದರಪಟ್ಟಿ ಹಣಕಾಸು ಮಂತ್ರಿಗಳಿಗಿನ್ನೊಂದು ದರಪಟ್ಟಿ?

'ಪ್ರಜಾಶಕ್ತಿ'ಯಲ್ಲಿ ವ್ಯಂಗ್ಯ



ವಿರೋಧ ಪಕ್ಷಗಳು ಊಹಾಪೋಹ ಹಬ್ಬಿಸಿವೆ. ....ಬೆಲೆಗಳು ಇಳಿದಿವೆ. ಬೇಕಾದರೆ ನಮ್ಮ ತಜ್ಞರು ತಯಾರಿಸಿದ ಅಂಕಿ-ಅಂಶಗಳನ್ನು ಕೊಡುತ್ತೇವೆ.

'ಟೈಮ್ಸ್ ಆಫ್ ಇಂಡಿಯಾ'ದಲ್ಲಿ ಆರ್.ಕೆ. [illegible]



ದೇಶದೊಳಗೆ

ಆಂಧ್ರಪ್ರದೇಶ: ಡಿಸೆಂಬರ್ 19ರಿಂದ ರಾಜ್ಯವ್ಯಾಪಿ ಮತ ಪ್ರದರ್ಶನಗಳು

ಸಿಪಿಐ(ಎಂ) ಹಾಗೂ ಸಿಪಿಐನ ಸಮಾವೇಶ ಆಂಧ್ರಪ್ರದೇಶದ ಜನತೆಯ ಸಮಸ್ಯೆಗಳನ್ನು ಪರಿಹರಿಸಲು ಸರಕಾರದ ಮೇಲೆ ಒತ್ತಾಯ ತರುವುದಕ್ಕಾಗಿ ಡಿಸೆಂಬರ್ 19ರಿಂದ ರಾಜ್ಯವ್ಯಾಪಿ ಮತಪ್ರದರ್ಶನಗಳನ್ನು ಆರಂಭಿಸಲು ನಿರ್ಧರಿಸಿದೆ.

ಎರಡೂ ಪಕ್ಷಗಳು ಜಂಟಿಯಾಗಿ ಏರ್ಪಡಿಸಿದ್ದ ಈ ಸಮಾವೇಶವನ್ನು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಕೊರಟಾಲಾ ಸತ್ಯನಾರಾಯಣ ಮತ್ತು ಸಿಪಿಐ ರಾಜ್ಯ ಕಾರ್ಯದರ್ಶಿ ದಾಸರಿ ನಾಗಭೂಷಣ ರಾವ್‌ರಿದ್ದ ಅಧ್ಯಕ್ಷ ಮಂಡಲಿ ನಡೆಸಿಕೊಟ್ಟಿತು. ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯ ಬಿ.ವಿ. ರಾಘವುಲು ನಿರ್ಣಯ ಮಂಡಿಸಿದರು. ಭೂಮಿ ಮರುವಿತರಣೆ, ಕೇಂದ್ರ ಸರಕಾರದಿಂದ ಅನುಮತಿಗೆ ಕಾದಿರುವ ಯೋಜನೆಗಳು, ಪೂರ್ಣ ಪಾನ ಪ್ರತಿಬಂಧದ ಜ್ಯಾರಿ, ಎಲ್ಲಾ ಅರ್ಹರಿಗೆ ರೇಶನ್ ಕಾರ್ಡ್, ಬೆಲೆಯೇರಿಕೆ, ಸಾರ್ವಜನಿಕ ವಲಯದ ರಕ್ಷಣೆ ಹಾಗೂ ಕೃಷಿ ಕೂಲಿಕಾರರ ರಕ್ಷಣೆಗೆ ಸಮಗ್ರ ಶಾಸನದ ಪ್ರಶ್ನೆಗಳನ್ನೆತ್ತಿಕೊಂಡು ಚಳುವಳಿ ನಡೆಯಲಿದೆ.

ಕಲೆಕ್ಟರ್ ಕಛೇರಿಗಳೆದುರು ಹಾಗೂ ಮಂಡಲ್ ರೆವಿನ್ಯೂ ಕಛೇರಿಗಳೆದುರು ಮತ ಪ್ರದರ್ಶನಗಳನ್ನು ನಡೆಸಿ ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಲಾಗುವುದು.

ಕೇಂದ್ರ ಸರಕಾರದ ಆರ್ಥಿಕ ನೀತಿಗಳಿಂದಾಗಿ ಬೆಲೆ ಏರುತ್ತಿದೆ, ನಿರುದ್ಯೋಗ ನಾಗಾಲೋಟ ಹೂಡಿದೆ, ಕೈಮಗ್ಗ ಮತ್ತಿತರ ಕುಶಲಕರ್ಮಿಗಳ ಆರ್ಥಿಕ ಸ್ಥಿತಿ ಕೆಲಸದ ದಿನಗಳು ಸತತವಾಗಿ ಕಮ್ಮಿಯಾಗುತ್ತಿರುವುದರಿಂದಾಗಿ ತೀರಾ ಹದಗೆಟ್ಟಿದೆ ಎಂದು ನಿರ್ಣಯತಿಳಿಸಿದೆ.

ಸರಕಾರದ ಒಂದೆಡೆ ವಾಲಿದ ನೀತಿಗಳಿಗೆ ಪರ್ಯಾಯವೊಂದನ್ನು ಕಂಡು ಹಿಡಿಯಬೇಕು ಎಂದು ಸೂಚಿಸಿರುವ ನಿರ್ಣಯ ಕಾಳಸಂತೆಯ ಮೇಲೆ ತಡೆ ಹಾಕಿ ಆಹಾರ ಧಾನ್ಯಗಳನ್ನು ನೇರವಾಗಿ ಭಾರತ ಆಹಾರ ನಿಗಮದಿಂದ ಒದಗಿಸಬೇಕು ಎಂದು ಒತ್ತಾಯಿಸಿದೆ.

ರಾಜ್ಯದಲ್ಲಿ ಕಾಂಗ್ರೆಸ್ ಆಳ್ವಿಕೆಯಲ್ಲಿ ಈ ಸಮಸ್ಯೆಯನ್ನು ಎಂದೂ ಪರಿಹರಿಸಲಿಲ್ಲ ನಂತರ ತೆಲುಗು ದೇಶಂ ಸರಕಾರದಡಿ ಆಂತರಿಕ ತಿಕ್ಕಾಟಗಳಿಂದಾಗಿ ಜನಗಳ ಸಮಸ್ಯೆ ರಾಶಿ ಬೀಳುತ್ತಾ ಹೋಯಿತು ಎನ್ನುತ್ತಾ ಈ ಜಂಟಿ ಸಮಾವೇಶದ ನಿರ್ಣಯ ಇತ್ತೀಚೆಗೆ ಚಂದ್ರಬಾಬುನಾಯ್ಡು ಸರಕಾರ ಆರಂಭಿಸಿದ "ಜನಗಳ ಮನೆಬಾಗಿಲಲ್ಲಿ ಆಡಳಿತ" ಎಂಬ ಪ್ರಚಾರ ಕಾರ್ಯದ ವೇಳೆಗೆ ಬೆಳಕಿಗೆ ಬಂದ ಜನಗಳ ಸಮಸ್ಯೆಗಳನ್ನು ತಕ್ಷಣ ಕೈಗೆತ್ತಿಕೊಳ್ಳಬೇಕು ಎಂದು ಸೂಚಿಸಿದೆ, ಇಲ್ಲವಾದರೆ ಜನ ಹೊಸ ಸರಕಾರದಲ್ಲಿ ವಿಶ್ವಾಸ ಕಳೆದುಕೊಳ್ಳುವರು ಎಂದಿದೆ.

ಈ ವಿಷಯದಲ್ಲಿ ಸರಕಾರದಿಂದ ಉತ್ತರ ಬಾರದಿದ್ದರೆ ಸಮಸ್ಯೆಗಳ ಪರಿಹಾರಕ್ಕೆ ಆಂದೋಲನ ಆರಂಭಿಸುವುದು ಬಿಟ್ಟು ಬೇರೆ ಮಾರ್ಗವಿಲ್ಲ. ಜನಗಳಲ್ಲಿ ಈ ಬಗ್ಗೆ ಒಂದು ಬಲವಾದ ಅರಿವು ಮೂಡಿಸಬೇಕು ಎಂದು ನಿರ್ಣಯ ಹೇಳಿದೆ. ಪರಸ್ಪರ ತಿಕ್ಕಾಟದಲ್ಲಿ ಮುಳುಗುವ ಬದಲು ಜನಗಳ ಕುಂದು ಕೊರತೆಗಳ ಕಡೆಗೆ ಗಮನ ನೀಡಿ ಎಂದು ಬಿ.ವಿ. ರಾಘವುಲು ಹೇಳಿದರು.

ಸಣಬು ಕಾರ್ಮಿಕರ ಮುಷ್ಕರ ಅಂತ್ಯ

ಪಶ್ಚಿಮ ಬಂಗಾಳದಾದ್ಯಂತ ನಡೆಯುತ್ತಿದ್ದ ಸಣಬು ಕಾರ್ಮಿಕರ ಮುಷ್ಕರವನ್ನು ಡಿಸೆಂಬರ್ 3ರಂದು ಹಿಂತೆಗೆದುಕೊಳ್ಳಲಾಯಿತು.ಅಂದು17ಯೂನಿಯನ್‌ಗಳು ಹಾಗೂ ಮಾಲಕರ ನಡುವೆ ಒಂದು ಒಪ್ಪಂದವಾಯಿತು. ನವಂಬರ್ 29ರಂದು ಅನಿರ್ದಿಷ್ಟ ಕಾಲದ ಮುಷ್ಕರ ಆರಂಭವಾಗಿತ್ತು. ದೀರ್ಘ ಮಾತುಕತೆಗಳ ನಂತರ ಮುಖ್ಯಮಂತ್ರಿ ಜ್ಯೋತಿಬಸುವರವರ ಸಮ್ಮುಖದಲ್ಲಿಒಂದುಒಪ್ಪಂದಕ್ಕೆಬರಲಾಯಿತು.

ಈ ಮುಷ್ಕರದ ಮಹತ್ವಪೂರ್ಣ ಸಾಧನೆಯೆಂದರೆ ಹತ್ತು ಸಾವಿರ ಕ್ಯಾಶುಯಲ್ ಕಾರ್ಮಿಕರನ್ನು ಖಾಯಂ ಮಾಡಲು ಮಾಲಕರು ಒಪ್ಪಬೇಕಾಗಿ ಬಂದದ್ದು. ಖಾಯಂ ಮತ್ತು ಕ್ಯಾಶುಯಲ್ ಕಾರ್ಮಿಕರ ಸಂಖ್ಯೆ 90:20 ಇರಬೇಕೆಂಬುದು ಮುಷ್ಕರಕಾರರ ಪ್ರಮುಖ ಬೇಡಿಕೆಯಾಗಿತ್ತು. ಮೂರು ತಿಂಗಳೊಳಗೆ ಹತ್ತು ಸಾವಿರ ಕಾರ್ಮಿಕರಿಗೆ ಖಾಯಂ ಸ್ಥಾನಮಾನ ಕೊಡುವುದರಿಂದ ಪ್ರತಿ ಗಿರಣಿಯಲ್ಲಿ 200 ಕಾರ್ಮಿಕರಂತೆ ಅವರ ಕೆಲಸ ಖಾಯಂ ಆದಂತಾಗಿದೆ. ಇದಲ್ಲದೆ ರಾಜ್ಯ ಸರಕಾರದ ಸಮಿತಿಯೊಂದು ಈಸಮಸ್ಯೆಯ ಎಲ್ಲಾ ಅಂಶಗಳ ಬಗ್ಗೆ ತನಿಖೆ ನಡೆಸಿ ಮೂರು ತಿಂಗಳೊಳಗೆ ವರದಿ ಒಪ್ಪಿಸಬೇಕು. ಈ ಒಪ್ಪಂದದಿಂದ ತಿಂಗಳ ಕೂಲಿ ರೂ. 90 ಹೆಚ್ಚಲು, ತುಟ್ಟಿಭತ್ಯೆ ಕೂಡಾ ಹೆಚ್ಚಲು ನೆರವಾಗಿದೆ. ಇನ್ನು ಮುಂದೆ ಮಹಿಳಾ ಮತ್ತು ಪುರುಷ ಕಾರ್ಮಿಕರ ನಡುವೆ ಪಕ್ಷಪಾತ ಇರುವುದಿಲ್ಲ.

ಕಾರ್ಮಿಕರಿಗೆ ಬೋನಸ್ ಕೊಡಬೇಕೆಂದೂ ಮುಖ್ಯಮಂತ್ರಿಗಳು ಸಣಬು ಕಾರ್ಮಿಕರಿಗೆ ನಿರ್ದೇಶನ ನೀಡಿದ್ದಾರೆ.

ಸಿಐಟಿಯು ಮುಖಂಡರಾದ ನಿರೇನ್ ಘೋಷ್ ಮತ್ತು ಮಹಮ್ಮದ್ ಅಮೀನ್ ಈ ಒಪ್ಪಂದವನ್ನು "ಭಾಗಶಃ ಯಶಸ್ಸು" ಎಂದು ಸ್ವಾಗತಿಸಿದ್ದಾರೆ. ಕಾರ್ಮಿಕರ ಇನ್ನು ಕೆಲವು ಬೇಡಿಕೆಗಳಿವೆ, ಅದಕ್ಕಾಗಿ ಹೋರಾಟ ಮುಂದುವರೆಯುತ್ತದೆ ಎಂದು ಅವರು ಹೇಳಿದರು. ಆದರೆ ಈಗಿನ ಸನ್ನಿವೇಶದಲ್ಲಿ ಈಗ ಗಳಿಸಿರುವ ಗೆಲುವು ಗಮನಾರ್ಹ ಎಂದು ಅವರು ಹೇಳಿದರು. ಇಂಟಕ್ ಮುಖಂಡ ಸುಬ್ರತೋ ಮುಖರ್ಜಿ ಕೂಡಾ ಒಪ್ಪಂದವನ್ನು ಸ್ವಾಗತಿಸಿ ಕಾರ್ಮಿಕರು ಗಮನಾರ್ಹ ಸಾಧನೆ ಮಾಡಿದ್ದಾರೆ ಎಂದರು. ಸಮಸ್ಯೆಯನ್ನು ಪರಿಹರಿಸುವಲ್ಲಿ ಜ್ಯೋತಿ ಬಸುರವರ ಪಾತ್ರವನ್ನು ಕಾರ್ಮಿಕ ಮುಖಂಡರು ಸ್ವಾಗತಿಸಿದ್ದಾರೆ.

(ಐ.ಎನ್.ಎಸ್)

ಕಾಶ್ಮೀರಕ್ಕೆ ಸ್ವಾಯತ್ತತೆಯ ಭರವಸೆ ರಿಯಾಯ್ತಿಯಲ್ಲ ನ್ಯಾಯ ಬದ್ಧ ಹಕ್ಕು – ಸಿಪಿಐ(ಎಂ)

ಕಾಶ್ಮೀರದ ಜನಗಳಲ್ಲಿ ವಿಶ್ವಾಸಾರ್ಹ ನಂಬಿಕೆ ಮೂಡಿಸುವುದು ಈಗಿನ ಗೋಜಲಿನಿಂದ ಹೊರಬರಲು ಏಕೈಕ ದಾರಿ ಎಂದು ಸಿಪಿಐ(ಎಂ)ನ ಜಮ್ಮು-ಕಾಶ್ಮೀರ ರಾಜ್ಯ ಕಾರ್ಯದರ್ಶಿ ಮಹಮ್ಮದ್ ತರಿಗಾಮಿ ಹೇಳಿಕೆಯೊಂದರಲ್ಲಿ ಹೇಳಿದ್ದಾರೆ. ಜನಸಾಮಾನ್ಯರ ಮನವನ್ನು ಮತ್ತೆ ಗೆಲ್ಲಬೇಕಾದರೆ ರಾಜ್ಯಕ್ಕೆ ಗರಿಷ್ಠ ಸ್ವಾಯತ್ತತೆ ರೂಪಿಸಬೇಕು, ಅದನ್ನು ಯಾರೂ ಬದಲಿಸದಂತಿರಬೇಕು, ಸ್ವಾಯುತ್ತತೆಯ ಪ್ರಯೋಜನ ರಾಜ್ಯದ ಎಲ್ಲಾ ಪ್ರದೇಶಗಳಿಗೆ ಇಳಿದು ಬರಬೇಕು. ಸ್ವಾಯತ್ತತೆಯ ಭರವಸೆ ಕಾಶ್ಮೀರದ ಜನತೆಗೆ ನೀಡುವ ರಿಯಾಯ್ತಿಯೇನಲ್ಲ, ಅದು ಅವರ ನ್ಯಾಯಬದ್ಧ ಹಕ್ಕು ಏಕೆಂದರೆ ಅರಸುಮನೆತನಗಳ ದುಷ್ಟ ಆಳ್ವಿಕೆಯ ವಿರುದ್ಧ ಹೋರಾಡಿದ ಕಾಶ್ಮೀರಿಗಳು ಗರಿಷ್ಠ ಹಕ್ಕುಗಳನ್ನು ತಮ್ಮಲ್ಲೇ ಹೊಂದಿರಬೇಕೆಂದು ಬದಲಿಸಿದರು. ಇದು ಒಕ್ಕೂಟ ನೀತಿಗೆ ಅನುಗುಣವಾಗಿಯೇ ಇದೆ ಎಂದು ಕಾಂ. ಮಹಮ್ಮದ್ ತರಿಗಾಮಿ ಹೇಳಿದ್ದಾರೆ. ಅದೇ ವೇಳೆಗೆ ಸಿಪಿಐ(ಎಂ) ರಾಜ್ಯ ಸಮಿತಿ ರಾಜ್ಯದ ಜನತೆಗೆ ಒಂದು ಎಚ್ಚರಿಕೆಯನ್ನು ಕೊಟ್ಟಿದೆ- ಒಂದು ಕೋಮನ್ನು ಇನ್ನೊಂದರ ವಿರುದ್ಧ ಎತ್ತಿಕಟ್ಟುವುದು ಇಡೀ ರಾಜ್ಯಕ್ಕೆ ಅಪಾಯಕಾರಿ, ಇಂತಹ ಯಾವುದೇ ಪ್ರಯತ್ನವನ್ನು ರಾಜ್ಯದ ಎಲ್ಲಾ ಮೂರು ಪ್ರದೇಶಗಳ ಜನಗಳ ಐಕ್ಯ ಪ್ರಯತ್ನಗಳಿಂದ ಪ್ರತಿರೋಧಿಸಬೇಕು ಎಂದು ಮಹಮ್ಮದ್ ತರಿಗಾಮಿ ಹೇಳಿದ್ದಾರೆ.

ಕಾಶ್ಮೀರಕ್ಕೆ ಗರಿಷ್ಠ ಸ್ವಾಯತ್ತತೆ ನೀಡಲು ಕೇಂದ್ರ ಸರಕಾರ ತುರ್ತು ಕ್ರಮಗಳನ್ನು ಕೈಗೊಳ್ಳಬೇಕು ಹಾಗೂ ಈ ಗ್ಯಾರಂಟಿಯನ್ನು ಯಾರೂ ಹಿಂತೆಗೆದುಕೊಳ್ಳದಂತಿರಬೇಕು ಎಂದು ಸಿಪಿಐ(ಎಂ)ನ ಜಮ್ಮು-ಕಾಶ್ಮೀರ ರಾಜ್ಯ ಸಮಿತಿ ಒತ್ತಾಯಿಸಿದೆ. ಅದೇ ರೀತಿ ರಾಜ್ಯದ ಎಲ್ಲಾ ಪ್ರದೇಶಗಳ ಹಾಗೂ ಕೋಮುಗಳ ಐಕ್ಯತೆಯನ್ನು ಬಲಪಡಿಸಲು ಒಂದು ಕಾನೂನಿನ ವ್ಯವಸ್ಥೆ ರೂಪಿಸಬೇಕು, ಈ ಮೂಲಕ ಸ್ವಾಯತ್ತತೆಯ ಪ್ರಯೋಜನ ರಾಜ್ಯದ ಎಲ್ಲಾ ಪ್ರದೇಶಗಳಿಗೆ ಸಮಾನ ರೀತಿಯಲ್ಲಿ ಸಿಗುವಂತಾಗಬೇಕು ಎಂದೂ ಸಿಪಿಐ(ಎಂ) ಒತ್ತಾಯಿಸಿದೆ.

ಗುಜರಾತಿನಲ್ಲೂ ವಿದ್ಯುತ್ ಬರಗಾಲ

ಯಾವ ಗಳಿಗೆಯಲ್ಲೂ ಇಡೀ ಗುಜರಾತ್ ರಾಜ್ಯ ಗಾಢಾಂಧಕಾರಕ್ಕೆ ತಳ್ಳಲ್ಪಡುವ ಭಯ ಗುಜರಾತಿನ ವಿದ್ಯುತ್ ತಜ್ಞರನ್ನು ಕಾಡುತ್ತಿದೆಯಂತೆ. ಈಗಾಗಲೇ ಕೈಗಾರಿಕಾ ಘಟಕಗಳಿಗೆ 25% ಕಡಿತ ಮಾಡಿಯೂ ದೈನಂದಿನ ವಿದ್ಯುತ್ ಅಗತ್ಯಗಳನ್ನು ಪೂರೈಸಲು ರಾಜ್ಯ ಸರಕಾರ ಒದ್ದಾಡುತ್ತಿದೆ.

ಕೃಷಿ ವಲಯದಿಂದ ದಿನಕ್ಕೆ 14 ಗಂಟೆಯಾದರೂ ವಿದ್ಯುತ್ ಪೂರೈಕೆಯಾಗಲೇಬೇಕೆಂದು ಬಲವಾದ ಬೇಡಿಕೆಯಿದೆ.

ಗುಜರಾತಿನಲ್ಲಿ 6165 ಮೆಗಾವಾಟ್ ವಿದ್ಯುತ್ ಉತ್ಪಾದನಾ ಸಾಮರ್ಥ್ಯವಿದೆ. ಅಲ್ಲದೆ ಇನ್ನೂ 1100 ಮೆಗಾವಾಟ್ ಕೇಂದ್ರದಿಂದ ಸಿಗುತ್ತಿದೆ. ಆದರೆ ನಿಜವಾದ ವಿದ್ಯುತ್ ಉತ್ಪಾದನೆ 4000 ಮೆ.ವಾ. ಮಾತ್ರ. ಬೇಕಾಗಿರುವುದು ಕನಿಷ್ಟ 4500 ಮೆ.ವಾ. ಕಾಂಗ್ರೆಸ್ ಸರಕಾರದಂತೆ ಬಿಜೆಪಿ ಸರಕಾರವೂ ಖಾಸಗಿಯವರೇ ತಮ್ಮನ್ನು ಉಳಿಸಬೇಕು ಎಂದು ನಿರೀಕ್ಷಿಸುತ್ತಿದೆ. ವಿದೇಶೀಯರು ಹಾಗೂ ಅನಿವಾಸಿ ಭಾರತೀಯರಿಗೆ ಹಲವು ರಿಯಾಯ್ತಿಗಳನ್ನು ಹಾಗೂ ತೆರಿಗೆ ವಿನಾಯ್ತಿ ನೀಡುವ ವಿದ್ಯುತ್ ಯೋಜನೆಯನ್ನು ಬಿಜೆಪಿ ಸರಕಾರ ರೂಪಿಸುತ್ತಿದೆಯಂತೆ.

ಫಾರುಕ್ ಅಬ್ದುಲ್ಲಾ ಮೇಲೆ ಆರ್.ಎಸ್.ಎಸ್. ಯುವಕನ ಹಲ್ಲೆ

ಜಮ್ಮುವಿನಿಂದ 177 ಕಿ.ಮೀ. ದೂರದ ರಾಜೌರಿಯಲ್ಲಿ ಪ್ರವಾಸದಲ್ಲಿದ್ದ ನ್ಯಾಶನಲ್ ಕಾನ್ಫರೆನ್ಸ್ ಅಧ್ಯಕ್ಷ ಹಾಗೂ ಜಮ್ಮು-ಕಾಶ್ಮೀರದ ಮಾಜಿ ಮುಖ್ಯಮಂತ್ರಿ ಫಾರುಕ್ ಅಬ್ದುಲ್ಲಾ ಮೇಲೆ ಆರ್.ಎಸ್.ಎಸ್. ಕಾರ್ಯಕರ್ತನೊಬ್ಬ ಹಲ್ಲೆ ಮಾಡಿರುವ ಪ್ರಕರಣ ವರದಿಯಾಗಿದೆ. ಯುವಕರ ನಿಯೋಗವೊಂದನ್ನು ಫಾರುಕ್ ಅಬ್ದುಲ್ಲಾ ಭೇಟಿ ಮಾಡಿ ಮಾತನಾಡುತ್ತಿದ್ದಾಗ ಅವರ ಜತೆಯಲ್ಲಿದ್ದ ಯಶವಂತ ಸಿಂಧೆ ಎಂಬ ಮಹಾರಾಷ್ಟ್ರದಿಂದ ಬಂದು ಇಲ್ಲಿ ನೆಲೆಸಿರುವ ಆರ್.ಎಸ್.ಎಸ್. ಕಾರ್ಯಕರ್ತ ಫಾರುಕ್ ಅಬ್ದುಲ್ಲಾರವರ ಕೆನ್ನೆಗೆ ಹೊಡೆದ. ಭದ್ರತಾ ಸಿಬ್ಬಂದಿ ಅವನನ್ನು ಹಿಡಿದು ಪೋಲೀಸರಿಗೆ ಒಪ್ಪಿಸಿರುವುದಾಗಿ ಸರಕಾರಿ ವಕ್ತಾರರು ತಿಳಿಸಿದ್ದಾರೆ. ಇದು ಆರ್.ಎಸ್.ಎಸ್.ನ 'ಶಿಸ್ತಿ'ನ ಒಂದು ನಮೂನೆ ಇರಬಹುದಲ್ಲವೇ?

ಮಧ್ಯಪ್ರದೇಶ ಮುಖ್ಯಮಂತ್ರಿಗೆ ಇಕ್ಕಟ್ಟು

ಮಧ್ಯಪ್ರದೇಶ ಉಪಮುಖ್ಯಮಂತ್ರಿ ಸುಭಾಷ್ ಯಾದವ್ ರಾಜೀನಾಮೆ ನೀಡುವ ಸಂಭವವಿದೆ. ರಾಜ್ಯದ ಲೋಕಾಯುಕ್ತರ ವರದಿ ಈತನ ಬಗ್ಗೆ ತೀವ್ರ ಟೀಕೆ ಮಾಡಿರುವುದು ಇದಕ್ಕೆ ಕಾರಣ. ಈ ವರದಿ ಎಂಟು ತಿಂಗಳ ಹಿಂದೆ ಸುಮಾರು ಇಪ್ಪತ್ತಕ್ಕೂ ಹೆಚ್ಚು ಸಬ್-ಇಂಜಿನಿಯರುಗಳ ನೇಮಕಕ್ಕೆ ಸಂಬಂಧಪಟ್ಟದ್ದು. ಮುಖ್ಯಮಂತ್ರಿ ದಿಗ್ವಿಜಯ ಸಿಂಗ್‌ರ ಪೇಚಿಗೆ ಕಾರಣ ಈ ನೇಮಕಗಳಲ್ಲಿ ಹಲವು ಅವರ ಶಿಫಾರಸಿನಿಂದ ಮಾಡಿದವುಗಳು. ಈ ಲೋಕಾಯುಕ್ತ ವರದಿ ಇತರ ಮಂತ್ರಿಗಳಲ್ಲೂ ನಡುಕ ಉಂಟು ಮಾಡಿದೆಯಂತೆ. ಏಕೆಂದರೆ ಅವರೂ ಮುಖ್ಯಮಂತ್ರಿಗಳ ಶಿಫಾರಸಿನಂತೆ ಇಂತಹ ನೇಮಕಗಳನ್ನು ಮಾಡಿದವರೇ.

ಉತ್ತರಪ್ರದೇಶದಲ್ಲಿ ಬಿಜೆಪಿ ಮಂದಿ ಸಮಾಜವಾದಿ ಪಕ್ಷಕ್ಕೆ

ಉತ್ತರಪ್ರದೇಶದ ನಗರಸಭಾ ಚುನಾವಣೆಗಳಲ್ಲಿ ಗೆಲುವಿನ ಸಂಭ್ರಮ, ಆದರ ಬೆನ್ನ ಹಿಂದೆಯೇ ಫಿರೋಜಾಬಾದ್ ಜಿಲ್ಲೆಯ ಶಿಕೊಹಾಬಾದ್‌ನಲ್ಲಿ ಡಿಸೆಂಬರ್ 10ರಂದು ನಡೆದ ರ್ಯಾಲಿಯ 'ಯಶಸ್ಸಿ'ನ ಸಂಭ್ರಮ, ಅಲ್ಲಿನ ಒಂದು ಬಲಿಷ್ಠ ಕಾಂಗ್ರೆಸ್(ಐ) ಮುಖಂಡ ಅಶೋಕ್ ಯಾದವ್ ಅಟಲ್ ಬಿಹಾರಿ ವಾಜಪೇಯಿ ಹಾಗೂ ಮುರಳಿ ಮನೋಹರ ಜೋಷಿಯವರ ಸಮ್ಮುಖದಲ್ಲಿ ಬಿಜೆಪಿ ಸೇರಿದ ಸಂಭ್ರಮದಲ್ಲಿರುವಾಗಲೇ ಪಕ್ಷದ ಮೈನ್ ಪುರೀ ಜಿಲ್ಲೆಯಲ್ಲಿ ಸಮಾಜವಾದಿ ಪಕ್ಷ ಬಿಜೆಪಿಯೊಳಗೆ ದಾರಿ ಮಾಡಿಕೊಂಡಿದೆ ಎಂದು 'ಹಿಂದೂ' ಪತ್ರಿಕೆ (12.12.95) ವರದಿ ಮಾಡಿದೆ. ಮೈನ್‌ಪುರಿ ನಗರ ಭಾರತೀಯ ಜನತಾ ಯುವ ಮೋರ್ಚಾದ ಅಧ್ಯಕ್ಷ ಅಜಿತ್ ಕುಮಾರ್ ಜೈನ್, ಬಿಜೆಪಿ ಅಲ್ಪಸಂಖ್ಯಾತ ಸೆಲ್‌ನ ಪ್ರಧಾನ ಕಾರ್ಯದರ್ಶಿ ಸಿಕಂದರ್‌ಖಾನ್ ಹಾಗೂ ಬಿಜೆಪಿಯ ಮೈನ್‌ಪುರಿ ನಗರ ಘಟಕದ ಉಪಾಧ್ಯಕ್ಷ ಧರ್ಮೇಂದ್ರ ಜೈನ್ ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಿ ಸಮಾಜವಾದಿ ಪಕ್ಷಕ್ಕೆ ಸೇರಿದರು.

ಮೈನ್‌ಪುರಿ ಹಾಗೂ ಇಟಾವಾ ಜಿಲ್ಲೆಗಳ ಇನ್ನೂ ಹಲವಾರು ಬಿಜೆಪಿ ಮುಖಂಡರು ಸಮಾಜವಾದಿ ಪಕ್ಷ ಸೇರಲಿದ್ದಾರೆಂದು ಮುಲಾಯಂ ಸಿಂಗ್‌ಯಾದವ್ ಹೇಳಿದ್ದಾರೆ.

ತ್ರಿಪುರಾ ಮುನಿಸಿಪಲ್ ಚುನಾವಣೆ ಎಡರಂಗದ ಅಭ್ಯರ್ಥಿಗಳ ಪಟ್ಟಿ ಬಿಡುಗಡೆ

ಸದ್ಯದಲ್ಲೇ ನಡೆಯಲಿರುವ ತ್ರಿಪುರಾ ರಾಜ್ಯದ ನಗರಸಭಾ ಚುನಾವಣೆಗಳಲ್ಲಿ ಎಡರಂಗಕ್ಕೆ ಬೃಹತ್ ಬೆಂಬಲ ನೀಡಬೇಕೆಂದು ಎಡರಂಗ ಅಧ್ಯಕ್ಷ ಮಾಣಿಕ್ ಸರ್ಕಾರ್ ಮನವಿ ಮಾಡಿಕೊಳ್ಳುತ್ತಾ ಎಡರಂಗದ ಅಭ್ಯರ್ಥಿಗಳ ಪಟ್ಟಿಯನ್ನು ಬಿಡುಗಡೆ ಮಾಡಿದರು. ರಾಜ್ಯದಲ್ಲಿ ಶಾಂತಿ, ಸಾಮರಸ್ಯ, ಪ್ರಜಾಪ್ರಭುತ್ವ ಹಾಗೂ ಪ್ರಗತಿಯನ್ನು ಕ್ರೋಢೀಕರಿಸಲು ಇದು ಅಗತ್ಯ ಎಂದು ಅವರು ಹೇಳಿದರು.

ಒಟ್ಟು 143 ಎಡರಂಗ ಅಭ್ಯರ್ಥಿಗಳು ಚುನಾವಣಾ ಕಣದಲ್ಲಿದ್ದು ಇವರಲ್ಲಿ ಸಿಪಿಐ(ಎಂ) ಅಭ್ಯರ್ಥಿಗಳ ಸಂಖ್ಯೆ 131, ಸಿಪಿಐ 5, ಫಾರ್ವರ್ಡ್ ಬ್ಲಾಕ್ 4 ಹಾಗೂ ಆರ್‌ಎಸ್‌ಪಿ3.

ಮುನಿಸಿಪಲ್ ಚುನಾವಣೆಗಳು ತ್ರಿಪುರಾದಲ್ಲಿ ಪ್ರಜಾಪ್ರಭುತ್ವವನ್ನು ಮತ್ತೆ ನೆಲೆಗೊಳಿಸುವ ಎಡರಂಗ ಸರಕಾರದ ಪ್ರಯತ್ನದಲ್ಲಿ ಒಂದು ದೊಡ್ಡ ಹೆಜ್ಜೆ ಎಂದು ಮಾಣಿಕ್ ಸರ್ಕಾರ್ ಹೇಳಿದರು. ಕಾಂಗ್ರೆಸ್-ಟಿಯುಜೆಎಸ್ ಕೂಟದ ಐದು ವರ್ಷಗಳ ಆಳ್ವಿಕೆಯಲ್ಲಿ ಎಲ್ಲಾ ಪ್ರಜಾಸತ್ತಾತ್ಮಕ ಸಂಸ್ಥೆಗಳನ್ನು ಕಳಚಿ ಹಾಕಲಾಯಿತಷ್ಟೇ ಅಲ್ಲ, ಅವುಗಳ ಸಂಪನ್ಮೂಲಗಳನ್ನೆಲ್ಲಾ ವೈಯಕ್ತಿಕ ಲಾಭಕ್ಕೆ ಬಳಸಲಾಯಿತು. ಎಡರಂಗ ಸರಕಾರ ಅಧಿಕಾರಕ್ಕೆ ಬಂದ ಮೇಲೆ ಕಳೆದ ಒಂದೂವರೆ ವರ್ಷದಲ್ಲಿ ಮೂರು ಹಂತಗಳ ಪಂಚಾಯತು ವ್ಯವಸ್ಥೆಗೆ, ಸ್ವಾಯತ್ತ ಜಿಲ್ಲಾ ಮಂಡಳಿಗೆ ಮುಕ್ಕಾಲು ಪಾಲು ಸಹಕಾರಿ ಸಂಘಗಳಿಗೆ ಚುನಾವಣೆಗಳನ್ನು ನಡೆಸಿದ ನಂತರ ಈಗ ಮುನಿಸಿಪಾಲಿಟಿಗಳಿಗೂ ಚುನಾವಣೆ ನಡೆಸಲಾಗುತಿದೆ.

ಇವರು ಬಿಜೆಪಿಯ ಪೋಷಕರು!

ಸ್ವದೇಶಿಯೋ, ವಿದೇಶಿಯೋ ಬಿಜೆಪಿ ರಾಜಕೀಯದ ಕಂಪೆನೀಕರಣವನ್ನು ಗಂಭೀರವಾಗಿ ತಗೊಳ್ಳುತ್ತಿದೆ. ದಿಲ್ಲಿಯಲ್ಲಿ ಅಧಿಕಾರ ಪೀಠದ ಎರಡನೇ ವಾರ್ಷಿಕದಂದು ರಾಜಧಾನಿಯೆಲ್ಲೆಡೆ ದೊಡ್ಡದೊಡ್ಡ ಜಾಹೀರಾತು ಫಲಕಗಳಲ್ಲಿ ಕಾವಿ ಪಡೆಗಳ ಪೋಷಕರು ಯಾರು ಎಂಬುದು ಸ್ವಯಂವೇದ್ಯವಾಗಿತ್ತು.

ಮದನ್ ಲಾಲ್ ಖುರಾನಾರ ಸರಕಾರ ಬಿಜೆಪಿಯ 100 ಚುನಾವಣಾ ಭರವಸೆಗಳಲ್ಲಿ 90ನ್ನು ಜ್ಯಾರಿಗೆ ತಂದಿದೆ ಎಂದು ಜಗತ್ತಿಗೆ ಸಾರಿದ ಪ್ರತಿಯೊಂದು ಜಾಹೀರಾತು ಫಲಕದಲ್ಲೂ ಕೆಳಗೆ "ಸ್ಥಳ ಕೃಪೆ" ಎಂಬ ಕಣ್ಣಿಗೆ ಎದ್ದು ಕಾಣುವ ಅಕ್ಷರಗಳು ಇದಕ್ಕೆ ಹಣ ಕೊಟ್ಟವರು ಯಾರು ಎಂಬುದನ್ನು ತಿಳಿಯಪಡಿಸಿತ್ತು-ಅವುಗಳಲ್ಲಿ ಪ್ರಮುಖವಾದದ್ದು ಒಂದು ಇತ್ತೀಚೆಗೆ ತನ್ನ ಶೇರು ಬಿಡುಗಡೆ ಮಾಡಿದ್ದ ಒಂದು ಔಷಧಿ ಕಂಪನಿ ಹಾಗೂ ಇನ್ನೊಂದು ನಗರದ ಪ್ರಮುಖ ಆಭರಣ ವ್ಯಾಪಾರಿ.

ರಾಜಧಾನಿಯ ನಗರಸಭೆಯ ಅಧಿಕಾರಿಗಳು ಆಗಾಗ ಬೃಹತ್ ಜಾಹೀರಾತು ಫಲಕಗಳನ್ನು ತೆಗೆಯುವ ಕೆಲಸ ನಡೆಸುತ್ತಿರುತ್ತಾರೆ - ಅವು ವಾಹನ ಚಾಲಕರ ಏಕಾಗ್ರತೆಯನ್ನು ಭಂಗ ಮಾಡುತ್ತವೆಯೆಂಬ ಕಾರಣಕ್ಕಾಗಿ. ಆದರೆ ನರಸಿಂಹರಾವ್, ರಾಜೀವ್ ಗಾಂಧಿಯವರ ಬೃಹತ್ ಕಟೌಟ್‌ಗಳೊಡನೆ ಸ್ಪರ್ಧೆಗಿಳಿದಿರುವ ಬಿಜೆಪಿಯ ದೈತ್ಯ ಜಾಹೀರಾತು ಫಲಕಗಳು ದಿಲ್ಲಿಯ ಮಹಾನಗರಪಾಲಿಕೆಯ ಹುಬ್ಬೇರಿಸಲಿಲ್ಲ ಎಂಬುದು ಕುತೂಹಲಕಾರಿ.

-ಇಂಡಿಯನ್ ಎಕ್ಸ್‌ಪ್ರೆಸ್ (12.12.9[illegible]

ಬಾಂಗ್ಲಾದೇಶದಲ್ಲಿ ಮತ್ತೆ 72 ಗಂಟೆಗಳ ಹರತಾಳ

ಬಾಂಗ್ಲಾದೇಶ ಮತ್ತೆ ಡಿಸೆಂಬರ್ 7ರಿಂದ 11ರವರೆಗೆ 72 ಗಂಟೆಗಳ ಹರತಾಳ ಕಂಡಿತು. ಈ ಹರತಾಳದಲ್ಲಿ ಕನಿಷ್ಟ 60 ಮಂದಿ ಗಾಯಗೊಂಡಿದ್ದಾರೆಂದು ತಿಳಿದು ಬಂದಿದೆ. ರಾಜಧಾನಿ ಢಾಕಾ, ಚಿತ್ತಗಾಂಗ್ ಮತ್ತಿತರ ಹಲವು ಕಡೆ ಹಿಂಸಾಚಾರ, ನಾಡ ಬಾಂಬ್ ಸ್ಫೋಟ, ಸರಕಾರೀ ಬೆಂಬಲಿಗರು ಹಾಗೂ ಪ್ರತಿಪಕ್ಷಗಳ ನಡುವೆ ತಿಕ್ಕಾಟಗಳು ನಡೆದ ವರದಿಗಳು ಬಂದಿವೆ.

ಕಳೆದ ಎರಡು ವರ್ಷಗಳಿಂದ ಬಾಂಗ್ಲಾದೇಶದ ಪ್ರತಿಪಕ್ಷಗಳು ನಡೆಸಿರುವ ಪ್ರತಿಭಟನೆಗಳ ಒಂದು ಪರಿಣಾಮವಾಗಿ ಕಳೆದ ತಿಂಗಳು ಸಂಸತ್ತನ್ನು ವಿಸರ್ಜಿಸಿ ಜನವರಿ 18ರಂದು ಚುನಾವಣೆ ಎಂದು ಗೊತ್ತುಪಡಿಸಲಾಗಿತ್ತು. ಆದರೆ ಖಾಲಿದಾ ಜಿಯಾರ ಸರಕಾರ ಮಧ್ಯಂತರ ಸರಕಾರವಾಗಿ ಮುಂದುವರಿಯುತ್ತಿರುವುದನ್ನು ಪ್ರತಿಪಕ್ಷಗಳು ಬಲವಾಗಿ ವಿರೋಧಿಸುತ್ತಿವೆ. ಆಕೆ ರಾಜೀನಾಮೆ ನೀಡಿ ಒಂದು ತಟಸ್ಥ ಹಂಗಾಮಿ ಸರಕಾರದ ಉಸ್ತುವಾರಿಯಲ್ಲಿ ಮುಂದಿನ ಚುನಾವಣೆಗಳು ನಡೆಯಬೇಕು ಎಂಬುದು ಪ್ರತಿಪಕ್ಷಗಳ ಒತ್ತಾಯ. ಇದಕ್ಕೆ ಖಾಲಿದಾ ಸರಕಾರ ಸಿದ್ಧವಿಲ್ಲವಾದ್ದರಿಂದ 72 ಗಂಟೆಗಳ ಹರತಾಳಕ್ಕೆ ಪ್ರತಿಪಕ್ಷಗಳು ಕರೆ ನೀಡಿದವು. ಈ ಮೂರು ದಿನಗಳಲ್ಲಿ ಇಡೀ ದೇಶದಲ್ಲಿ ಜನಜೀವನ ಅಸ್ತವ್ಯಸ್ತಗೊಂಡಿತೆಂದು ವರದಿಯಾಗಿದೆ. ಪ್ರತಿಪಕ್ಷಗಳ ಒತ್ತಾಯಕ್ಕೆ ಮಣಿಯದೆ ಮುಂದಿನ ಚುನಾವಣೆಗಳು ಅಸಾಧ್ಯ ಎಂಬ ಸಂದೇಶವನ್ನು ಪ್ರಧಾನಮಂತ್ರಿಗಳಿಗೆ ತಲುಪಿಸಿದ್ದೇವೆ ಎಂದು ಪ್ರತಿಪಕ್ಷಗಳು ಹೇಳುತ್ತಿವೆ.

ಈ ನಡುವೆ ಬಾಂಗ್ಲಾ ದೇಶದ ಮುಖ್ಯ ಚುನಾವಣಾ ಕಮೀಶನರ್ ಡಿಸೆಂಬರ್ 17ರಂದು ಚುನಾವಣಾ ಪ್ರಕ್ರಿಯೆ ಆರಂಭವಾಗುವ ಮೊದಲು ಪ್ರಧಾನ ರಾಜಕೀಯ ಪಕ್ಷಗಳು ಒಮ್ಮತಕ್ಕೆ ಬಂದರೆ ಚುನಾವಣೆಗಳನ್ನು ಮುಂದೂಡಬಹುದು ಎಂದು ಹೇಳಿರುವುದು ಕೊನೆಗೂ ಖಲೀದಾ ಜಿಯಾ ಪ್ರತಿಪಕ್ಷಗಳ ಒತ್ತಾಯಕ್ಕೆ ಮಣಿಯುವ ಸಂಕೇತ ಎಂದು ಹೇಳಲಾಗಿದೆ. ಅಧ್ಯಕ್ಷ ಅಬ್ದುಲ್ ರಹಮಾನ್ ಬಿಸ್ವಾಸ್ ಕೂಡಾ ತನ್ನ ಅಧಿಕಾರಗಳನ್ನು ಬಳಸಿ ರಾಜಕೀಯ ಗೊಂದಲವನ್ನು ಪರಿಹರಿಸಲು ಪ್ರಯತ್ನಿಸಬಹುದೇ ಎಂದು ದೇಶದ ಸರ್ವೋಚ್ಚ ನ್ಯಾಯಾಲಯವನ್ನು ಕೇಳಬಹುದೆಂಬ ಸುದ್ದಿಯೂ ಇದೆ.

ಅಂತೂ ಬಾಂಗ್ಲಾದೇಶದಲ್ಲಿ ರಾಜಕೀಯ ಶಾಂತಿ, ಸುವ್ಯವಸ್ಥೆ ಮತ್ತೆ ಎಂದು ನೆಲೆಗೊಂಡೀತು ಎಂದು ಕಾದು ನೋಡಬೇಕಾಗಿದೆ. ಈಗಾಗಲೇ ಕಳೆದ ಎರಡು ವರ್ಷಗಳಲ್ಲಿ ಈ 200ಕ್ಕೂ ಹೆಚ್ಚು ಮಂದಿ ಇದಕ್ಕೆ ಬಲಿಯಾಗಿದ್ದಾರೆ.

ಕರಾಚಿಯಲ್ಲಿ ಭುಟ್ಟೋ ಸರಕಾರದ 'ಭಯೋತ್ಪಾದನೆ'?

ಇದು ಪಾಕಿಸ್ತಾನದ ಸಿಂಧ್ ಪ್ರಾಂತ್ಯದಲ್ಲಿ ಮೊಹಾಜಿರ್ ಕೌಮಿ ಮೂವ್ ಮೆಂಟ್‌ನ ಆಪಾದನೆ. ಈ ಸಂಘಟನೆ(ಎಂಕ್ಯುಎಂ)ನ ಮುಖ್ಯಸ್ಥ ಅಲ್ತಾಫ್ ಹುಸೇನ್‌ರ 66 ವರ್ಷದ ಸೋದರ ಹಾಗೂ ಅಳಿಯನ ಕಣ್ಣಿಗೆ ಬಟ್ಟೆ ಕಟ್ಟಿ ಕೈಗಳನ್ನು ಹಿಂದಕ್ಕೆ ಕಟ್ಟಿಟ್ಟ ಹೆಣಗಳು ಕರಾಚಿಯ ಬೀದಿಯಲ್ಲಿ ಕಂಡು ಬಂದವು. ಈ ದೇಹಗಳ ಮೇಲೆ ಚಿತ್ರಹಿಂಸೆಯ ಗುರುತುಗಳೂ ಇದ್ದುವೆಂದು ಹೇಳಲಾಗಿದೆ. ಇದನ್ನು ಪ್ರತಿಭಟಿಸಿ ಕರಾಚಿಯಲ್ಲಿ ಮತ್ತೆ ಹಿಂಸಾಚಾರ ಭುಗಿಲೆದ್ದಿತು. "ವಿಶ್ವ ಸಂಸ್ಥೆ ತಕ್ಷಣ ಮಧ್ಯಪ್ರವೇಶಿಸಬೇಕು. ಪಾಕಿಸ್ತಾನದ ಪ್ರಧಾನ ಮಂತ್ರಿ ಬೆನಜೀರ್ ಭುಟ್ಟೋ ಮೊಹಾಜಿರ್ ಕೋಮಿನ ಜನರನ್ನು ನಾಶ ಮಾಡುವ ಪಣ ತೊಟ್ಟಂತಿದೆ. ವಿಶ್ವಸಂಸ್ಥೆಯು ಈ ಬಗ್ಗೆ ತನಿಖೆ ನಡೆಸಬೇಕು" ಎಂದು ಅಲ್ತಾಫ್ ಹುಸೇನ್ ಒತ್ತಾಯಿಸಿದ್ದಾರೆ. "ಇಡೀ ಪ್ರಜಾಪ್ರಭುತ್ವವಾದಿ ಜಗತ್ತು ಹಾಗೂ ಅಂತರ್ರಾಷ್ಟ್ರೀಯ ಮಾನವ ಹಕ್ಕು ಸಂಘಟನೆಗಳು ಒಂದು ಜನಾಂಗ ದ್ವೇಷೀ, ಫ್ಯಾಸಿಸ್ಟ್ ಸರಕಾರ ನಡೆಸಿರುವ ನರಸಂಹಾರದಿಂದ ಎಚ್ಚೆತ್ತುಕೊಳ್ಳಬೇಕು" ಎಂದು ಹೇಳಿರುವುದಾಗಿ ವರದಿಯಾಗಿದೆ.

ಕಳೆದ ಮೂರು ವರ್ಷಗಳಿಂದ ನಡೆಯುತ್ತಿರುವ ಕರಾಚಿಯ ಹಿಂಸಾಚಾರದಲ್ಲಿ ಹತ್ತು ಸಾವಿರಕ್ಕೂ ಹೆಚ್ಚು ಮಂದಿ ಸತ್ತಿದ್ದಾರೆ ಎಂದು ಸುದ್ದಿ ಸಂಸ್ಥೆಗಳು ತಿಳಿಸಿವೆ.

ಈಗಲೂ ಅಮೇರಿಕಾ ಅಪಾಯಕಾರಿ ಕ್ರಿಮಿನಾಶಕಗಳನ್ನು ಮಾರುತ್ತಿದೆ

ವಿಶ್ವದಲ್ಲೇ ಅತ್ಯಂತ ಅಪಾಯಕಾರಿ ಎಂದು ಸಾಬೀತಾದ ಹನ್ನೆರಡು ಕೃಷಿ-ರಾಸಾಯನಿಕಗಳ(ಕೀಟನಾಶಕಗಳ) ಒಂದು ಪಟ್ಟಿಯನ್ನು ತಯಾರಿಸಿ ಅವನ್ನು ಮಾರಾಟ ಮಾಡಬಾರದು ಎಂದು 1985ರಲ್ಲಿ ನಿಷೇಧಿಸಲಾಗಿತ್ತು. ಅಮೇರಿಕಾ ಮತ್ತಿತರ ಹಲವು ದೇಶಗಳಲ್ಲಿ ಈ ನಿರ್ಬಂಧ ಹಾಕಲಾಗಿದ್ದರೂ ಈಗಲೂ ಅಮೇರಿಕಾದ ಬಹುರಾಷ್ಟ್ರೀಯ ಕಂಪೆನಿಗಳು ಈ ಎಲ್ಲಾ ಕಾನೂನು-ನಿಬಂಧನೆಗಳನ್ನು ಉಲ್ಲಂಘಿಸಿ ಮೂರನೇ ಜಗತ್ತಿನ ದೇಶಗಳಿಗೆ ಇವನ್ನು ಮಾರುತ್ತಿದೆ ಎಂದು ಅಮೇರಿಕಾದ ಪರಿಸರ ಸಂಶೋಧನಾ ಸಂಘಟನೆಯೊಂದು ಆಪಾದಿಸಿದೆ.

ಈ ಕೀಟನಾಶಕಗಳು ಮನುಷ್ಯರ ಆರೋಗ್ಯಕ್ಕೆ ಬಹಳ ಹಾನಿಯುಂಟು ಮಾಡುತ್ತವೆ, ಪರಿಸರ ನಾಶಕ್ಕೂ ಕಾರಣವಾಗುತ್ತದೆ ಎಂಬ ಕಾರಣಕ್ಕಾಗಿ ಅವನ್ನು ನಿಷೇಧಿಸಲಾಗಿತ್ತು. ಆದರೆ 1991-94ರಲ್ಲಿ ಅಮೇರಿಕಾದ ಕಂಪನಿಗಳು ಹನ್ನೊಂದು ದೇಶಗಳಿಗೆ 5.8 ಕೋಟಿ ಪೌಂಡುಗಳಷ್ಟು ಈ ಕೀಟನಾಶಕಗಳನ್ನು ರಫ್ತು ಮಾಡಿವೆ ಎಂದು ಈ ಸಂಘಟನೆ ಪತ್ತೆ ಹಚ್ಚಿದೆ. ಅಮೇರಿಕಾ ಈ ಕೀಟನಾಶಕಗಳನ್ನು ನಿಷೇಧಿಸಿದ್ದರೂ ಅವುಗಳ ರಫ್ತನ್ನು ನಿಷೇಧಿಸಿಲ್ಲ! ಇದು ಅಮೇರಿಕನ್ ಸಾಮ್ರಾಜ್ಯಶಾಹಿ ಆಳರಸರ ಸ್ವಭಾವಕ್ಕೆ ಅನುಗುಣವಾದ ಒಂದು ಸಂಗತಿ. ಆದರೆ ಗಮನಿಸಬೇಕಾದ ಸಂಗತಿಯೆಂದರೆ ಇವುಗಳಲ್ಲಿ 1.1 ಕೋಟಿ ಪೌಂಡ್ ಕೀಟನಾಶಕಗಳು ರಫ್ತಾದ ದೇಶಗಳಲ್ಲೂ ಇವನ್ನು ನಿಷೇಧಿಸಲಾಗಿದೆ. ಇದರಲ್ಲಿ ಭಾರತವೂ ಸೇರಿದೆ.

ಬಾಂಗ್ಲಾ ದೇಶ್ ಕಾರ್ಮಿಕ ಪಕ್ಷದ 5ನೇ ಮಹಾಧಿವೇಶನ

ಬಾಂಗ್ಲಾದೇಶ್ ಕಾರ್ಮಿಕ ಪಕ್ಷದ 5ನೇ ಮಹಾಧಿವೇಶನ ಕಳೆದ ವಾರ ಢಾಕಾದಲ್ಲಿ ನಡೆಯಿತು. ಡಿಸೆಂಬರ್ 2ರಂದು ಒಂದು ಬೃಹತ್ ರ್‍ಯಾಲಿಯೊಂದಿಗೆ ಮಹಾಧಿವೇಶನ ಆರಂಭವಾಯಿತು. ಪಕ್ಷದ ಪ್ರಧಾನ ಕಾರ್ಯದರ್ಶಿ ರಶೀದ್ ಖಾನ್ ಮೆನೊನ್, ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯರಾದ ಸೀತಾರಾಂ ಯೆಚೂರಿ ಹಾಗೂ ಕೇಂದ್ರ ಸಮಿತಿ ಸದಸ್ಯ ಅನಿಲ್ ಬಿಸ್ವಾಸ್ ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡಿದರು. ಬಾಂಗ್ಲಾದೇಶ್ ಪಕ್ಷದ ಹಿರಿಯ ಮುಖಂಡ ಅಮಲ್ ಸೇನ್ ಕೆಂಬಾವುಟವನ್ನು ಹಾರಿಸಿದರು. ಅವರು ಆಸ್ಪತ್ರೆಯ ಹಾಸಿಗೆಯಿಂದ ನೇರವಾಗಿ ಬಂದು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯ ಜ್ಯೋತಿ ಬಸುರವರ ಶುಭಾಶಯ ಸಂದೇಶವನ್ನು ಹೈದರ್ ಅಕ್ಬರ್ ಖಾನ್ ರಾನೋ ಓದಿ ಹೇಳಿದರು. ಅವರು ತಮ್ಮ ಸಂದೇಶದಲ್ಲಿ ಎರಡು ದೇಶಗಳ ನಡುವಿನ ಜನರ ಐಕ್ಯತೆಯನ್ನು ಬೆಸೆಯುವ ಪ್ರಗತಿಪರ ಹಾಗೂ ಜಾತ್ಯಾತೀತ ಶಕ್ತಿಗಳು ಪ್ರತಿಗಾಮಿ ಶಕ್ತಿಗಳಿಂದ ಮತ್ತೆ ಮತ್ತೆ ಅಪಾರ ಕಷ್ಟನಷ್ಟ, ಕಿರುಕುಳ, ಚಿತ್ರಹಿಂಸೆಗಳನ್ನು ಎದುರಿಸಬೇಕಾಗಿ ಬಂದಿದೆ, ನೂರಾರು ಕಾರ್ಯಕರ್ತರನ್ನು ಅವರು ಬಲಿ ತೆಗೆದುಕೊಂಡಿದ್ದಾರೆ, ಆದರೂ ಪ್ರಗತಿ ಮತ್ತು ಸಮಾಜವಾದದ ಶಕ್ತಿಗಳು ಮುನ್ನಡೆದಿವೆ ಎಂದರು. ಬಾಂಗ್ಲಾ ದೇಶದಲ್ಲಿ ಎಡ ಶಕ್ತಿಗಳ ಐಕ್ಯತೆ ಸಾಮ್ರಾಜ್ಯಶಾಹಿ ತಂತ್ರಗಳ ವಿರುದ್ಧ ಹೋರಾಟವನ್ನು ಬಲಪಡಿಸುತ್ತದೆ, ಭಾರತ, ಬಾಂಗ್ಲಾ ದೇಶಗಳೆರಡರಲ್ಲೂ ನಾವೀಗ ಧಾರ್ಮಿಕ ಮೂಲಭೂತವಾದದ ವಿರುದ್ಧ ಹೋರಾಟದಲ್ಲಿ ತೊಡಗಿದ್ದೇವೆ. ಭಾರತದಲ್ಲಿ ನಾವು ಇತರ ಎಡ ಹಾಗೂ ಜಾತ್ಯಾತೀತ ಶಕ್ತಿಗಳೊಂದಿಗೆ ಜನರನ್ನು ಅಣಿನೆರೆಸಲು ಪ್ರಯತ್ನಿಸುತ್ತಿದ್ದೇವೆ" ಎಂದು ಜ್ಯೋತಿ ಬಸು ತಮ್ಮ ಸಂದೇಶದಲ್ಲಿ ಹೇಳಿದರು. ಸಾಮ್ರಾಜ್ಯಶಾಹಿಯೆಷ್ಟೇ ಪ್ರಚಾರ ನಡೆಸಿದರೂ ಬಂಡವಾಳಶಾಹಿ ಮಾನವ ಇತಿಹಾಸದ ಕೊನೆಯ ಘಟ್ಟವಲ್ಲ ಮಾನವ ವಿಮೋಚನೆಯ ದಾರಿ ಸಮಾಜವಾದದ ಮೂಲಕವೇ ಎಂದು ಜ್ಯೋತಿ ಬಸು ಹೇಳಿದರು.

ಸೀತಾರಾಂ ಯೆಚೂರಿ ತನ್ನ ಭಾಷಣದಲ್ಲಿ ಪೂರ್ವ ಯುರೋಪಿನ ಇತ್ತೀಚಿನ ಘಟನೆಗಳನ್ನು ವಿಶ್ಲೇಷಿಸುತ್ತಾ ಸಮಾಜವಾದೀ ಶಕ್ತಿಗಳು ಮತ್ತೆ ಮತ್ತೆ ಎದ್ದೇಳುತ್ತಿವೆ ಎಂದರು. ಅನಿಲ್ ಬಿಸ್ವಾಸ್ ಎರಡೂ ದೇಶಗಳ ಕಮ್ಯುನಿಸ್ಟ್ ಪರಂಪರೆ ಒಂದೇ, ಎರಡೂ ದೇಶಗಳಲ್ಲಿ ರೈತರ ಪ್ರಶ್ನೆ ಮೂಲಭೂತ ಪ್ರಶ್ನೆ ಎಂದರು.

ಬಾಂಗ್ಲಾ ದೇಶದಲ್ಲಿ ಬೂರ್ಝ್ವಾ ಪ್ರಜಾಪ್ರಭುತ್ವ ವಿಫಲಗೊಂಡಿದೆ. ಅದು ಬಹುಪಾಲು ಜನರ ಜೀವನ ಮಟ್ಟವನ್ನು ಸುಧಾರಿಸಿಲ್ಲ ಎಂದರು.



ಪ್ರಧಾನಮಂತ್ರಿ ಯುಪ್ಪೆಯವರ ಭೂತ ದಹನ ಮಾಡುತ್ತಿರುವ ಫ್ರೆಂಚ್ ಕಾರ್ಮಿಕರು.

ನಿಲ್ಲದ ಫ್ರೆಂಚ್ ದುಡಿಯುವ ಜನರ ಹೋರಾಟ

ನವಂಬರ್ 24ರಿಂದ ಆರಂಭವಾಗಿರುವ ಫ್ರೆಂಚ್ ಕಾರ್ಮಿಕರ ಪ್ರತಿಭಟನೆಗೆ ತಾನು ಸೊಪ್ಪು ಹಾಕುವುದಿಲ್ಲ, "ಸುಧಾರಣೆ" ಪ್ರಕ್ರಿಯೆ ಮುಂದುವರಿಸುತ್ತೇನೆ ಎಂದ ಫ್ರೆಂಚ್ ಬಲಪಂಥೀಯ ಸರಕಾರದ ಪ್ರಧಾನಿ ಏಲೈನ್ ಯುಪ್ಪೆ ಈ ಮುಷ್ಕರ ಜಗ್ಗದೆ ಮುಂದುವರಿಯುತ್ತಿರುವುದನ್ನು ಕಂಡು, ಹೆಚ್ಚೆಚ್ಚು ರೈಲು ಸಾರಿಗೆ ಕಾರ್ಮಿಕರು, ಇತರ ಸಾರ್ವಜನಿಕ ವಲಯದ ಕಾರ್ಮಿಕರು, ಲಾರಿ ಸಾಗಾಣಿಕೆ ಕಾರ್ಮಿಕರು ಹಾಗೂ ವಿದ್ಯಾರ್ಥಿಗಳು ಮುಷ್ಕರದಲ್ಲಿ ಪ್ರತಿಭಟನೆಗಳಲ್ಲಿ ಭಾಗವಹಿಸುತ್ತಿರುವುದನ್ನು ಕಂಡು ನಿರ್ವಾಹವಿಲ್ಲದೆ ಮುಷ್ಕರ ನಿರತ ಕಾರ್ಮಿಕರೊಂದಿಗೆ ಮಾತುಕತೆ ನಡೆಸಬೇಕಾಗಿ ಬಂದಿದೆ. ತನ್ನ 'ಸುಧಾರಣೆ'ಯಲ್ಲಿ ಫ್ರೆಂಚ್ ದುಡಿಯುವ ಜನರ, ಜನಸಾಮಾನ್ಯರ ಅಭಿಪ್ರಾಯಕ್ಕೆ ಸ್ಥಾನವೇ ಇಲ್ಲ ಎಂಬಂತೆ ನಡೆದುಕೊಂಡಿರುವ ಈತ ಈಗ ಬಗ್ಗಬೇಕಾಗಿ ಬಂದಿದೆ. ಏಕೆಂದರೆ ಈ ದೀರ್ಘ ಮುಷ್ಕರದಿಂದ ಬಳಕೆ ಖರ್ಚಿನ ಪ್ರಮಾಣ ಗಮನಾರ್ಹವಾಗಿ ಇಳಿದು ಸರಕು ಉತ್ಪಾದನೆಗೆ ಏಟು ಬೀಳುತ್ತಲಿದೆ. ಇದು ಕೈಗಾರಿಕಾ ಹಿಂಜರಿತದ ಅಪಾಯವನ್ನುಂಟು ಮಾಡಿದೆ. ಹಣಕಾಸು ಖೋತಾ ತಗ್ಗಿಸಲು ಕಲ್ಯಾಣ ಕ್ರಮಗಳಿಗೆ ಕತ್ತರಿ ಹಾಕುವ ನೀತಿ ಮುಂದುವರಿಸಿದರೆ ಅದರಿಂದ ಕೊರತೆ ಕಮ್ಮಿಯಾಗುವ ಬದಲು ಕೈಗಾರಿಕಾ ಹಿಂಜರಿತದಿಂದ ಅದು ಮತ್ತಷ್ಟು ಹೆಚ್ಚುವ ಭಯ ಫ್ರೆಂಚ್ ಆಳರಸರನ್ನು ಆವರಿಸಿದೆ. ನವಂಬರ್ 15ರಂದು ತನ್ನ 'ಸುಧಾರಣೆ'ಯನ್ನು ಆರಂಭಿಸಿದಾಗ ಪ್ರಧಾನಮಂತ್ರಿ ಯುಪ್ಪೆ "ಎರಡು ಮಿಲಿಯ ಜನ ಬೀದಿಗಿಳಿದರೆ ಸರಕಾರ ಬೀಳುತ್ತದೆ" ಎಂದು ತಮಾಷೆಯಾಗಿ ಹೇಳಿದ್ದರಂತೆ. ಅದು ಈಗ ನಿಜವಾಗಬಹುದು.

ಹತ್ತು ವರ್ಷಗಳಲ್ಲಿ 20 ಲಕ್ಷ ಮಕ್ಕಳ ಬಲಿ ತೆಗೆದುಕೊಂಡ ಆ ಯುದ್ಧಗಳು!

ವಿಶ್ವ ಸಂಸ್ಥೆಯ ಅಂಗ ಸಂಸ್ಥೆ ಯುನಿಸೆಫ್‌ನ ಒಂದು ವರದಿಯ ಪ್ರಕಾರ ಕಳೆದ ಒಂದು ದಶಕದಲ್ಲೇ ವಿಶ್ವಾದ್ಯಂತ ವಿವಿಧ ಯುದ್ಧ ಹಾಗೂ ಘರ್ಷಣೆಗಳಿಂದಾಗಿ ಸುಮಾರು ಇಪ್ಪತ್ತು ಲಕ್ಷ ಮಕ್ಕಳು ಸಾವಿಗೀಡಾಗಿದ್ದಾರೆ. 40-50 ಲಕ್ಷ ಮಕ್ಕಳು ಅಂಗವಿಕಲರಾಗಿದ್ದಾರೆ, 1.2 ಕೋಟಿ ಮಕ್ಕಳು ನಿರಾಶ್ರಿತರಾಗಿದ್ದಾರೆ. ಅಂದರೆ ಮಕ್ಕಳನ್ನು ತುಪಾಕಿಯ ಮದ್ದನ್ನಾಗಿ ಬಳಸಲಾಗುತ್ತಿದೆ ಎಂದು ಈ ವರದಿ ಖೇದ ವ್ಯಕ್ತಪಡಿಸಿದೆ. ಮಕ್ಕಳನ್ನು ಈಗ ಸೈನಿಕರಾಗಿಯೂ ಬಳಸಿಕೊಳ್ಳಲಾಗುತ್ತಿದೆ. 1988ರಲ್ಲಿ 25 ದೇಶಗಳಲ್ಲಿ 16 ವರ್ಷದ ಕೆಳಗಿನ ಎರಡು ಲಕ್ಷದಷ್ಟು ಮಕ್ಕಳನ್ನು ಸೈನಿಕರಾಗಿ ದುಡಿಸಿಕೊಳ್ಳಲಾಗುತ್ತಿತ್ತು, ಏಕೆಂದರೆ ಅವರನ್ನು ಹೆದರಿಸುವುದು ಸುಲಭ, ಅವರು ಹೇಳಿದಂತೆ ಮಾಡುತ್ತಾರೆ, ಓಡಿ ಹೋಗುವ, ಹೆಚ್ಚು ಸಂಬಳ ಕೇಳುವ ಸಂಭವ ಕಮ್ಮಿ ಮತ್ತು ಆಧುನಿಕ ಹಗುರ ಶಸ್ತ್ರಾಸ್ತ್ರಗಳಿಂದಾಗಿ ಅವರನ್ನು ಉತ್ತಮ ಕೊಲೆಗಾರರನ್ನಾಗಿ ಬಳಸಬಹುದು ಎಂದು ಈ ವರದಿ ಹೇಳಿದೆ.

KRNM/BGS-405 MAG (2) PRB DECR 319-79/79
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ. ರಾಮಚಂದ್ರರಾವ್
ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ ಸಂಪಂಗಿರಾಮನಗರ, ಬೆಂಗಳೂರು - 27
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ಸ್ ರಸ್ತೆ ಬೆಂಗಳೂರು
ಫೋನ್ ನಂ. 2236462

ಪೆನ್ಶನ್ ಯೋಜನೆಯ ಹೆಸರಲ್ಲಿ ವಂಚನೆಗೆ ಬಲವಾದ ಪ್ರತಿಭಟನೆ

ಸರಕಾರ ತರಬೇಕೆಂದಿರುವ ಪೆನ್ಶನ್ ಯೋಜನೆಯ ವಿರುದ್ಧ ದೇಶಾದ್ಯಂತ ಬೃಹತ್ ಕಾರ್ಮಿಕರ ಹೋರಾಟ ಆರಂಭವಾಗಿರುವುದರತ್ತ ಗಮನ ಸೆಳೆಯುತ್ತ ಸಿಐಟಿಯು ಪ್ರಧಾನ ಕಾರ್ಯದರ್ಶಿ ಡಾ.ಎಂ.ಕೆ.ಪಂಧೆ ಎಲ್ಲಾ ಸಂಘಟನೆಗಳಿಗೆ ಸೇರಿದ ಕಾರ್ಮಿಕರು ಇನ್ನೂ ದೊಡ್ಡ ಪ್ರತಿರೋಧ ಆಂದೋಲನ ಆರಂಭಿಸಿ ಕೇಂದ್ರ ಸರಕಾರ ಈ ಯೋಜನೆಯನ್ನು ಕಾರ್ಮಿಕರ ಮೇಲೆ ಏಕಪಕ್ಷೀಯವಾಗಿ ಹೇರದಂತೆ ನೋಡಿಕೊಳ್ಳಬೇಕು ಎಂದು ಕರೆ ನೀಡಿದ್ದಾರೆ.

ಡಿಸೆಂಬರ್ 5ರಂದು ನವದೆಹಲಿಯಲ್ಲಿ ಪತ್ರಿಕಾ ಸಮ್ಮೇಳನವೊಂದರಲ್ಲಿ ಮಾತನಾಡುತ್ತಾ ಅವರು ಈ ಪೆನ್ಶನ್ ಯೋಜನೆಯಲ್ಲಿನ ಮೂಲಭೂತ ಕುಂದು-ಕೊರತೆಗಳನ್ನು ಮತ್ತೊಮ್ಮೆ ಒತ್ತಿ ಹೇಳುತ್ತಾ ಸರಕಾರ "ಕಾರ್ಮಿಕ ಜನಸಮೂಹದಲ್ಲಿನ ಅಸಂತೃಪ್ತಿಯ ಆಳವನ್ನು ಅರಿತು ಅದನ್ನು ಪುನರ್‌ರಚಿಸಬೇಕು" ಎಂದು ಹೇಳಿದರು. ಸಂಸತ್ ಸದಸ್ಯರು ದೇಶಾದ್ಯಂತ ಲಕ್ಷಾಂತರ ಕಾರ್ಮಿಕರು ವ್ಯಕ್ತಪಡಿಸಿದ ಭಾವನೆಗಳಿಗೆ ಅನುಗುಣವಾಗಿ ಸರಕಾರ ಪ್ರಸಕ್ತ ಅಧಿವೇಶನದಲ್ಲಿ ಈ ಬಗ್ಗೆ ತರಲಿರುವ ಮಸೂದೆಯನ್ನು ವಿರೋಧಿಸಬೇಕು ಎಂದು ಡಾ.ಪಂಧೆ ಕರೆ ನೀಡಿದರು.

ರಾಷ್ಟ್ರಾದ್ಯಂತ ಹೋರಾಟ

ಮಹಾರಾಷ್ಟ್ರದಲ್ಲಿ ನವಂಬರ್ 14ರಂದು ಒಂದು ಲಕ್ಷ ಕಾರ್ಮಿಕರು ಮತಪ್ರದರ್ಶನ ನಡೆಸಿದರು. ಎರಡೇ ವಾರದೊಳಗೆ ಮತ್ತೆ ಡಿಸೆಂಬರ್ 1ರಂದು ಮುಂಬೈಯಲ್ಲಿ ಇನ್ನೊಂದು ಬೃಹತ್ ರ್‍ಯಾಲಿ ನಡೆಯಿತು. ಸಿಐಟಿಯು, ಯುಟಿಯುಸಿ, ಹೆಚ್‌ಎಂಕೆಪಿ, ದತ್ತಾ ಸಾಮಂತ್ ರ ಕಾಮಗಾರ್ ಆಘಾಡಿ, ಫಿಲಿಪ್ಸ್ ನೌಕರರ ಸಂಘ, ಸರ್ವಶ್ರಮಿಕ್ ಸಂಘ ಮತ್ತು ಹಲವು ಸ್ವತಂತ್ರ ಸಂಘಗಳು ಇದನ್ನು ಜಂಟಿಯಾಗಿ ನಡೆಸಿದವು. ಈ ರ್‍ಯಾಲಿಯ ಕರೆಯಂತೆ ಡಿಸೆಂಬರ್ 11ರಂದು ಮಹಾರಾಷ್ಟ್ರದಲ್ಲಿ ಕೈಗಾರಿಕಾ ಮುಷ್ಕರವೂ ಯಶಸ್ವಿಯಾಗಿ ನಡೆಯಿತು. ಎಐಟಿಯುಸಿ ಸಂಘಗಳು ಇದರಲ್ಲಿ ಭಾಗವಹಿಸದಿದ್ದರೂ ಮುಷ್ಕರ ಮುಂಬೈಯ ಉದ್ದಿಮೆರಂಗವನ್ನು ಮುಖ್ಯವಾಗಿ ಇಂಜಿನಿಯರಿಂಗ್ ಉದ್ದಿಮೆಯನ್ನು ಬಲವಾಗಿ ತಟ್ಟಿತು. ರಾಜ್ಯದ ಇತರೆಡೆಯೂ ಮುಷ್ಕರ ಯಶಸ್ವಿಯಾಗಿ ನಡೆಯಿತು.

ದಕ್ಷಿಣದ ವಿಶಾಖಪಟ್ಟಣ, ಮದ್ರಾಸ್, ತಿರುಚಿರಾಪಳ್ಳಿ, ಹೈದರಾಬಾದ್, ಬೆಂಗಳೂರು, ಕೊಚ್ಚಿ, ತಿರುವಂತನಪುರದಲ್ಲಿ, ಉತ್ತರದ ಝಾನ್ಸಿ, ಭೋಪಾಲ್, ಹರಿದ್ವಾರ, ಪೂರ್ವದ ಕಲ್ಕತ್ತ, ಭುವನೇಶ್ವರ, ರೂರ್ಕೆಲಾ, ಭಿಲಾಯ್‌ಗಳಲ್ಲಿ ಇತ್ತ ನಾಸಿಕ್, ಇಂದೋರ್, ಕಾನ್‌ಪುರ, ಲಕ್ನೋಗಳಲ್ಲಿ ಪ್ರತಿಭಟನೆಗಳು ನಡೆದವು.

ಹೊಸ ಪೆನ್ಶನ್ ಯೋಜನೆಯ ನಿಜರೂಪವನ್ನು ಬಿಚ್ಚಿಟ್ಟ ಡಾ.ಎಂ.ಕೆ. ಪಂಧೆಯವರ ಕಿರುಹೊತ್ತಿಗೆ ಇಂಗ್ಲಿಷ್ ಮತ್ತು ಇತರ ಭಾಷೆ ಗಳಲ್ಲಿ ಮುದ್ರಣಗೊಂಡಿದ್ದು ಹದಿನೈದು ದಿನಗಳೊಳಗೆ 2 ಲಕ್ಷ ಪ್ರತಿಗಳು ಮಾರಾಟವಾಗಿವೆ.

ಡಿಸೆಂಬರ್ 4ರಂದು ಪ್ರತಿಭಟನಾ ದಿನ

ಸಿಐಟಿಯು ಡಿಸೆಂಬರ್ 1ರಂದು ದೇಶಾದ್ಯಂತ ಪ್ರತಿಭಟನೆಗೆ ಕರೆ ನೀಡಿತ್ತು. ಮೂರೇ ದಿನಗಳೊಳಗೆ ಈ ಕರೆಗೆ ದೇಶಾದ್ಯಂತ ಕಾರ್ಮಿಕರು ಓಗೊಟ್ಟರು.

ದಿಲ್ಲಿಯಲ್ಲಿ ನೂರಾರು ಕಾರ್ಮಿಕರು ನಿಷೇಧಾಜ್ಞೆಗಳನ್ನು ಉಲ್ಲಂಘಿಸಿ ಕಾರ್ಮಿಕ ಮಂತ್ರಿಗಳ ನಿವಾಸದೆದುರು ಧರಣಿ ನಡೆಸಿದರು. ಪೋಲೀಸರ ಸರ್ಪಕಾವಲಿದ್ದರೂ ಧರಣಿ ನಾಲ್ಕು ಗಂಟೆಗಳ ಕಾಲ ನಡೆಯಿತು. ಸಂಸತ್ ಸದಸ್ಯ ಜೀವನ್ ರಾಯ್ ಮತ್ತಿತರ ಸಿಐಟಿಯು ಮುಖಂಡರು ಧರಣಿಕಾರರನ್ನುದ್ದೇಶಿಸಿ ಮಾತನಾಡಿದರು. ಕೊನೆಗೆ ಬಂಧನಕ್ಕೊಳಗಾದರು.

ಕಾನ್ಪುರದಲ್ಲಿ ಸಾವಿರಾರು ಕಾರ್ಮಿಕರು ಮೆರವಣಿಗೆ ನಡೆಸಿ ಲೇಬರ್ ಕಮೀಶನರ್‌ಗೆ ಮನವಿ ಪತ್ರ ಸಲ್ಲಿಸಿದರು. ಕೆಲವು ಕಾರ್ಖಾನೆಗಳ ಕಾರ್ಮಿಕರು ಎರಡು ಗಂಟೆ ಕೆಲಸ ನಿಲ್ಲಿಸಿ ಮೆರವಣಿಗೆಯಲ್ಲಿ ಭಾಗವಹಿಸಿದರು.

ಭುವನೇಶ್ವರದಲ್ಲಿ ಎಲ್ಲಾ ಕೈಗಾರಿಕಾ ಘಟಕಗಳಲ್ಲಿ, ಕಛೇರಿಗಳಲ್ಲಿ ಮತಪ್ರದರ್ಶನ ನಡೆಸಿದ ಕಾರ್ಮಿಕರು ನಂತರ ರಾಜ್ಯಪಾಲರ ಕಛೇರಿಗೆ ಮೆರವಣಿಗೆಯಲ್ಲಿ ಹೋಗಿ ಮನವಿ ಪತ್ರ ಸಲ್ಲಿಸಿದರು. ರೂರ್ಕೆಲಾ ಉಕ್ಕು ನಗರದಲ್ಲಿ ಉಕ್ಕು ಸ್ಥಾವರದ ಪ್ರವೇಶದ್ವಾರದಲ್ಲಿ ಕಾರ್ಮಿಕರು ದಿನಪೂರ್ತಿ ಧರಣಿ ನಡೆಸಿದರು. ಇದರಲ್ಲಿ ಸಿಐಟಿಯು ಅಲ್ಲದೆ ಇತರ ಸಂಘಟನೆಗಳ ಸದಸ್ಯರೂ ಭಾಗವಹಿಸಿದ್ದರು. ಹಲವು ಗಣಿ ಪ್ರದೇಶಗಳಿಂದಲೂ ಮತ ಪ್ರದರ್ಶನಗಳು ನಡೆದ ವರದಿಗಳು ಬಂದಿವೆ.

ವಿಶಾಖಪಟ್ಟಣದಲ್ಲಿ ಸುಮಾರಾಗಿ ಎಲ್ಲಾ ಕೈಗಾರಿಕಾ ಘಟಕಗಳ ಯೂನಿಯನ್ ಗಳು ಈ ಯೋಜನೆಯ ವಿರುದ್ಧ ಕಾರ್ಮಿಕ ಮಂತ್ರಿಗಳಿಗೆ ಟೆಲಿಗ್ರಾಂ ಕಳಿಸಿದವು. ಉಕ್ಕು ಸ್ಥಾವರ, ಹೆಚ್.ಎಸ್.ಸಿ.ಎಚ್. ಬಂದರು ಮತ್ತು ಹಡಗುಕಟ್ಟೆಗಳಲ್ಲಿ ಮತ ಪ್ರದರ್ಶನ ನಡೆದವು. ಅಲ್ಲೆಲ್ಲಾ ಬೃಹತ್ ಪ್ರಮಾಣದಲ್ಲಿ ಸಹಿ ಸಂಗ್ರಹ ಚಳುವಳಿ ನಡೆಯುತ್ತಿದೆ.

ತಮಿಳುನಾಡಿನಿಂದ ಬಂದ ವರದಿಗಳ ಪ್ರಕಾರ ಎಲ್ಲೆಡೆ ಬೃಹತ್ ಮತ ಪ್ರದರ್ಶನಗಳು ನಡೆದಿವೆ. ತಿರುಚಿರಾಪಳ್ಳಿ, ರಾಣಿಪೇಟ್, ಸೇಲಂ, ಕೊಯಮತ್ತೂರು, ತಿರುನಲ್ವೇಲಿಯಲ್ಲಿ ಮತ ಪ್ರದರ್ಶನಗಳು ನಡೆದವು. ಸಿಮೆಂಟ್, ಮೆಗ್ನಸೈಟ್, ಬಿಹೆಚ್‌ಇಎಲ್, ಉಕ್ಕು, ಇಂಜಿನಿಯರಿಂಗ್ ಮತ್ತಿತರ ಉದ್ದಿಮೆಗಳ ನೌಕರರು ಪಾಲ್ಗೊಂಡರು. ಡಿಸೆಂಬರ್ 11ರಂದು ಭವಿಷ್ಯನಿಧಿ ಕಮೀಶನರ್ ಕಚೇರಿಯೆದುರು ದೊಡ್ಡ ಮತಪ್ರದರ್ಶನ ನಡೆದಿದೆ.

ಕೇರಳದಲ್ಲಿ ತಿರುವನಂತಪುರ, ಕೊಚ್ಚಿ ಮತ್ತಿತರ ಕೇಂದ್ರಗಳಲ್ಲಿ ಪ್ರತಿಭಟನಾ ದಿನವನ್ನು ಆಚರಿಸಲಾಯಿತು. ರಾಜಸ್ಥಾನದಲ್ಲೂ ಹಲವು ಕೈಗಾರಿಕಾ ಘಟಕಗಳಲ್ಲಿ ಗೇಟ್ ಮೀಟಿಂಗ್‌ಗಳು, ಮತ ಪ್ರದರ್ಶನಗಳು ನಡೆದವು.

ಸಿಪಿಐ(ಎಂ) ನಿಯಮಿತವಾಗಿ ಲೆಕ್ಕ ಪತ್ರ ಸಲ್ಲಿಸುತ್ತಿದೆ

ಸುಪ್ರೀಂಕೋರ್ಟ್ ಎಲ್ಲಾ ರಾಷ್ಟ್ರೀಯ ಮಾನ್ಯತೆ ಪಡೆದ ರಾಜಕೀಯ ಪಕ್ಷಗಳೂ ಸೇರಿದಂತೆ 15 ಪಕ್ಷಗಳನ್ನು ಸರಿಯಾದ ಲೆಕ್ಕ ಪತ್ರ ಇಡುವ ಬಗ್ಗೆ ಹಾಗೂ ಆದಾಯ ತೆರಿಗೆ ಕಾನೂನಿನ ಪ್ರಕಾರ ಅದನ್ನು ಆದಾಯ ಕರ ಕಛೇರಿಗೆ ಸಲ್ಲಿಸುವ ಬಗ್ಗೆ ನೋಟೀಸು ಜ್ಯಾರಿ ಮಾಡಲು ನಿರ್ಧರಿಸಿದೆ. ಕಾನೂನಿನ ಪ್ರಕಾರ ರಾಜಕೀಯ ಪಕ್ಷಗಳು ಲೆಕ್ಕ ಪತ್ರ ಸಲ್ಲಿಸುತ್ತಿಲ್ಲ ಎಂದು ಒಂದು ಖಾಸಗೀ ಸ್ವಯಂ ಸೇವಾ ಸಂಸ್ಥೆ ಸಲ್ಲಿಸಿದ ಅರ್ಜಿಯ ಮೇರೆಗೆ ಈ ಕ್ರಮ ಕೈಗೊಳ್ಳಲಾಗಿದೆ.

ಈ ಬಗ್ಗೆ ಟಿಪ್ಪಣಿ ಮಾಡುತ್ತಾ ಸಿಪಿಐ(ಎಂ) ವಕ್ತಾರರು "ಈ ಅರ್ಜಿಯಲ್ಲಿ ಎಲ್ಲಾ ರಾಜಕೀಯ ಪಕ್ಷಗಳು ಕಾನೂನನ್ನು ಉಲ್ಲಂಘಿಸುತ್ತವೆ ಎಂದು ತಪ್ಪಾಗಿ ಹೇಳಲಾಗಿದೆ. ಸಿಪಿಐ(ಎಂ) ಕೇಂದ್ರ ಸಮಿತಿ ನಿಯಮಿತವಾಗಿ ತನ್ನ ಆಡಿಟ್ ಆದ ಲೆಕ್ಕ ಪತ್ರಗಳನ್ನು ಸಂಬಂಧಪಟ್ಟ ಆದಾಯಕರ ಇಲಾಖೆಗೆ ಸಲ್ಲಿಸುತ್ತಿದೆ. ಆದಾಯ ತೆರಿಗೆ ಕಾನೂನಿನಲ್ಲಿ ರಾಜಕೀಯ ಪಕ್ಷಗಳಿಗೆ ಅನ್ವಯವಾಗುವ ಅಂಶಗಳ ಪ್ರಕಾರ ಇದನ್ನು ಸಲ್ಲಿಸಲಾಗುತ್ತಿದೆ. 1994-95ರ ಹಣಕಾಸು ವರ್ಷದವರೆಗೂ ನಮ್ಮ ಪಕ್ಷ ಈ ಲೆಕ್ಕ-ಪತ್ರಗಳನ್ನು ಸಲ್ಲಿಸಿದೆ. ಸುಪ್ರೀಂಕೋರ್ಟ್ ಕೇಳಿದಾಗ ಇದಕ್ಕೆ ಸಂಬಂಧಪಟ್ಟ ಮಾಹಿತಿಗಳನ್ನು ನಮ್ಮ ಪಕ್ಷ ಸಲ್ಲಿಸುತ್ತಿದೆ" ಎಂದಿದ್ದಾರೆ.

"ರಾಜಕೀಯ ಪಕ್ಷಗಳಿಗೆ ಕಂಪನಿಗಳ ವಂತಿಗೆಗಳನ್ನು ಕುರಿತಂತೆ ಹೇಳುವುದಾದರೆ ನಮ್ಮ ಪಕ್ಷ ಕಾನೂನಿನಲ್ಲಿ ಇಂತಹ ಒಂದು ಅಂಶ ಇರುವುದನ್ನು ವಿರೋಧಿಸುತ್ತದೆ. ಕಂಪನಿಗಳ ನೀಡುವುದನ್ನು ವಂತಿಗೆಗಳನ್ನು ನಿರ್ಬಂಧಿಸಬೇಕು ಎಂದು ಸಿಪಿಐ(ಎಂ) ಅಭಿಪ್ರಾಯ" ಎಂದು ಮುಂದುವರೆದು ಸಿಪಿಐ(ಎಂ) ವಕ್ತಾರರು ತಿಳಿಸಿದ್ದಾರೆ.

ಜನತಾದಳ ಸರಕಾರದ ಒಂದು ವರ್ಷ

ಪುಟ 5ರಿಂದ

ಕೈಗೆತ್ತಿಕೊಳ್ಳಲು ಪ್ರಚಾರ ಮಾಡುತ್ತಿದೆ.

ಮೂರು, ಜನತಾದಳ ಸರಕಾರವು ತನ್ನ ಈ ಒಂದು ವರ್ಷದಲ್ಲಿ ತನ್ನ ಕೈಗಾರಿಕಾ ಧೋರಣೆ, ಕೃಷಿ ಧೋರಣೆ ಮತ್ತು ವಿದ್ಯುಚ್ಛಕ್ತಿ ಧೋರಣೆಗಳ ರೂಪುರೇಷೆಗಳನ್ನು ಹೆಚ್ಚು ಕಡಿಮೆ ತಮ್ಮ ಹೇಳಿಕೆಗಳ ಮೂಲಕ ಮತ್ತು ಅಧಿಕೃತ ಪ್ರಕಟಣೆಗಳ ಮೂಲಕ ಸ್ಪಷ್ಟಪಡಿಸಿದ್ದಾರೆ. ಇವನ್ನೆಲ್ಲಾ ಪರಿಶೀಲಿಸಿದಾಗ ಈ ಧೋರಣೆಗಳು ಕೇವಲ ನರಸಿಂಹರಾಯರ ನೂತನ ಆರ್ಥಿಕ ನೀತಿಯ ಪಡಿಯಚ್ಚುಗಳು ಆಗಿವೆಯಷ್ಟೇ. ಯಾವ ವಿಧದಲ್ಲೂ ಇವುಗಳಲ್ಲಿ ಪರ್ಯಾಯ ಜನಪರ ನೀತಿಗಳ ಛಾಯೆ ಕಾಣುತ್ತಿಲ್ಲ. ಇದು ನಮ್ಮ ಪಕ್ಷದ ಅಭಿಪ್ರಾಯ ಮಾತ್ರವಲ್ಲ ರಾಜ್ಯದ ಬೆಳವಣಿಗೆಗೆ ಸಾಧಕವಾಗುವ ಪರ್ಯಾಯ ಧೋರಣೆಗಳನ್ನು ಜನತಾದಳವು ಅಧಿಕಾರಕ್ಕೆ ಬಂದರೆ ಅನುಸರಿಸಬಹುದು ಎಂದು ಅಪೇಕ್ಷಿಸಿದ ಬುದ್ಧಿಜೀವಿಗಳ ಒಂದು ದೊಡ್ಡ ವಿಭಾಗದ ಅಭಿಪ್ರಾಯ ಹಾಗೂ ಜನಸಾಮಾನ್ಯರು ಈ ಧೋರಣೆಗಳಲ್ಲಿ ಕಾಂಗ್ರೆಸ್(ಐ) ಸರಕಾರಗಳ ಧೋರಣೆಗಳನ್ನು ಮುಂದುವರಿಸಿಕೊಂಡು ಹೋಗುವುದನ್ನು ಮಾತ್ರ ಕಾಣುತ್ತಿದ್ದಾರೆ.

ನಾಲ್ಕು, ಕರ್ನಾಟಕ ರಾಜ್ಯದಲ್ಲಿ ಹತ್ತಾರು ಕೈಗಾರಿಕೆಗಳು ಲಕ್ಷಾಂತರ ಕಾರ್ಮಿಕರಿಗೆ ಕನಿಷ್ಠ ಕೂಲಿಯನ್ನು ಸರಕಾರವು ನಿರ್ಧರಿಸಿ ಹಲವಾರು ವರ್ಷಗಳಾಗಿವೆ. ವೀರಪ್ಪ ಮೊಯಿಲಿ ಕಾಂಗ್ರೆಸ್(ಐ) ಸರಕಾರವು ಹಾಗೂ ದೇವೇಗೌಡರ ಜನತಾದಳದ ಸರಕಾರದ ಮೇಲೆ ಒತ್ತಡ ಹೇರುವ ಚಳುವಳಿಯನ್ನು ಸಿಐಟಿಯು ನೇತೃತ್ವದಲ್ಲಿ ಕಾರ್ಮಿಕರು ನಡೆಸುತ್ತಾ ಬಂದಿದ್ದಾರೆ. ಮೊಯಿಲಿ ಸರಕಾರವು ಭರವಸೆ ಕೊಟ್ಟರೂ ಮಾಡಲಿಲ್ಲ. ದೇವೇಗೌಡರ ಸರಕಾರದ ಕಾರ್ಮಿಕ ಮಂತ್ರಿಗಳು ಅಧಿಕಾರ ವಹಿಸಿದ ಮೊದಲನೇ ದಿನದಿಂದಲೂ ಈ ಕುರಿತು ಭರವಸೆ ಕೊಡುತ್ತಾ ಬಂದಿದ್ದರೂ ಈ ತನಕವೂ ಕನಿಷ್ಠ ಕೂಲಿ ಪುನರ್ವಿಮರ್ಶೆ ಮಾಡಿ ಗೆಜೆಟಿನಲ್ಲಿ ಪ್ರಕಟಿಸಲಿಲ್ಲ. ಕಾದು ಕಾದು ಕಾರ್ಮಿಕರು ಬೇಸತ್ತಿದ್ದಾರೆ. ಈ ವಿಷಯದಲ್ಲಿ ಸರಕಾರದ ಕಾರ್ಮಿಕ ವಿರೋಧಿ ನಿಲುಮೆ ಖಂಡನೀಯ.

ವಿಶೇಷವಾಗಿ ನಮಗೆ ಹೇಳಲಿಕ್ಕಿರುವುದು - ಜನತಾದಳ ಸರಕಾರವಾಗಲೀ ಅವರ ಪಕ್ಷವಾಗಲೀ ಅಧಿಕಾರಕ್ಕೆ ಬರುವ ಮೊದಲು ರಾಜ್ಯದ ಕಮ್ಯುನಿಸ್ಟ್ ಪಕ್ಷಗಳ ಜತೆ ಆಗಾಗ್ಗೆ ವಿಚಾರ ವಿನಿಮಯ ಮಾಡುತ್ತಿದ್ದಂತೆ ಅಧಿಕಾರಕ್ಕೆ ಬಂದ ಮೇಲೆ ಮಾಡುತ್ತಿಲ್ಲ ಎಂಬ ವಿಷಯ. ದೇವೇಗೌಡರು ಆಂಧ್ರಪ್ರದೇಶದಲ್ಲಿ ಎನ್.ಟಿ.ರಾಮರಾವ್ ಎಡಪಕ್ಷಗಳ ಜೊತೆ ಧೋರಣೆಗಳ ಕುರಿತು ಚರ್ಚಿಸುತ್ತಿರಲಿಲ್ಲವೋ ಅದೇ ರೀತಿಯಲ್ಲಿ ವರ್ತಿಸುತ್ತಿದ್ದಾರೆ ಎಂದು ಹೇಳಬೇಕಾಗಿದೆ. ಸ್ವಾಭಾವಿಕವಾಗಿ ಅವರ ಈ ವೈಯಕ್ತಿಕ ಕ್ರಮಗಳು ರಾಜ್ಯದ ಕಾಂಗ್ರೆಸ್(ಐ) ಪಕ್ಷಕ್ಕೆ ಮತ್ತು ಬಿಜೆಪಿಗೆ ಅವರ ಸರಕಾರದ ವಿರುದ್ಧ ಪ್ರಚಾರ ಮಾಡಲು ಇಂಬು ಕೊಡುತ್ತದೆ.

ಇನ್ನಾದರೂ ಆಂಧ್ರಪ್ರದೇಶದಲ್ಲಿ ಹೇಗೆ ಈಗಿನ ತೆಲುಗುದೇಶಂ ಸರಕಾರವು ಚಂದ್ರಬಾಬುನಾಯುಡು ನೇತೃತ್ವದಲ್ಲಿ ರಾಜ್ಯದ ಕಮ್ಯುನಿಸ್ಟ್ ಪಕ್ಷಗಳ ಜತೆ ಆಗಾಗ್ಗೆ ಚರ್ಚಿಸಿ ಧೋರಣೆಗಳನ್ನು ಕೈಗೊಳ್ಳುತ್ತದೋ ಅದೇ ರೀತಿಯಲ್ಲಿ ದೇವೇಗೌಡರ ಸರಕಾರವು ನಡೆದುಕೊಂಡರೆ ಆ ಸರಕಾರದ ಭವ್ಯತೆಗೂ ರಾಜ್ಯದ ಜನತೆಯ ಹಿತ ಸಾಧನೆಗೂ ದಾರಿಯಾಗುವುದು ಎಂಬುದು ನಮ್ಮ ಆಸೆಯಾಗಿದೆ.

ಒಟ್ಟಿನಲ್ಲಿ ಒಂದು ವರ್ಷದ ಜನತಾದಳ ಸರಕಾರದ ಆಡಳಿತೆ ಕೆಲವು ಸಾಧನೆಗಳನ್ನು ಮಾಡಿದೆ, ಹಲವಾರು ವಿಷಯಗಳಲ್ಲಿ ತೀರಾ ಜನ ವಿರೋಧಿ ಕ್ರಮಗಳನ್ನು ಅನುಸರಿಸಿ ವಿಫಲವಾಗಿದೆ ಎಂಬುದು ನಮ್ಮ ವಿಮರ್ಶೆ.

ಸುಪ್ರೀಂಕೋರ್ಟ್ ತೀರ್ಪು - ಕೆಲವು ಪ್ರತಿಕ್ರಿಯೆಗಳು

● 'ಹಿಂದುತ್ವ' ಎನ್ನುವುದನ್ನು ಕೇವಲ ಒಂದು ವಿಶಾಲ 'ತತ್ವ'ವಾಗಿ ನೋಡಲು ಸಾಧ್ಯವಿಲ್ಲ, ಏಕೆಂದರೆ ಅದನ್ನೀಗ ಸಂಘ ಪರಿವಾರ-ಶಿವಸೇನೆ ಒಂದು ರಾಜಕೀಯ 'ಸಿದ್ಧಾಂತ'ದ ಮಟ್ಟಕ್ಕೇರಿಸಿದ್ದಾರೆ ಎಂದಿದೆ 'ದಿ ಹಿಂದೂ' ಪತ್ರಿಕೆಯ ಸಂಪಾದಕೀಯ.

"..... ಜಾತ್ಯಾತೀತ ಆದರ್ಶವನ್ನು ಎತ್ತಿ ಹಿಡಿಯಲು ಬದ್ಧವೆಂದು ಸಾರಿದ ಮೇಲೆ ನ್ಯಾಯಪೀಠಕ್ಕೆ ಮನೋಹರ ಜೋಷಿಯವರ ವಾದಾಸ್ಪದ ಹೇಳಿಕೆಯಲ್ಲಿ ಆಕ್ಷೇಪಾರ್ಹವಾದುದೇನೂ ಏಕೆ ಕಾಣಲಿಲ್ಲ ಎಂದು ಅರ್ಥವಾಗುವುದಿಲ್ಲ......

....ಹಿಂದುತ್ವವನ್ನು ಒಂದು ರಾಜಕೀಯ ಆಟಿಕೆಯಾಗಿ ಅನ್ವಯಿಸುತ್ತಿರುವಾಗ, ಸಂಘ ಪರಿವಾರ ಶಿವಸೇನೆ ಅದನ್ನೀಗ ಅರೆ-ಫ್ಯಾಸಿಸ್ಟ್ ದನಿ ಹೊರಡಿಸುವ ಒಂದು 'ತತ್ವ-ಸಿದ್ಧಾಂತ'ದ ಮಟ್ಟಕ್ಕೇರಿಸಿರುವಾಗ ಅದು ಸುಪ್ರೀಂಕೋರ್ಟ್ ಹೇಳಿರುವ ಅರ್ಥಕ್ಕಿಂತ ಅಂದರೆ ಅದನ್ನು 'ಸಂಕುಚಿತ ಮೂಲಭೂತವಾದಿ ಹಿಂದೂ ಮತಾಂಧತೆ'ಯೊಂದಿಗೆ ಸಮೀಕರಿಸಲು ಸಾಧ್ಯವಿಲ್ಲ ಎಂಬ ಮಟ್ಟಕ್ಕಿಂತ ಬಹಳ ದೂರವಾಗಿ ಹೋಗಿದೆಯೆಂದೆನಿಸುತ್ತದೆ.

● 'ನಕಾರಾತ್ಮಕ ತೀರ್ಪು' ಎಂಬ ಶೀರ್ಷಿಕೆಯಡಿ ಸುಪ್ರೀಂಕೋರ್ಟಿನ ತೀರ್ಪು ಧರ್ಮವನ್ನು ಚುನಾವಣಾ ರಾಜಕೀಯದಿಂದ ದೂರವಿಡುವ ಪ್ರಯತ್ನಕ್ಕೆ ಒಂದು ಸಕಾರಾತ್ಮಕ ಕೊಡುಗೆಯೆಂದು ಹೇಳಲು ಸಾಧ್ಯವಿಲ್ಲ ಎಂದಿರುವ 'ಡೆಕ್ಕನ್ ಹೆರಾಲ್ಡ್' ಸಂಪಾದಕೀಯದ ಕೆಲವು ಮಾತುಗಳು

ಕ್ರಿಶ್ಚಿಯನ್, ಮುಸ್ಲಿಂ ಮತ್ತು ಇತರ ಕೋಮುಗಳನ್ನು ಪ್ರತಿನಿಧಿಸುವ ಪಕ್ಷಗಳೂ ಕೂಡಾ ತಮ್ಮ ವೇದಿಕೆ ಹಿಂದುತ್ವದ ವೇದಿಕೆಯಷ್ಟೇ ಕಾನೂನುಬದ್ಧ ಹಾಗೂ ನ್ಯಾಯಬದ್ಧ ಎನ್ನಲು ಸಾಧ್ಯವಿದೆ. ಆದರ್ಶದ ಮಟ್ಟದಲ್ಲಿ ಭಿನ್ನತೆಗಳನ್ನು ಮಂಕುಗೊಳಿಸಲು ಸುಲಭ. ಆದರೆ 'ಹಿಂದುತ್ವ'ದ ತಟಸ್ಥ ಹಾಗೂ ಸರ್ವವ್ಯಾಪಕ ಅರ್ಥದಲ್ಲಿ ಅದನ್ನು ಚುನಾವಣಾ ಪ್ರಚಾರದಲ್ಲಿ ಬಳಸಲಾಗುತ್ತಿಲ್ಲ ಎಂಬುದು ಎಲ್ಲರಿಗೂ ಗೊತ್ತು. ಇಂತಹ ವಿಶಾಲ ಅರ್ಥ ನಿರೂಪಣೆ ಕೊಡುವುದು ನಾವು ಪಡೆದಿರುವ ಒಂದು ಮಿಶ್ರ ಸಮಾಜದ ಸಮಗ್ರತೆ ಮತ್ತು ಸಾಮರಸ್ಯದ ಹಿತಾಸಕ್ತಿ ಕಾಪಾಡುವುದಿಲ್ಲ.

● 'ನಿರಾಶಾದಾಯಕ ತೀರ್ಪು' ಎಂಬ ಶೀರ್ಷಿಕೆಯಡಿಯಲ್ಲಿ 'ಇಕನಾಮಿಕ್ ಟೈಮ್ಸ್'ನ ಸಂಪಾದಕೀಯ ದೇಶದಲ್ಲಿ ಮೌಲ್ಯಗಳ ಹ್ರಾಸವನ್ನು ತಡೆಯಲು ಸುಪ್ರೀಂ ಕೋರ್ಟನ್ನು ಅವಲಂಬಿಸಿರುವವರಿಗೆ ಕೋಮುವಾದಿ ಚುನಾವಣಾಪ್ರಚಾರಕ್ಕೆ ಸಂಬಂಧಪಟ್ಟಂತೆ ಸುಪ್ರೀಂಕೋರ್ಟ್ ತೀರ್ಪು ವಿಪರೀತ ನಿರಾಸೆಯುಂಟುಮಾಡಿದೆ ಎಂದಿದೆ.

ನ್ಯಾಯಾಲಯದ ಸಮರ್ಥಕರು ಈ ತೀರ್ಪು ಕೋಮುವಾದದ ಬಗ್ಗೆ ಮೃದುವಾಗಿ ವರ್ತಿಸಿಲ್ಲ ಎಂದು ವಾದಿಸಬಹುದು. ಇದೊಂದು ಬಹಳ ವ್ಯಾಪಕ ಆಯಾಮಗಳಿರುವ ಒಂದು ಪ್ರಶ್ನೆಯನ್ನು ಕುರಿತಂತೆ ಅತ್ಯಂತ ಸಂಕುಚಿತ ದೃಷ್ಟಿಕೋನ. ಇತ್ತೀಚೆಗೆ ಸುಪ್ರೀಂಕೋರ್ಟ್ ನ್ಯಾಯಾಂಗ ಸಕ್ರಿಯತೆಯ ಒಂದು ಧೋರಣೆ ಅನುಸರಿಸುತ್ತಿದೆ. ಸಾಮಾಜಿಕ ನ್ಯಾಯ ಒದಗಿಸಲು ಹೊಸ ಕಾನೂನುಗಳನ್ನು ಹಾಗೂ ಹಕ್ಕುಗಳನ್ನು ಸೃಷ್ಟಿಸಿದೆ. ಏಕೆಂದರೆ ಪ್ರಭುತ್ವದ ಇತರ ಅಂಗಗಳು ನಾಗರಿಕರಿಗೆ ಸಲ್ಲಬೇಕಾದ್ದನ್ನು ನೀಡಿಲ್ಲವಾದ್ದರಿಂದ ತಾನು ಮಧ್ಯಪ್ರವೇಶಿಸಬೇಕೆಂದು ಅದು ಭಾವಿಸಿದೆ. ದುರದೃಷ್ಟವಶಾತ್ ಶಿವಸೇನೆಯ ವಿಷಯದಲ್ಲಿ ಅದು ಹಾಗೆ ಮಾಡಿಲ್ಲ.

● 'ಹಿಂದುತ್ವ'ದ ಪರಿಕಲ್ಪನೆಯ ಬಗ್ಗೆ ಸುಪ್ರೀಂ ಕೋರ್ಟ್ ಹೇಳಿದ್ದು ಸರಿ ಎಂದು ಹೇಳಿರುವ 'ಇಂಡಿಯನ್ ಎಕ್ಸ್‌ಪ್ರೆಸ್'('ಪ್ರಜಾವಾಣಿ' ಸಂಪಾದಕೀಯವೂ ಇದೇ ಅಭಿಪ್ರಾಯ ವ್ಯಕ್ತಪಡಿಸಿದೆ) ಕೂಡಾ ಮುಂದುವರಿದು ಹಿಂದುತ್ವ ಒಂದು ತಟಸ್ಥ ಪರಿಕಲ್ಪನೆಯಾದರೂ ಅಧಿಕಾರ ಗಿಟ್ಟಿಸ ಬಯಸುವ ರಾಜಕೀಯ ಶಕ್ತಿಗಳು ಅದನ್ನು ಹಾಗೆಯೇ ಬಳಸಿಲ್ಲ ಎಂದೂ ಒಪ್ಪಿಕೊಂಡಿದೆ.

ಶ್ರೀಯುತ ಜೋಷಿ ಮತ್ತು ಅವರ ಚುನಾವಣಾ ಏಜೆಂಟರು ಶ್ರೀ ಬಾಳಾಠಾಕ್ರೆ ಮತ್ತು ಬಿಜೆಪಿ ಮುಖಂಡ ಶ್ರೀ ಪ್ರಮೋದ್ ಮಹಾಜನ್‌ರ ಭಾಷಣಗಳ ವೀಡಿಯೋ ಕ್ಯಾಸೆಟ್‌ಗಳಿಂದ ತಮ್ಮನ್ನು ಪ್ರತ್ಯೇಕವಿರಿಸಿಕೊಂಡ ಬುದ್ಧಿಮತೆಯಿಂದಾಗಿ ಉಳಿದುಕೊಂಡಂತೆ ಕಾಣುತ್ತದೆ. ....

..... ಶ್ರೀ ರಮೇಶ್ ಪ್ರಭು ಇಷ್ಟು ಅದೃಷ್ಟವಂತರಿದ್ದಂತೆ ಕಾಣುವುದಿಲ್ಲ... ಆದ್ದರಿಂದ ಜೋಷಿಯವರಂತಾಗದೆ ಅವರು ಬೆಲೆ ತೆರಬೇಕಾಯಿತು.

● ಬಹಳಷ್ಟು ವಕೀಲರು ಕೂಡಾ ಈ ತೀರ್ಪಿನ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

❑ *"ಹಿಂದುತ್ವದ ಬೌದ್ಧಿಕ ಅರ್ಥವೇನೇ ಇರಲಿ. ಅದು ಅತ್ಯಂತ ವಂಚಕ ಚುನಾವಣಾ ಅರ್ಥ ಪಡೆದಿದೆ. ಈ ಚುನಾವಣಾ ಅರ್ಥ ಒಂದು ವಾಸ್ತವತೆಯಲ್ಲ ಎಂದು ಯಾವ ನ್ಯಾಯಾಲಯವೂ ನಟಿಸುವಂತಿಲ್ಲ. ಇಂದು ಜಾತ್ಯಾತೀತತೆಯ ದುರಂತವೇನೆಂದರೆ ಹಿಂದೂ ಧರ್ಮವನ್ನು ರಾಜಕೀಯವಾಗಿ ಅಸಹಿಷ್ಣುವಾದ ರೀತಿಯಲ್ಲಿ ಬಳಸುತ್ತಿರುವಾಗಲೂ ಹಿಂದೂ ಸಹಿಷ್ಣುತೆಯ ಆಲಾಪನೆ ಸಾಗಿಯೇ ಇದೆ"* ಎಂದಿದ್ದಾರೆ ಡಾ. ರಾಜೀವ್ ಧವನ.

❑ *"ಮಹಾರಾಷ್ಟ್ರದ ಮುಖ್ಯಮಂತ್ರಿ ಜೋಷಿ ಇಂದು ಈ ರೀತಿಯ ಹೇಳಿಕೆ ನೀಡಬಹುದಾದರೆ ನಾಳೆ ಇನ್ನೊಬ್ಬರು ಮುಸ್ಲಿಂ ಪ್ರಭುತ್ವ ಸ್ಥಾಪಿಸುತ್ತೇನೆನ್ನುವ ಹೇಳಿಕೆಯನ್ನು ನೀಡಬಹುದು. ಈ ತೀರ್ಪು ಹಿಂದಿನ ಒಂಭತ್ತು ನ್ಯಾಯಾಧೀಶರ ಪೀಠ ಪ್ರತಿಪಾದಿಸಿದ ಜಾತ್ಯಾತೀತತೆಯ ಪರಿಕಲ್ಪನೆಗೆ ವಿರುದ್ಧವಾಗಿದೆ"* ಎಂದು ಸುಪ್ರೀಂ ಕೋರ್ಟ್ ವಕೀಲ ಪಿ.ಪಿ. ರಾವ್ ಹೇಳುತ್ತಾರೆ.

❑ *"ಸುಪ್ರೀಂ ಕೋರ್ಟ್ ದುರುದ್ದೇಶದಿಂದ ಈ ತೀರ್ಪು ನೀಡಿರಲಿಕ್ಕಿಲ್ಲ. ಆದರೆ(ಶಿವಸೇನೆಯ ಮುಖಂಡರ) ಭಾಷಣಗಳನ್ನು ಕೇಳಿದ ಯಾರಿಗಾದರೂ ಅವು ಒಂದು ನಿರ್ದಿಷ್ಟ ಕೋಮಿನ ಮೇಲೆ ಗುರಿಯಿಟ್ಟ ಮಾತುಗಳು ಎಂದು ಸ್ಪಷ್ಟವಾಗಿ ಅನಿಸದಿರದು. ಒಂದು ಕೋಮನ್ನು 'ರಾಷ್ಟ್ರ-ವಿರೋಧಿ' ಎಂದು ವರ್ಣಿಸುವುದು ಆ ಕೋಮಿನ ವಿರುದ್ಧ ಅಪಪ್ರಚಾರವಲ್ಲವೇ? ಈ ಬಗ್ಗೆ ಕೆದಕಿ ಕೇಳಿದರೆ ಇದೇ ರಾಜಕಾರಣಿಗಳು ನಾವು ಆ ಕೋಮಿನಲ್ಲಿ ಪಾಕಿಸ್ತಾನ-ಪರವಾಗಿರುವವರ ಬಗ್ಗೆ ಹೇಳಿದ ಮಾತುಗಳಿವು ಎಂದರು. ಆದರೆ ಯಾರು ರಾಷ್ಟ್ರ-ವಿರೋಧಿಗಳು ಯಾರು ಅಲ್ಲ ಎಂದು ಸಾರ್ವಜನಿಕರು ತಿಳಿಯುವುದು ಹೇಗೆ? ಇದು ವೈಷಮ್ಯಕ್ಕೆ ದಾರಿ ಮಾಡಿಕೊಡುವುದಿಲ್ಲವೇ?'* ಎಂದು ಪ್ರಶ್ನಿಸುತ್ತಾರೆ ಪ್ರಖ್ಯಾತ ಬುದ್ಧಿಜೀವಿ ಅಸ್ಗರ್ ಅಲಿ ಇಂಜಿನಿಯರ್.



ಟೈಮ್ಸ್ ಆಫ್ ಇಂಡಿಯಾದಲ್ಲಿ ...